ಕರ್ನಾಟಕ ಸರ್ಕಾರ

## ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

# POCSO ಕಾಯಿದೆಯ ಅರಿವು ಕುರಿತ ಕೈಪಿಡಿ

(ವಿದ್ಯಾರ್ಥಿಗಳಿಗಾಗಿ)

## 2023–2024

ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
ಮತ್ತು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು



# ಸಂದೇಶ

ಸಶಕ್ತ ರಾಷ್ಟ್ರ ನಿರ್ಮಾಣಗೊಳ್ಳಲು ದೇಶದ ಪ್ರತಿ ಮಗುವಿನ ಆರೋಗ್ಯಕರ ಬೆಳವಣಿಗೆ ಅತ್ಯಗತ್ಯ. ಮಕ್ಕಳನ್ನು ಮಾನಸಿಕವಾಗಿ, ದೈಹಿಕವಾಗಿ ಸದೃಢರನ್ನಾಗಿಸಿ, ಅವರು ದೇಶದ ಸಂಪನ್ಮೂಲವಾಗಬೇಕೆಂಬುದು ಶಿಕ್ಷಣದ ಘನೋದ್ದೇಶವಾಗಿದೆ.

ಈ ಹಿನ್ನೆಲೆಯಲ್ಲಿ ಪ್ರತಿ ಮಗುವಿನ ಹಕ್ಕುಗಳ ರಕ್ಷಣೆ, ಮಕ್ಕಳ ಹಕ್ಕುಗಳನ್ನು ಗೌರವಿಸುವಂತಹ ಪರಿಸರ ನಿರ್ಮಾಣ ಹಾಗೂ ಮಕ್ಕಳಿಗೆ ಅಗತ್ಯವಾದ ಸುರಕ್ಷಿತ ವಾತಾವರಣ ಸೃಷ್ಟಿಸಿ, ರಕ್ಷಣೆ ನೀಡಬೇಕಾದ ಗುರುತರ ಜವಾಬ್ದಾರಿ ನಮ್ಮದಾಗಿದೆ.

ಈ ನಿಟ್ಟಿನಲ್ಲಿ 18 ವರ್ಷದೊಳಗಿನ ಮಕ್ಕಳ ಮೇಲೆ ಉಂಟಾಗುವ ಲೈಂಗಿಕ ದೌರ್ಜನ್ಯಗಳು, ಕಿರುಕುಳ, ಅತ್ಯಾಚಾರಗಳಂತಹ ದುರ್ಘಟನೆಗಳನ್ನು ತಡೆಗಟ್ಟಲು ಹಾಗೂ ಮಕ್ಕಳಿಗೆ ರಕ್ಷಣೆ, ಭದ್ರತೆ ಮತ್ತು ನ್ಯಾಯ ಒದಗಿಸುವುದರ ಜೊತೆಗೆ ಅವರ ಆಸಕ್ತಿ ಮತ್ತು ಹಿತ ಕಾಪಾಡುವ ಉದ್ದೇಶಗಳನ್ನು ಇರಿಸಿಕೊಂಡು ಜಾರಿಗೆ ತರಲಾಗಿರುವ POCSO ಕಾಯಿದೆ – 2012 ಕುರಿತಾಗಿ ಕಾನೂನಿನ ಅರಿವನ್ನು ಪ್ರೌಢಶಾಲಾ ಮತ್ತು ಪದವಿ ಪೂರ್ವ ಹಂತದ ವಿದ್ಯಾರ್ಥಿಗಳಿಗೆ ನೀಡಲು ಕರ್ನಾಟಕ ನ್ಯಾಯಾಂಗ, ಶಾಲಾ ಶಿಕ್ಷಣ ಇಲಾಖೆಗೆ ನೀಡಿರುವ ನಿರ್ದೇಶನದಂತೆ ರಚಿಸಲಾಗಿರುವ ಈ ಕೈಪಿಡಿಯನ್ನು ಬಳಸಿಕೊಳ್ಳುವ ಮೂಲಕ ಪ್ರತಿ ಮಗು ಆರೋಗ್ಯಕರವಾಗಿ ವಿಕಾಸ ಹೊಂದಲು ಸಾಧ್ಯವಾಗಲಿದೆಯೆಂದು ಆಶಿಸುತ್ತೇನೆ.

(ರಿತೇಶ್‌ಕುಮಾರ್ ಸಿಂಗ್, ಭಾ.ಆ.ಸೇ.)
ಪ್ರಧಾನ ಕಾರ್ಯದರ್ಶಿಗಳು,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

# ಆಶಯ ನುಡಿ

**ಮಕ್ಕಳ ಹಕ್ಕು, ರಕ್ಷಣೆ ನಮ್ಮೆಲ್ಲರ ಹೊಣೆ.** ಆದ್ದರಿಂದ ಪ್ರತಿಯೊಂದು ಮಗುವು ಎಲ್ಲಾ ರೀತಿಯ ಹಿಂಸೆ, ನಿರ್ಲಕ್ಷ್ಯ ಮತ್ತು ಶೋಷಣೆಯಿಂದ ರಕ್ಷಣೆ ಮತ್ತು ಸುರಕ್ಷತೆಯನ್ನು ಹೊಂದುವಂತಹ ವಾತಾವರಣವನ್ನು ಕಲ್ಪಿಸುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ.

18 ವರ್ಷದೊಳಗಿನ ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಗಳು, ಮಾನಸಿಕ ಮತ್ತು ದೈಹಿಕ ಕಿರುಕುಳ, ಅತ್ಯಾಚಾರಗಳಂತಹ ದುರ್ಘಟನೆಗಳನ್ನು ತಡೆಗಟ್ಟಿ ಮಕ್ಕಳಿಗೆ ರಕ್ಷಣೆ, ಭದ್ರತೆ ಹಾಗೂ ನ್ಯಾಯ ಒದಗಿಸುವ ಉದ್ದೇಶದಿಂದ POCSO ಕಾಯಿದೆ–2012 ನ್ನು ಭಾರತ ಸರ್ಕಾರವು ಜಾರಿಗೆ ತಂದಿದೆ. ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ POCSO ಕಾಯಿದೆ ಕಾನೂನಿನ ಅರಿವು ಮೂಡಿಸುವ ಸಂಬಂಧ ಈ ಕೈಪಿಡಿಯನ್ನು ಸಿದ್ಧಪಡಿಸಲಾಗಿದೆ.

ರಾಜ್ಯದ ಎಲ್ಲಾ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿ – 2016 ನ್ನು ಅನುಷ್ಠಾನಗೊಳಿಸಲು POCSO ಕಾಯಿದೆಯ ಕಾನೂನಿನ ಅರಿವನ್ನು ಶಾಲಾ/ಸಂಸ್ಥೆಗಳ ಮುಖ್ಯಸ್ಥರು, ಶಿಕ್ಷಕರು ಮತ್ತು ಸಿಬ್ಬಂದಿಗಳು ಹೊಂದುವುದು ಪ್ರಮುಖವಾಗಿದೆ. ಈ ನಿಟ್ಟಿನಲ್ಲಿ ಮಕ್ಕಳ ರಕ್ಷಣಾ ನೀತಿ–2016 ಹಾಗೂ ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸಲಾಗಿರುವ ಎಲ್ಲಾ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ಶಾಲೆಗಳಲ್ಲಿ ಅನುಪಾಲನೆ ಮಾಡುವುದು ಅತ್ಯಂತ ಅಪೇಕ್ಷಣೀಯ.

ಈ ಕಾಯಿದೆಯನ್ನು ಸಮಗ್ರವಾಗಿ ಅರಿತುಕೊಂಡು ಶಾಲೆಗಳಲ್ಲಿ ಅಳವಡಿಸಿಕೊಳ್ಳುವುದರ ಮೂಲಕ, ಮಕ್ಕಳ ರಕ್ಷಣಾ ನೀತಿಗೆ ಪೂರಕವಾಗಿ ರಚಿಸಲಾಗಿರುವ ಈ ಕೈಪಿಡಿಯು ಮಕ್ಕಳ ರಕ್ಷಣೆಗೆ ಉಪಯುಕ್ತವಾಗಲೆಂದು ಆಶಿಸುತ್ತೇನೆ.

(ಬಿ.ಬಿ. ಕಾವೇರಿ, ಭಾ.ಆ.ಸೇ.)
ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು

# ಮುನ್ನುಡಿ

ರಾಜ್ಯದಲ್ಲಿನ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ 9ನೇ ತರಗತಿಯ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ POCSO ಕಾಯಿದೆ ಕಾನೂನಿನ ಕುರಿತು ಅರಿವು ಮೂಡಿಸುವ ಅಗತ್ಯವಿದ್ದು, ಈ ಸಂಬಂಧ ರಾಜ್ಯ ಹಂತದಲ್ಲಿ ಸಮಿತಿ ರಚಿಸಿ, ಸಾಹಿತ್ಯ ರಚನೆ ಮಾಡಿ ಸಂಬಂಧಿಸಿದ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು, ಶಾಲಾ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯವರಿಗೆ ಅಗತ್ಯ ಮಾಹಿತಿ ಹಾಗೂ ಮಾರ್ಗದರ್ಶನ ನೀಡಲು ಉದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ POCSO ಕಾಯಿದೆ ಕುರಿತು ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು, ಶಾಲಾ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯವರಿಗೆ ಜಾಗೃತಿ ಕೈಪಿಡಿಗಳನ್ನು DSERT ವತಿಯಿಂದ ರಚಿಸಲಾಗಿರುತ್ತದೆ. ಈ ಕೈಪಿಡಿಗಳಲ್ಲಿ ಮಕ್ಕಳ ಮೇಲಾಗುವ ಶೋಷಣೆ, ಶೋಷಣೆಯಿಂದಾಗುವ ಪರಿಣಾಮಗಳು, POCSO ಕಾಯಿದೆಯ ಹಿನ್ನೆಲೆ, ಕಾಯಿದೆ ನಿಗದಿಪಡಿಸಿರುವ ಅಪರಾಧಗಳು ಮತ್ತು ಶಿಕ್ಷೆ, ಮಕ್ಕಳ ರಕ್ಷಣೆಗೆ ಇರುವ ವ್ಯವಸ್ಥೆಗಳು, ಶಿಕ್ಷಕರು ಹಾಗೂ ಪೋಷಕರು ನಿರ್ವಹಿಸಬೇಕಾದ ಜವಾಬ್ದಾರಿಗಳು ಇತ್ಯಾದಿ ಮಾಹಿತಿಯನ್ನು ನೀಡಲಾಗಿದೆ.

ಸದರಿ ಸಾಹಿತ್ಯವನ್ನು ಜಿಲ್ಲೆ, ತಾಲ್ಲೂಕು ಹಾಗೂ ಶಾಲಾ ಕಾಲೇಜುಗಳ ಹಂತದಲ್ಲಿ ಬಳಸಿಕೊಂಡು POCSO ಕಾಯಿದೆಯ ಬಗ್ಗೆ ಎಲ್ಲರಲ್ಲಿಯೂ ಅರಿವು ಮೂಡಿಸಿ, ಆ ಮೂಲಕ ಮಕ್ಕಳ ರಕ್ಷಣೆ ಮಾಡುವ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ಆಶಿಸುತ್ತೇನೆ.

**ರಮೇಶ್. ಕೆ.ಎನ್.,** ಭಾ.ಆ.ಸೇ.
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

# ಶುಭ ಹಾರೈಕೆ

**"ಮಕ್ಕಳು ದೇಶದ ಆಸ್ತಿ ಹಾಗೂ ಅಮೂಲ್ಯ ಸಂಪತ್ತು"**. ಅವರ ಪಾಲನೆ ಹಾಗೂ ಪೋಷಣೆಯೊಂದಿಗೆ ರಕ್ಷಣೆ ಒದಗಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಈ ನಿಟ್ಟಿನಲ್ಲಿ ಮಕ್ಕಳ ಹಕ್ಕುಗಳ ಕಾಯ್ದೆ–2009ನ್ನು ಜಾರಿಗೆ ತರಲಾಗಿದ್ದು, ಎಲ್ಲಾ ಮಕ್ಕಳಿಗೆ ಶಿಕ್ಷಣ, ಆರೋಗ್ಯ, ಭದ್ರತೆ ಮತ್ತು ಸಾಮಾಜಿಕ ನ್ಯಾಯ ಒದಗಿಸಲು ಮಕ್ಕಳ ರಕ್ಷಣಾ ನೀತಿ–2016ನ್ನು ಜಾರಿಗೊಳಿಸಿ ಅದರಂತೆ ರಾಜ್ಯಾದ್ಯಂತ ಎಲ್ಲಾ ಶಾಲೆಗಳಲ್ಲಿ **'ಮಕ್ಕಳ ರಕ್ಷಣಾ ಸಮಿತಿ'** ರಚಿಸಿ  ಅನುಷ್ಠಾನಿಸಲು ನಿರಂತರ ಮಾರ್ಗದರ್ಶನ ನೀಡಲಾಗುತ್ತಿದೆ.

POCSO ಕಾಯಿದೆ–2012 ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಮಹತ್ವದ್ದಾಗಿದೆ. ಮಕ್ಕಳ ನ್ಯಾಯ ಕಾಯಿದೆ–2015 (ತಿದ್ದುಪಡಿ 2021) ರಂತೆ ಮಕ್ಕಳ ಅಭಿಪ್ರಾಯಕ್ಕೆ ಗೌರವ, ಮಕ್ಕಳ ಜವಾಬ್ದಾರಿ ಕುಟುಂಬಗಳದ್ದು ಹಾಗೂ ಮಕ್ಕಳನ್ನು ಸಂರಕ್ಷಿಸುವ ಹೊಣೆ ಎಲ್ಲರದ್ದಾಗಿದೆ. ಈ ಎಲ್ಲಾ ಕಾಯಿದೆಗಳ ಮೂಲ ಆಶಯ ಮಕ್ಕಳಿಗೆ ಸೂಕ್ತ ರಕ್ಷಣೆಯನ್ನು ಒದಗಿಸಿ, ಅವರ ಸರ್ವಾಂಗೀಣ ಪ್ರಗತಿಯನ್ನು ಸಾಧಿಸುವುದು ಇಲಾಖೆಯ ಉದ್ದೇಶವಾಗಿದೆ.

ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಹಂತದ ಕಾಲೇಜು ವಿದ್ಯಾರ್ಥಿಗಳಿಗೆ ಲೈಂಗಿಕ ಶೋಷಣೆಯ ವಿರುದ್ಧದ ವಿಚಾರಗಳು, ಅದಕ್ಕೆ ಸಂಬಂಧಿಸಿದ ಕಾಯಿದೆ–ಕಾನೂನಿನ ಮಾಹಿತಿ ಹಾಗೂ ಈ ಕುರಿತಾಗಿ ಜಾಗೃತವಾಗಿರುವ ರಕ್ಷಣಾ ವ್ಯವಸ್ಥೆಗಳ ಕುರಿತು ನ್ಯಾಯಾಲಯದ ನಿರ್ದೇಶನದಂತೆ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಅರಿವು ಮೂಡಿಸಲು ಪ್ರತ್ಯೇಕವಾದ ಕೈಪಿಡಿಗಳನ್ನು, ಪೋಷಕರು ಮತ್ತು ಸಮುದಾಯದವರಿಗೆ ಅರಿವು ಮೂಡಿಸಲು ಭಿತ್ತಿಪತ್ರವನ್ನು (POSTER) DSERT ವತಿಯಿಂದ ಸಿದ್ಧಪಡಿಸಲಾಗಿದೆ.

ಸದರಿ ಮಾಡ್ಯೂಲ್‌ಗಳಲ್ಲಿನ ಮಾಹಿತಿಯನ್ನು ಅರ್ಥೈಸಿಕೊಂಡು ಮಕ್ಕಳು ಲೈಂಗಿಕ ಶೋಷಣೆಗಳಿಂದ ಮುಕ್ತರಾಗಲು ಅನುವಾಗುವಂತಹ ಶಿಶುಸ್ನೇಹಿ ವಾತಾವರಣವನ್ನು ಕಲ್ಪಿಸುತ್ತೀರೆಂದು ಆಶಿಸುತ್ತೇನೆ.

ಶ್ರೀಮತಿ ಸುಮಂಗಲ ವಿ.
ನಿರ್ದೇಶಕರು
ಡಿ.ಎಸ್.ಇ.ಆರ್.ಟಿ.

## ಪರಿಕಲ್ಪನೆ ಮತ್ತು ಮಾರ್ಗದರ್ಶನ

**ಶ್ರೀ ರಿತೇಶ್‌ಕುಮಾರ್ ಸಿಂಗ್,** ಭಾ.ಆ.ಸೇ
ಪ್ರಧಾನ ಕಾರ್ಯದರ್ಶಿಗಳು.
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

**ಶ್ರೀಮತಿ ಕಾವೇರಿ ಬಿ.ಬಿ.,** ಭಾ.ಆ.ಸೇ
ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ

**ಶ್ರೀ ರಮೇಶ್. ಕೆ.ಎನ್.,** ಭಾ.ಆ.ಸೇ
ರಾಜ್ಯ ಯೋಜನಾ ನಿರ್ದೇಶಕರು.
ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು

**ಶ್ರೀ ಮಾರುತಿ ಎಂ.ಆರ್.**
ನಿರ್ದೇಶಕರು.
ಸಮಗ್ರ ಶಿಕ್ಷಣ ಕರ್ನಾಟಕ,

**ಶ್ರೀಮತಿ ಸುಮಂಗಲ. ಎ.**
ನಿರ್ದೇಶಕರು.
ಡಿ.ಎಸ್.ಇ.ಆರ್.ಟಿ ಬೆಂಗಳೂರು

### ನಿರ್ವಹಣೆ

**ಶ್ರೀಮತಿ ರಾಧಾ. ಪಿ.**
ಹಿರಿಯ ಸಹಾಯಕ ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ., ಬೆಂಗಳೂರು

**ಶ್ರೀಮತಿ ವಾಣಿ. ಆರ್.ಕೆ.**
ಉಪನ್ಯಾಸಕರು.
ಡಯಟ್, ಬೆಂಗಳೂರು ನಗರ ಜಿಲ್ಲೆ

## ಸಾಹಿತ್ಯ ರಚನಾ ತಂಡ

| | |
|---|---|
| **ಡಾ. ವಾಸುದೇವ ಶರ್ಮಾ, ಎನ್.ವಿ** ಅಧ್ಯಕ್ಷರು<br>ಕಾರ್ಯಾಕಾರಿ ನಿರ್ದೇಶಕರು,<br>Child Rights Trust, Bangalore | **ಡಾ. ತಿಪ್ಪೇಸ್ವಾಮಿ. ಕೆ.ಟಿ** ಸದಸ್ಯರು<br>ಸದಸ್ಯರು,<br>ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ |
| **ಶ್ರೀ ಪುಟ್ಟಸ್ವಾಮಿಗೌಡ** ಸದಸ್ಯರು<br>Additional Commissioner of Police<br>City Crime Branch,Banglore | **ಶ್ರೀಮತಿ ನಾಗಮಣಿ. ಸಿ.ಎನ್** ಸದಸ್ಯರು<br>Child Rights Trust, Bangalore |
| **ಶ್ರೀಮತಿ ನಾಗರತ್ನ. ಆರ್.** ಸದಸ್ಯರು<br>ಅಧ್ಯಕ್ಷರು,<br>ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ಬೆಂಗಳೂರು | **ಡಾ. ಕೊಣಲ ರಾಘವೇಂದ್ರ ಭಟ್** ಸದಸ್ಯರು<br>ಪ್ರಾದೇಶಿಕ ಸಂಯೋಜಕರು,<br>ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ,<br>ಜಿಲ್ಲಾಧಿಕಾರಿಗಳ ಕಛೇರಿ, ಕೊಪ್ಪಳ |
| **ಶ್ರೀ ರುದ್ರೇಶಯ್ಯ. ಜಿ.ಎಂ.** ಸದಸ್ಯರು<br>ಉಪನ್ಯಾಸಕರು,<br>KPS ಅತ್ತಿಗುಪ್ಪೆ, ವಿಜಯನಗರ, ಬೆಂಗಳೂರು | **ಶ್ರೀಮತಿ ಯಶೋಧ** ಸದಸ್ಯರು<br>ಸಹಶಿಕ್ಷಕರು,<br>ಸ.ಹಿ.ಪ್ರಾ.ಶಾಲೆ, ಇಟ್ಟಮಡು,<br>ದಕ್ಷಿಣ ವಲಯ-1 ಬೆಂಗಳೂರು |
| **ಶ್ರೀ ರಾಘವೇಂದ್ರ. ವಿ.** ಸದಸ್ಯರು<br>ಉಪನ್ಯಾಸಕರು,<br>KPS ಅತ್ತಿಗುಪ್ಪೆ, ವಿಜಯನಗರ, ಬೆಂಗಳೂರು | **ಡಾ. ನಾಗಮ್ಮ** ಸದಸ್ಯರು<br>ಸಹಶಿಕ್ಷಕರು,<br>ಸ.ಹಿ.ಪ್ರಾ.ಶಾಲೆ, ಹೊಸಕೆರೆಹಳ್ಳಿ,<br>ದಕ್ಷಿಣ ವಲಯ-1 ಬೆಂಗಳೂರು |
| **ಶ್ರೀಮತಿ ವೈಷ್ಣವಿ ಜೋಶಿ** ಸದಸ್ಯರು<br>ಸಂಪನ್ಮೂಲ ವ್ಯಕ್ತಿಗಳು,<br>ಅಜೀಂ ಪ್ರೇಂಜೀ ಫೌಂಡೇಶನ್, ಹೊಸಪೇಟೆ | **ಶ್ರೀ ಶಿವಕುಮಾರ್. ಎಸ್.** ಸದಸ್ಯರು<br>ಚಿತ್ರಕಲಾ ಶಿಕ್ಷಕರು<br>KPS ಅತ್ತಿಗುಪ್ಪೆ, ವಿಜಯನಗರ, ಬೆಂಗಳೂರು |

## ಸಾಹಿತ್ಯ ಪರಿಶೀಲನಾ ತಂಡ

| | |
|---|---|
| **ಡಾ. ಚಂದ್ರಶೇಖರ್. ಹೆಚ್.ಬಿ.**<br>ಹಿರಿಯ ಉಪನ್ಯಾಸಕರು<br>ಡಯಟ್, ಬೆಂಗಳೂರುನಗರ | **ಡಾ. ಚಂದ್ರಶೇಖರ್. ಜಿ.ಆರ್**<br>ಉಪನ್ಯಾಸಕರು<br>ಡಯಟ್, ಮಂಡ್ಯ |

# ಈ ಕೈಪಿಡಿ ತೆರೆಯುವ ಮುನ್ನ..

ಇಂದಿನ ದಿನಗಳಲ್ಲಿ ಮಕ್ಕಳು ವಿವಿಧ ಕಾರಣಗಳಿಂದ ತಮ್ಮ ಜೊತೆಗಿನ ಮತ್ತು ಅಪರಿಚಿತ ಮಕ್ಕಳನ್ನು, ವಯಸ್ಕರನ್ನು ಭೇಟಿ ಮಾಡಲೇಬೇಕಾಗುತ್ತದೆ, ಸಂಪರ್ಕಿಸಬೇಕಾಗುತ್ತದ. ಶಾಲಾಕಾಲೇಜುಗಳಲ್ಲಿ ಅಭ್ಯಾಸ ಮಾಡಬೇಕಾಗುತ್ತದೆ. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ, ಆಟೋಟಗಳಲ್ಲಿ ಭಾಗಿಯಾಗಬೇಕಾಗುತ್ತದೆ, ಪ್ರವಾಸ ಹೋಗಬೇಕಾಗುತ್ತದೆ. ಈ ಎಲ್ಲ ಸಂದರ್ಭಗಳಲ್ಲಿ ಕಾಳಜಿ ವಹಿಸಲು ಪೋಷಕರು ಅಥವಾ ಪಾಲಕರು ಸದಾಕಾಲಕ್ಕೂ ಮಕ್ಕಳೊಂದಿಗೆ ಇರಲು ಸಾಧ್ಯವಾಗದಿರಬಹುದು.

ಇದರ ಜೊತೆ ಮಕ್ಕಳು ಇಂದಿನ ಅತ್ಯಗತ್ಯವಾದ ಅಂತರ್ಜಾಲ ಉಪಯೋಗವನ್ನು ಪಡೆಯಬೇಕಾಗುತ್ತದೆ. ಇದಕ್ಕಾಗಿ ಮೊಬೈಲ್, ಟ್ಯಾಬ್ಲೆಟ್, ಕಂಪ್ಯೂಟರ್ ಬಳಕೆ ಸಾಮಾನ್ಯವಾಗಿದೆ. ಈ ಎಲ್ಲವೂ ಮಕ್ಕಳ ಅಭಿವೃದ್ಧಿಯ ಹಕ್ಕನ್ನು ಖಾತರಿ ಪಡಿಸಿಕೊಳ್ಳಲು ಅಥವಾ ಶಿಕ್ಷಣ, ಮನೋರಂಜನೆಗಾಗಿ, ಮತ್ತು ಗೆಳೆಯ ಗೆಳತಿಯರೊಡನೆ ಸಮಾಲೋಚಿಸುವ ಅಗತ್ಯವಿರುತ್ತದೆ.

ಹೀಗೆ ಮಕ್ಕಳು ಶಾಲಾಕಾಲೇಜುಗಳ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವಾಗ ಮತ್ತು ತಮ್ಮ ಗೆಳೆಯ ಗೆಳತಿಯರೊಡನೆ ಸಂಪರ್ಕ, ಸಂವಹನದಲ್ಲಿ ತೊಡಗಿರುವಾಗ ಸಹಜವಾಗಿ ಮಕ್ಕಳು ಅವರ ವಯಸ್ಸಿಗನುಗುಣವಾದ ಚಿಂತನೆ, ಸಂವಾದ, ನಡವಳಿಕೆ, ಸಂಬಂಧಗಳನ್ನು ಹೊಂದಿರುತ್ತಾರೆ. ಅದೇ ರೀತಿ ತಮ್ಮ ಶಿಕ್ಷಕವರ್ಗ, ಶಾಲೆ ಕಾಲೇಜುಗಳ ಆಡಳಿತ ಕಛೇರಿಯ ಸಿಬ್ಬಂದಿ, ಗ್ರಂಥಾಲಯ, ಪ್ರಯೋಗಾಲಯ, ಕ್ರೀಡಾಂಗಣ ಮತ್ತು ಸಭಾಂಗಣಗಳ ಸಿಬ್ಬಂದಿ, ವಿವಿಧ ನಿರ್ವಹಣಾ ಸಿಬ್ಬಂದಿ, ವಾಹನಚಾಲಕರು, ನಿರ್ವಾಹಕರು, ಶಾಲೆಗೆ ಬರುವ ಅತಿಥಿಗಳು, ಆಹ್ವಾನಿತರು, ಸಮಾಲೋಚಕರು, ಹೀಗೆ ವಿವಿಧ ರೀತಿಯ ವಯಸ್ಕರೊಂದಿಗೂ ಮಕ್ಕಳು ಸಂಪರ್ಕ ಹೊಂದಿರುತ್ತಾರೆ.

ಇಂತಹ ಸಂಬಂಧ, ಸಂಪರ್ಕಗಳು ಶಾಲಾ ಕಾಲೇಜಿನ ಬದುಕಿನಲ್ಲಿ ದೀರ್ಘಕಾಲದವರೆಗೆ ಇರುತ್ತದೆ. ಎಲ್ಲೋ ಕೆಲವು ಬಾರಿ ವಯಸ್ಕರೊಡನೆ ಸಂಪರ್ಕ ಒಮ್ಮೆ ಮಾತ್ರ ಆಗುವ ಸಾಧ್ಯತೆಯೂ ಉಂಟು. ಈ ಎಲ್ಲ ಸಂಬಂಧಗಳು ಆರೋಗ್ಯಕರವಾಗಿದ್ದಷ್ಟೂ ಕಾಲ ಎಲ್ಲವೂ ಸಂತಸ ಮತ್ತು ಸೊಗಸಾಗಿರುತ್ತದೆ. ಆದರೆ ವಯಸ್ಕರಿಂದಲೋ ಅಥವಾ ಸಹವಿದ್ಯಾರ್ಥಿಗಳಿಂದಲೋ ಮಕ್ಕಳು ತಾರತಮ್ಯಕ್ಕೆ ಈಡಾದರೆ, ತೊಂದರೆ, ಶೋಷಣೆ, ಕಿರಿಕಿರಿ, ಹಿಂಸೆಗೆ ಗುರಿಯಾದರೆ ಏನು ಮಾಡುವುದು? ಇಂತಹ ತೊಂದರೆ ದೈಹಿಕ, ಮಾನಸಿಕ, ಆರ್ಥಿಕ ಅಥವಾ ಲೈಂಗಿಕ ರೂಪತಾಳಿ ಶೋಷಣೆ ಆದಲ್ಲಿ ಏನು ಮಾಡುವುದು? ಮಕ್ಕಳ ಮೇಲೆ ಒತ್ತಡ ಹಾಕಿ, ಹೆದರಿಸಿ, ಬೆದರಿಸಿ ಶೋಷಿಸಿ ಕುಗ್ಗುವಂತೆ ಮಾಡಿದರೆ ಮಕ್ಕಳು ಯಾರ ಸಹಾಯ ಪಡೆಯಬೇಕು?

ಇತ್ತೀಚಿನ ದಿನಗಳಲ್ಲಿ ಮಕ್ಕಳು ಅತ್ಯಧಿಕವಾಗಿ ಸೈಬರ್ ಲೋಕದಲ್ಲಿರುವುದರಿಂದ (ಅಂದರೆ ಮೊಬೈಲ್, ಟ್ಯಾಬ್, ಕಂಪ್ಯೂಟರ್ ಇತ್ಯಾದಿ..) ಸಾಮಾಜಿಕ ಜಾಲತಾಣಗಳ ಮೂಲಕ (ವಾಟ್ಸಾಪ್, ಟ್ವಿಟರ್, ಫೇಸ್‌ಬುಕ್, ಇನ್ಸ್ಟಾಗ್ರಾಂ, ಇಮೇಲ್ ಇತ್ಯಾದಿ..) ಮಕ್ಕಳು ಮತ್ತು ವಯಸ್ಕರು ಪರಸ್ಪರರ ಸಂಪರ್ಕದಲ್ಲಿ ಬರುವುದು ತೀರಾ ಸಾಮಾನ್ಯವಾಗಿದೆ. ಇಲ್ಲೂ ಮಕ್ಕಳು ಒಂದಷ್ಟು ಒಳ್ಳೆಯ ಬೆಳವಣಿಗೆಯ ಪ್ರಯೋಜನಗಳನ್ನು ಕಂಡಿರಬಹುದು ಮತ್ತು ತಮಗರಿವಿಲ್ಲದಂತೆ ಶೋಷಣೆಗೆ, ಅದರಲ್ಲೂ ಲೈಂಗಿಕ ಶೋಷಣೆಗೆ ಗುರಿಯಾಗುವುದು ಸಾಮಾನ್ಯವಾಗುತ್ತಿದೆ. ಈ ಹಿನ್ನಲೆಯಲ್ಲಿ ಯಾವುದೇ ಮಗು (ಅಂದರೆ 18 ವರ್ಷದೊಳಗಿನ ಎಲ್ಲಾ ವ್ಯಕ್ತಿಗಳು) ಯಾವುದೇ ವಯಸ್ಕರಿಂದ ಅಥವಾ ಸಹವಿದ್ಯಾರ್ಥಿಗಳು/ಮಕ್ಕಳಿಂದ ಲೈಂಗಿಕ ದೂಷಣೆ, ಶೋಷಣೆಗೆ ಈಡಾಗದಂತೆ, ತೊಂದರೆಗೆ ಬೀಳದಂತೆ ತಡೆಗಟ್ಟಲು ಸಹಾಯ ಮಾಡುವುದು ಈ ಕೈಪಿಡಿಯ ಉದ್ದೇಶವಾಗಿದೆ.

## POCSO ಕಾಯಿದೆ ಕುರಿತು ಮಕ್ಕಳಿಗೆ ಮಾಹಿತಿ

ಮಕ್ಕಳ ಮೇಲೆ ಲೈಂಗಿಕ ಶೋಷಣೆಗಳು ಆಗದಂತೆ ತಡೆಯಬೇಕು ಮತ್ತು ಯಾರಾದರೂ ಮಕ್ಕಳನ್ನು ಲೈಂಗಿಕವಾಗಿ ಶೋಷಣೆ ಮಾಡಿದರೆ, ಅಂತಹವರಿಗೆ ಶಿಕ್ಷೆ ವಿಧಿಸಬೇಕು ಎಂದು ಉದ್ದೇಶಿಸಿ POCSO ಕಾಯಿದೆ (Protection of Children from Sexual Offences/ಮಕ್ಕಳನ್ನು ಲೈಂಗಿಕ ಅಪರಾಧಗಳ ವಿರುದ್ಧ ರಕ್ಷಿಸಲು ಕಾಯಿದೆ) 2012ನ್ನು ಜಾರಿಗೆ ತರಲಾಗಿದೆ. ಕಾಯಿದೆಯಲ್ಲಿನ ವಿಚಾರಗಳ ಕುರಿತು ಮಕ್ಕಳಿಗೆ ಮಾಹಿತಿ ಕೊಡಬೇಕು ಮತ್ತು ಮಕ್ಕಳು ಈ ವಿಚಾರಗಳನ್ನು ತಿಳಿದು ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಷ್ಟೇ ಅಲ್ಲದೆ, ಯಾರಾದರೂ ತಮ್ಮನ್ನು ಅಥವಾ ಬೇರೆ ಮಕ್ಕಳನ್ನು ಲೈಂಗಿಕವಾಗಿ ಶೋಷಿಸಲು ಯತ್ನಿಸಿದರೆ, ಅಥವಾ ಶೋಷಿಸಿದರೆ ಪೊಲೀಸರಿಗೆ ಅಥವಾ ತಾವು ಯಾರನ್ನು ನಂಬುತ್ತಾರೋ ಅಂತಹವರಿಗೆ ಮಾಹಿತಿ/ದೂರು ಕೊಡಬೇಕು ಎಂದು ಕಾಯಿದೆ ಆಶಿಸುತ್ತದೆ. ಇದು ಮಕ್ಕಳ ಹಕ್ಕು ಕೂಡಾ ಆಗಿದೆ.

ಹಾಗಾದರೆ ಈ ಕಾಯಿದೆಯಲ್ಲಿನ ಯಾವ ಯಾವ ವಿಚಾರಗಳನ್ನು ಮಕ್ಕಳು ತಿಳಿದುಕೊಳ್ಳಬೇಕು? ಕಾನೂನಿನ ಸಹಾಯ ಪಡೆಯಲು ತಾವೇನು ಮಾಡಬೇಕು? ತಮ್ಮ ಯಾವ ನಡವಳಿಕೆ ಕಾನೂನು ವಿರುದ್ಧ ಆದೀತು ಎಂದು ಹೇಗೆ ತಿಳಿಯುವುದು? ಯಾರಿಗೆ ಯಾವ ವಿಚಾರಗಳಿಗೆ ದೂರು ಕೊಡಬೇಕು? ದೂರು ಕೊಟ್ಟರೆ ತಪ್ಪಿತಸ್ಥರಿಗೆ ಶಿಕ್ಷೆ ಕೊಡುತ್ತಾರೇನು? ಇಂತಹ ಕೆಲವು ಪ್ರಶ್ನೆಗಳು ಮಕ್ಕಳಿಗೆ ಬರಬಹುದು. ಜೊತೆಗೆ ಕಾನೂನು, ಕಾಯಿದೆ, ದೂರು ಎಂದರೆ ಪೊಲೀಸರ ಪ್ರವೇಶವಾಗುತ್ತದೆ, ವಿಚಾರಣೆಯಾಗುತ್ತದೆ, ನ್ಯಾಯಾಲಯಗಳಿಗೆ ಹೋಗಬೇಕಾಗುತ್ತದೆ. ಅವೆಲ್ಲಾ ಮಕ್ಕಳಿಂದ ಸಾಧ್ಯವೇ ಎನ್ನುವ ಅನುಮಾನವೂ ಬಂದಿರಲು ಸಾಧ್ಯ. ಈ ಕೈಪಿಡಿಯಲ್ಲಿ ಅಂತಹ ಪ್ರಶ್ನೆಗಳಿಗೆ ಉತ್ತರಿಸುವ ಯತ್ನ ಮಾಡಲಾಗಿದೆ. ಆ ಮೂಲಕ ಎಲ್ಲ ಮಕ್ಕಳನ್ನು ಲೈಂಗಿಕ ಶೋಷಣೆಗೆ ಗುರಿಯಾಗದಂತೆ ರಕ್ಷಿಸಲು ಈ ಕೈಪಿಡಿಯಲ್ಲಿನ ಮಾಹಿತಿ ಸಹಾಯ ಮಾಡುತ್ತದೆ.

ನೀವು, ನಿಮ್ಮ ಶಾಲೆ, ನಿಮ್ಮ ಸಹಪಾಠಿಗಳು, ಕಿರಿಯ ಮತ್ತು ಹಿರಿಯ ವಿದ್ಯಾರ್ಥಿಗಳು, ಹಾಗೆಯೇ ಶಾಲಾ ಶಿಕ್ಷಕರು, ಮತ್ತಿತರ ವಯಸ್ಕರು POCSO ಕಾಯಿದೆಯ ಮುಖ್ಯಾಂಶಗಳನ್ನು ಅರಿತುಕೊಳ್ಳಲು ಮತ್ತು ನಮ್ಮ ಶಾಲೆಗಳನ್ನು **'ಮಕ್ಕಳ ಲೈಂಗಿಕ ದುರುಪಯೋಗ ಮುಕ್ತ ಶಾಲೆ'** ಗಳನ್ನಾಗಿಸಲು ಹಾಗೂ ಸಂತಸದ ಕಲಿಕೆ ನೀಡುವ **'ಹಕ್ಕುಗಳಿರುವ ಮಕ್ಕಳ ಶಾಲೆ'** ಗಳನ್ನಾಗಿಸಲು ಈ ಕೈಪಿಡಿಯಲ್ಲಿರುವ ವಿಚಾರಗಳು ಸಹಾಯಕ.

ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಹಂತದ ಕಾಲೇಜುಗಳ ವಿದ್ಯಾರ್ಥಿಗಳಿಗೆ ಲೈಂಗಿಕ ಶೋಷಣೆಯ ವಿರುದ್ಧದ ವಿಚಾರಗಳು, ಅದಕ್ಕೆ ಸಂಬಂಧಿಸಿದ ಕಾಯಿದೆ, ವ್ಯವಸ್ಥೆಗಳು, ಸಹಾಯದ ಲಭ್ಯತೆ ಕುರಿತು ಮಾಹಿತಿ ನೀಡಲೇಬೇಕೆಂದು/ತಿಳಿಸಲೇಬೇಕೆಂದು ಕರ್ನಾಟಕದ ನ್ಯಾಯಾಂಗ ಶಿಕ್ಷಣ ಇಲಾಖೆಗೆ ನೀಡಿರುವ ನಿರ್ದೇಶನದಂತೆ ಈ ಕೈಪಿಡಿಯನ್ನು ರಚಿಸಲಾಗಿದೆ.

ಈಗಾಗಲೇ **'ಶಾಲಾ ಸುರಕ್ಷತಾ ನೀತಿ'** ಯನ್ನು ಎಲ್ಲಾ ಶಾಲೆಗಳು, ವಿದ್ಯಾರ್ಥಿ ನಿಲಯಗಳು ಅಳವಡಿಸಿಕೊಂಡು ಪಾಲಿಸಬೇಕು ಎಂದು ಕರ್ನಾಟಕ ಸರ್ಕಾರವು 2016 ರಲ್ಲಿ ನೀಡಿರುವ ನಿರ್ದೇಶನದ ಅಡಿಯಲ್ಲಿ ಈ ಕೈಪಿಡಿಯನ್ನು ಪರಿಗಣಿಸಬೇಕು.

# ಪರಿವಿಡಿ


| ಅಧ್ಯಾಯ | ವಿಷಯಾನುಕ್ರಮಣಿಕೆ | ಪುಟ ಸಂಖ್ಯೆ |
|---|---|---|
| 1 | ಮಕ್ಕಳೇ, ಶಾಲೆಗಳಲ್ಲಿ ನೀವು ಸುರಕ್ಷಿತವಾಗಿದ್ದೀರಾ? ಸುರಕ್ಷತೆ ಎಂದರೇನು ನಿಮಗೆ ಗೊತ್ತೆ?<br>1.1 ಮಕ್ಕಳ ಮೇಲೆ ಲೈಂಗಿಕ ಶೋಷಣೆ ಎಂದರೇನು?<br>1.2 ಮಕ್ಕಳ ಮೇಲೆ ಲೈಂಗಿಕ ಶೋಷಣೆಯಿಂದ ಆಗುವ ಪರಿಣಾಮಗಳು. | 1–8 |
| 2 | ಲೈಂಗಿಕ ಶೋಷಣೆಯ ವಿರುದ್ಧ ಮಕ್ಕಳನ್ನು ರಕ್ಷಿಸಲು ಕಾಯಿದೆ (POCSO)<br>2.1 POCSO ಕಾಯಿದೆಯ ಹಿನ್ನೆಲೆ:<br>2.2 POCSO ಕಾಯಿದೆ ನಿಗದಿಪಡಿಸಿರುವ ಅಪರಾಧಗಳು ಮತ್ತು ಶಿಕ್ಷೆ.<br>2.3 ಮಕ್ಕಳ ನ್ಯಾಯಕಾಯ್ದೆ–2015–2021ರ ತಿದ್ದುಪಡಿಗಳೊಂದಿಗೆ | 9–16 |
| 3 | POCSO ಕಾಯಿದೆ: ಅರಿವು ಮತ್ತು ಜಾಗೃ<br>3.1 POCSO ಪ್ರಕರಣಗಳು; ಚರ್ಚೆ– ಸಂವಾದ<br>3.2 ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶ; ನಿಮಗೆ ತಿಳಿದಿದೆಯೇ?<br>3.3 ಬಾಲ್ಯದಲ್ಲೇ ಪ್ರೀತಿ ಪ್ರೇಮ ಪ್ರಣಯದ ಹೆಸರಿನಲ್ಲಿ ಮಕ್ಕಳ ಮೇಲೆ ಆಗುವ ಪರಿಣಾಮಗಳು | 17–25 |
| 4 | ಲೈಂಗಿಕ ಶೋಷಣೆಗೆ ಗುರಿಯಾದರೆ ಅಥವಾ ಅಂತಹ ಗುರಿಯಾಗುವ ಸಾಧ್ಯತೆ ಕಂಡು ಬಂದರೆ ಏನು ಮಾಡಬೇಕು?<br>4.1. ಮಕ್ಕಳು ಲೈಂಗಿಕ ಶೋಷಣೆ ಅಥವಾ ಇನ್ನಿತರೆ ಸಮಸ್ಯೆ /ತೊಂದರೆಗೊಳಗಾದಲ್ಲಿ ತಡೆ ಮತ್ತು ರಕ್ಷಣೆಗಾಗಿ ಜಾಗೃತವಾಗಿರುವ ರಕ್ಷಣಾ ವ್ಯವಸ್ಥೆಗಳು<br>4.2. ಮಕ್ಕಳೇ ನಿಮಗೆ ಪೊಲೀಸ್ ಠಾಣೆಗಳು ನಡೆಸುವ ತೆರೆದಮನೆ ಕುರಿತು ಪರಿಚಯವಿದೆಯೇ?<br>4.3. ಮಕ್ಕಳೇ ಇವುಗಳ ಬಗ್ಗೆ ಎಚ್ಚರಿಕೆ ಇರಲಿ; ಸೈಬರ್ ಸಂಪರ್ಕ, ಲೈಂಗಿಕ ಅಪರಾಧಗಳು ಮತ್ತು ತಡೆ | 26–32 |
| 5 | ನಿಮ್ಮ ಶಾಲೆ ಮಕ್ಕಳ ಸ್ನೇಹಿಶಾಲೆ ಆಗಿದೆಯೇ? ಪರಿಶೀಲಿಸಿಕೊಳ್ಳಿ | 33–37 |

# ಅಧ್ಯಾಯ–1

# ಮಕ್ಕಳೇ, ಶಾಲೆಗಳಲ್ಲಿ ನೀವು ಸುರಕ್ಷಿತವಾಗಿದ್ದೀರಾ? ಸುರಕ್ಷತೆ ಎಂದರೇನು ನಿಮಗೆ ಗೊತ್ತೆ?

ಆರೋಗ್ಯಕರ ಜಗತ್ತಿನ ಸೃಷ್ಟಿಗೆ ಆರೋಗ್ಯಕರ ಮಕ್ಕಳ ಬೆಳವಣಿಗೆ ಮತ್ತು ವಿಕಾಸ ಅತ್ಯಗತ್ಯವಾದುದು. ಮಕ್ಕಳ ದೈಹಿಕ, ಮಾನಸಿಕ, ಭಾವನಾತ್ಮಕ ಮತ್ತು ಸಾಮಾಜಿಕ ಬೆಳವಣಿಗೆಯಲ್ಲಿ ಮಕ್ಕಳು ಯಾವುದೇ ತರಹದ ಹಿಂಸೆ, ಶೋಷಣೆ, ಅವಮಾನ ಮತ್ತು ದೂಷಣೆಗಳಿಂದ ಮುಕ್ತವಾಗಿರಬೇಕು. ಈ ಹಿನ್ನೆಲೆಯಲ್ಲಿ ಮನೆ, ಶಾಲೆ, ವಿವಿಧ ಸಾಮಾಜಿಕ ಪರಿಸರದಲ್ಲಿ ಮಕ್ಕಳು ಸುರಕ್ಷಿತವಾಗಿರುವಂತೆ ನೋಡಿಕೊಳ್ಳಬೇಕಾಗಿರುವುದು ದೊಡ್ಡವರ ಕರ್ತವ್ಯವಾಗಿದೆ. ಆದರೆ, ಎಷ್ಟೋ ಸಂದರ್ಭಗಳಲ್ಲಿ ಮಕ್ಕಳು ಪರಿಚಿತರಾದ ಮತ್ತು ಪರಿಚಿತರಲ್ಲದ ವಯಸ್ಕರಿಂದ ಲೈಂಗಿಕ ಶೋಷಣೆಗೆ ಗುರಿಯಾಗುವ ಸಂಭವ ಇರುತ್ತದೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಕ್ಕಳೊಡನೆ ವ್ಯವಹರಿಸುವ ಎಲ್ಲರೂ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಅಲ್ಲದೇ ಮಕ್ಕಳೂ ಸಹ ಈ ಅಂಶಗಳ ಬಗೆಗೆ ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿದೆ.

ಕೆಲವು ಸಂದರ್ಭಗಳಲ್ಲಿ ಮಕ್ಕಳ ಹತ್ತಿರದ ಮತ್ತು ದೂರದ ಸಂಬಂಧಿಗಳು ಮಕ್ಕಳನ್ನು ಲೈಂಗಿಕ ಶೋಷಣೆಗೆ ಗುರಿ ಮಾಡುವ ಉದಾಹರಣೆಗಳನ್ನು ನಾವೆಲ್ಲಾ ಕೇಳಿರುತ್ತೇವೆ. ಉದ್ದೇಶಪೂರ್ವಕವಾಗಿ ಮಕ್ಕಳನ್ನು ಮುಟ್ಟುವುದು, ತಬ್ಬಿಕೊಳ್ಳುವುದು ಅಥವಾ ಲೈಂಗಿಕವಾಗಿ ಸಂಪರ್ಕ ಸಾಧಿಸುವುದು. ಇತ್ಯಾದಿಗಳನ್ನು ಕೆಲವು ಬೇಜವಾಬ್ದಾರಿ ವಯಸ್ಕರು ಮಾಡುತ್ತಾರೆ. ಸಂಬಂಧಿಗಳು ಮತ್ತು ಪೋಷಕರ ಸ್ನೇಹಿತರು. ನೆರೆಯವರು ಈ ರೀತಿ ಮಕ್ಕಳೊಂದಿಗೆ ತಪ್ಪಾಗಿ ನಡೆದುಕೊಂಡಾಗ ಮಕ್ಕಳು ಗೊಂದಲಕ್ಕೊಳಗಾಗುತ್ತಾರೆ. ತಂದೆತಾಯಿ. ಪೋಷಕರಿಗೆ ಸಂಬಂಧಿಸಿದ ಬಂಧುಗಳು. ಮಿತ್ರರಿಂದ ಘಟಿಸುವ ಇಂತಹ ದುರ್ವರ್ತನೆಯ ಬಗ್ಗೆ ಮುಕ್ತವಾಗಿ ಯಾರೊಂದಿಗೂ ಹೇಳಿಕೊಳ್ಳಲು ಹಿಂಜರಿಕೆ, ಸಂಕೋಚಗಳನ್ನು ಮಕ್ಕಳು ಅನುಭವಿಸುತ್ತಾರೆ. ಇದೇ ರೀತಿ ಮನೆಯಷ್ಟೇ ಅಲ್ಲದೇ ಶಾಲೆ ಹಾಗೂ ಇತರೆ ಪರಿಸರದಲ್ಲಿಯೂ ಮಕ್ಕಳು ಲೈಂಗಿಕ ಶೋಷಣೆಗೆ ಗುರಿಯಾಗುವ ಸಂಭವ ಇರುತ್ತದೆ.

ಶಾಲೆ ನಿಮಗೆ ಎರಡನೇ ಮನೆ ಇದ್ದಂತೆ ಅಲ್ಲವೇ? ಶಾಲೆ ನಿಮ್ಮ ಕಲಿಕೆಗೆ, ಸಾಮಾಜಿಕ ಸಂಬಂಧಗಳನ್ನು ಬೆಳೆಸಿಕೊಳ್ಳಲು. ಆಟೋಟಗಳು. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶಗಳನ್ನು ಮಾಡಿಕೊಡುತ್ತದೆ. ಇದಕ್ಕಾಗಿ ಶಾಲೆಯಲ್ಲಿ ಸಹ ವಿದ್ಯಾರ್ಥಿಗಳು ಮತ್ತು ಶಿಕ್ಷಕ ಹಾಗೂ ಶಿಕ್ಷಕೇತರ ವರ್ಗದ ವಯಸ್ಕರೊಡನೆ ಮಕ್ಕಳು ಸಂವಹನ. ಸಂಪರ್ಕದಲ್ಲಿ ಇರಬೇಕಾಗುತ್ತದೆ. ಈ ಸಂಬಂಧ. ಸಂಪರ್ಕಗಳು ಶಾಲೆಯ ಚೌಕಟ್ಟಿನ ಚಟುವಟಿಕೆಗಳಿಗೆ ತಕ್ಕುದಾಗಿ ಇರಬೇಕು.

ಈ ಚೌಕಟ್ಟನ್ನು ಮೀರಿ ಶಿಸ್ತಿನ ಹೆಸರಿನಲ್ಲೋ, ತಾರತಮ್ಯ ನಡೆಸಲೋ ಅಥವಾ ಬೇರೆ ಯಾವುದೋ ದುರುದ್ದೇಶದಿಂದಲೋ ಶಾಲೆಗೆ ಸಂಬಂಧಿಸಿದ ಅಥವಾ ಸಂಬಂಧಿಸದ ಕೆಲವು ವಯಸ್ಕರು ಮಕ್ಕಳ ಮೇಲೆ ವಿವಿಧ ರೀತಿಯ ಹಿಂಸೆ, ದೌರ್ಜನ್ಯ, ಶೋಷಣೆ ಮಾಡುವ ಸಾಧ್ಯತೆ ಇದೆ. ಇದು ವಿದ್ಯಾರ್ಥಿಗಳು ಸರಿಯಾಗಿ ಕಲಿಯಲಿಲ್ಲವೆಂದೋ, ಶೈಕ್ಷಣಿಕ ಚಟುವಟಿಕೆಗಳನ್ನು ಪೂರೈಸಲಿಲ್ಲವೆಂದೋ, ಕ್ರೀಡೆ, ವ್ಯಾಯಾಮ, ಚಿತ್ರಕಲೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸರಿಯಾಗಿ ತೊಡಗಿಸಿಕೊಳ್ಳಲಿಲ್ಲವೆಂದೋ, ಅಥವಾ ಶಾಲಾ ಕಾಲೇಜಿನ ಸಮಯದಲ್ಲೋ ಅಥವಾ ಹೊರಗಡೆಯೋ ಅಶಿಸ್ತಿನಿಂದ ವರ್ತಿಸಿದರೆಂದೋ ಕೆಲವು ಶಾಲಾ ಕಾಲೇಜುಗಳ ಶಿಕ್ಷಕರು ಅಥವಾ ಆಡಳಿತದಲ್ಲಿರುವವರು ವಿದ್ಯಾರ್ಥಿಗಳ ಮೇಲೆ ಶಿಸ್ತು ಕ್ರಮದ ಹೆಸರಿನಲ್ಲಿ ಬೈಯುವುದು, ಅವಮಾನ ಮಾಡುವುದು, ದೈಹಿಕವಾಗಿ ಹೊಡೆಯುವುದು ಆಗಿರಬಹುದು.

ಹಾಗೆಯೇ ಕೆಲವು ವಿದ್ಯಾರ್ಥಿಗಳು ಕೂಡಾ ಇತರ ಮಕ್ಕಳ ಮೇಲೆ ಪಠ್ಯ, ಪಠ್ಯೇತರ, ಆಟ, ಸಾಂಸ್ಕೃತಿಕ ಚಟುವಟಿಕೆಗಳ ಸಂದರ್ಭದಲ್ಲಿ, ಅಥವಾ ತಮ್ಮದೇ ಸಮೂಹದಲ್ಲಿನ ಮಾತುಕತೆಗಳ ಮಧ್ಯೆ ಹಾಸ್ಯಮಾಡಲೋ,

ಅಪಹಾಸ್ಯದಿಂದಲೋ, ನಿಂದನೆ, ಒತ್ತಡ, ಕಿರುಕುಳ, ಮೋಸ, ನೋವು ಮಾಡುವ ಸಾಧ್ಯತೆಗಳು ಇವೆ. ಈ ತೊಂದರೆ ಇಂದಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕವೂ ಆಗುವುದು ಸಾಮಾನ್ಯವಾಗಿದೆ.

ವಿದ್ಯಾರ್ಥಿಗಳು ಹಿಂಸೆ, ತೊಂದರೆಗೀಡಾಗುವ ಸಾಧ್ಯತೆಗಳು ಮನೆಯಿಂದ ಶಾಲಾಕಾಲೇಜುಗಳಿಗೆ ಹೋಗಿ ಬರುವಾಗ ಅಥವಾ ಪಠ್ಯೇತರ ಚಟುವಟಿಕೆಗಳಿಗೆ ಹೋಗಿ ಬರುವಾಗ, ಹೆಚ್ಚಿನ ಶೈಕ್ಷಣಿಕ ನೆರವಿಗಾಗಿ ಟ್ಯೂಷನ್‌ಗೆ ಹೋದಾಗಲೂ ಆಗಿರಬಹುದು.

ಇಂತಹ ತೊಂದರೆಗೆ ಒಳಗಾದ ಎಲ್ಲ ಮಕ್ಕಳು ಅವುಗಳೆಲ್ಲವನ್ನೂ ಎದುರಿಸಿ, ಜೀರ್ಣಿಸಿಕೊಂಡು ಸಾಮಾನ್ಯ ಜೀವನವನ್ನು ನಡೆಸಿಕೊಂಡು ಸಾಗುತ್ತಾರೆ ಎಂದು ಹೇಳಲು ಆಗುವುದಿಲ್ಲ. ಕೆಲವು ಮಕ್ಕಳು ಯಾರೊಡನೆಯೂ ಬೆರೆಯದೆ ಒಂಟಿಯಾಗಬಹುದು, ದೈಹಿಕನೋವು, ಮಾನಸಿಕನೋವನ್ನು ಯಾರ ಬಳಿಯೂ ಹೇಳಿಕೊಳ್ಳಲಾಗದೆ ಅವಮಾನದಿಂದ ಕುಗ್ಗಬಹುದು, ಸದಾಕಾಲಕ್ಕೂ ತಮ್ಮನ್ನು ತಾವೇ ಹಳಿದುಕೊಂಡು/ಬೈದುಕೊಂಡು ಸ್ವಯಂ ಹಾನಿ ಮಾಡಿಕೊಳ್ಳುವುದರತ್ತಲೂ ಮುಂದಾಗಬಹುದು.

ಇವೆಲ್ಲದರ ಒಟ್ಟು ಪರಿಣಾಮ ಮಕ್ಕಳು ಶಾಲಾಕಾಲೇಜುಗಳನ್ನು ಬಿಟ್ಟುಬಿಡಬಹುದು. ಶಿಕ್ಷಣದಿಂದ ವಿಮುಖರಾಗಬಹುದು. ಖಿನ್ನತೆಗೊಳಗಾಗಿ ಮಾನಸಿಕ ಅಸ್ವಸ್ಥರಾಗಬಹುದು. ದೈಹಿಕ ಹಿಂಸೆಯಿಂದಾಗಿ ಅಂಗವಿಕಲರಾಗಬಹುದು. ರೋಗಗ್ರಸ್ಥರಾಗಬಹುದು. ಚಿಕ್ಕವಯಸ್ಸಿನಲ್ಲೇ ಗರ್ಭಧರಿಸುವಂತಾಗಬಹುದು. ಇಲ್ಲವೇ ಬಾಲ್ಯವಿವಾಹಕ್ಕೆ ತುತ್ತಾಗಬಹುದು. ಕೆಲವೊಮ್ಮೆ ಮಾರಾಟ ಸಾಗಣೆಗೆ ಗುರಿಯಾಗಬಹುದು. ಈ ಎಲ್ಲವೂ ಮಕ್ಕಳ ಹಕ್ಕುಗಳ ಉಲ್ಲಂಘನೆ ಮತ್ತು ಮಕ್ಕಳ ಮೇಲಾಗುವ ಅಪರಾಧಗಳಾಗಿವೆ.

ಯಾವುದೇ ಮಗು ಇಂತಹ ಅಪರಾಧಗಳಿಗೆ ಈಡಾಗಬಾರದು. ಎಲ್ಲ ಮಕ್ಕಳು ಮಾನಸಿಕವಾಗಿ, ದೈಹಿಕವಾಗಿ ಸದೃಢರಾಗಿ ಬೆಳೆಯಬೇಕು. ಉತ್ತಮ ಅವಕಾಶಗಳನ್ನು ಸದುಪಯೋಗ ಮಾಡಿಕೊಂಡು ದೇಶದ ಸಂಪನ್ಮೂಲವಾಗಬೇಕು ಎಂಬುದೇ ಶಿಕ್ಷಣದ ಪ್ರಮುಖ ಗುರಿಯಾಗಿದೆ.

ಆದರೆ, ಇಂದಿನ ಸಂದರ್ಭಗಳಲ್ಲಿ ಶಾಲೆ, ಕುಟುಂಬ, ವಿದ್ಯಾರ್ಥಿನಿಲಯ ಹಾಗೂ ಸಾಕಷ್ಟು ಕಡೆಗಳಲ್ಲಿ ವಿದ್ಯಾರ್ಥಿಗಳು ವಿವಿಧ ರೀತಿಯ ಹಿಂಸೆ, ಶೋಷಣೆಗಳು, ಅದರಲ್ಲೂ ಲೈಂಗಿಕ ಶೋಷಣೆಗೆ ಗುರಿಯಾಗುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ವಿದ್ಯಾರ್ಥಿಗಳು ತಾವು ನಂಬಿದವರಿಂದಲೇ ಲೈಂಗಿಕ ಶೋಷಣೆಗೆ ಬಲಿಯಾದಾಗ ಗಲಿಬಿಲಿಗೊಳ್ಳುತ್ತಾರೆ. ತಮಗೇನು ಆಗುತ್ತಿದೆ ಎಂದು ಅರಿವಾಗದೆ ದಿಗ್ಭ್ರಾಂತರಾಗುತ್ತಾರೆ. ಅದರಲ್ಲೂ ಕಣ್ಣುಕಾಣದ, ಮಾತುಬಾರದ, ಕಿವಿ ಕೇಳದ, ಮಾನಸಿಕ ಅಸ್ವಸ್ಥತೆಯಿರುವ ಅಥವಾ ಇನ್ಯಾವುದೇ ರೀತಿಯ ಅಂಗವಿಕಲತೆಯಿರುವ ಮಕ್ಕಳ ಮೇಲೆ ಈ ಶೋಷಣೆಗಳು, ಅದರಲ್ಲೂ ಲೈಂಗಿಕ ಶೋಷಣೆಯಾದರೆ ಪರಿಸ್ಥಿತಿ ಇನ್ನಷ್ಟು ಕ್ಲಿಷ್ಟವಾಗುತ್ತದೆ. ಯಾರಿಗೆ ಹೇಳಿಕೊಳ್ಳುವುದು, ಹೇಗೆ ಹೇಳುವುದು ಎಂದು ತಿಳಿಯದೆ ಚಡಪಡಿಸುತ್ತಾರೆ. ಅಪರಾಧಕ್ಕೆ ಈಡಾದ ಮೇಲೆ ತನಗೆ ಹೀಗಾಗಬಾರದಿತ್ತು ಎಂದು ಕೊರಗುತ್ತಾರೆ.

ಶಾಲೆ ಮತ್ತು ಸಂಬಂಧಿತ ಚಟುವಟಿಕೆಗಳಲ್ಲಿ ನಿಮ್ಮನ್ನು ನೀವು ರಕ್ಷಿಸಿಕೊಳ್ಳಲು ಹಾಗೂ ಇತರ ಸಹ ವಿದ್ಯಾರ್ಥಿಗಳನ್ನು ರಕ್ಷಿಸಲು ಸಾಕಷ್ಟು ನೀತಿಗಳು ಮತ್ತು ಕಾಯಿದೆಗಳು ಜಾರಿಯಲ್ಲಿವೆ. ಮಕ್ಕಳು ಇವುಗಳನ್ನು ತಿಳಿದುಕೊಳ್ಳುವುದು ಅತ್ಯವಶ್ಯಕ. ಏಕೆಂದರೆ, ವಿವಿಧ ರೀತಿಯ ಲೈಂಗಿಕ ಶೋಷಣೆ, ಹಿಂಸೆಗಳ ವಿರುದ್ಧ ರಕ್ಷಣೆ ಪಡೆಯುವುದು ಹೇಗೆ ಎಂಬ ಅರಿವು ಉಂಟಾಗುತ್ತದೆ. ಈ ರೀತಿಯ ಲೈಂಗಿಕ ಶೋಷಣೆ, ಹಿಂಸೆಗಳ ಸನ್ನಿವೇಶ ನಿಮಗೆ ಎದುರಾಗಬಹುದು, ನಿಮ್ಮ ಸ್ನೇಹಿತರಿಗೆ ಎದುರಾಗಬಹುದು, ನಿಮ್ಮ ಸಹೋದರ, ಸಹೋದರಿಯರಿಗೆ ಎದುರಾಗಬಹುದು ಅಥವಾ ನಿಮ್ಮ ನೆರೆಹೊರೆಯ ಮಕ್ಕಳಿಗೆ ಎದುರಾಗಬಹುದು. ಅಂತಹ ಸಂದರ್ಭಗಳಲ್ಲಿ, ಅದರಿಂದ ತಪ್ಪಿಸಿಕೊಳ್ಳಲು ಏನು ಮಾಡಬೇಕು? ಯಾರಿಗೆ ತಿಳಿಸಬೇಕು? ಈ ರೀತಿಯ ಕೃತ್ಯಗಳನ್ನು ಮಾಡಲು ಬಂದವರಿಗೆ ಕಾನೂನು ಕ್ರಮ ಜರುಗಿಸಲು ಏನು ಮಾಡಬೇಕು? ಎಂಬೆಲ್ಲಾ ತಿಳಿವಳಿಕೆ ನಿಮಗೆ ಅಗತ್ಯವಾಗಿದೆ.

## 1.1. ಮಕ್ಕಳ ಮೇಲೆ ಲೈಂಗಿಕ ಶೋಷಣೆ ಎಂದರೇನು?



18 ವರ್ಷದೊಳಗಿನ ಎಲ್ಲರೂ ಮಕ್ಕಳು. ಬಾಲ್ಯತನದಿಂದ ಹದಿವಯಸ್ಸನ್ನು ಪ್ರವೇಶಿಸಿ, ವಯಸ್ಕರಾಗುವ ಹಂತದಲ್ಲಿರುವವರು. ಈ ಹಂತದಲ್ಲಿ ಮಾನಸಿಕ, ದೈಹಿಕವಿಕಾಸ, ಸುತ್ತಮುತ್ತಲಿನ ಹಲವಾರು ಬೆಳವಣಿಗೆಗಳು, ಒತ್ತಡಗಳು, ಬೇಡಿಕೆಗಳು ಸಾಮಾನ್ಯವಾಗಿರುತ್ತವೆ. ಇಂತಹ ಸಂದರ್ಭದಲ್ಲಿ ಮಕ್ಕಳಿಗೆ ಹಲವು ರೀತಿಯ ಬೆಂಬಲ, ಒತ್ತಾಸೆಗಳನ್ನು ನೀಡಲು ಕುಟುಂಬ, ಶಾಲೆ, ಸಮಾಜ, ಸರ್ಕಾರ ಪ್ರಯತ್ನಿಸುತ್ತವೆ. ಮಕ್ಕಳೂ ಕೂಡಾ ತಮಗೆ ಲಭ್ಯವಿರುವ ಎಲ್ಲ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು, ತಮ್ಮ ಜವಾಬ್ದಾರಿಗಳನ್ನು ಅರಿತುಕೊಂಡು, ಭವಿಷ್ಯದ ಶಿಕ್ಷಣ, ಕೌಶಲ್ಯ ಬೆಳವಣಿಗೆ, ಇತ್ಯಾದಿ ಯೋಜನೆಗಳನ್ನು ಮಾಡಿಕೊಳ್ಳುತ್ತಾರೆ.

ಮಕ್ಕಳು ವಯಸ್ಕರಿಂದ ಪ್ರೋತ್ಸಾಹ, ಬೆಂಬಲದ ನಿರೀಕ್ಷೆಯಲ್ಲಿರುತ್ತಾರೆ. ಮಕ್ಕಳ ಮೇಲೆ ಹಲ್ಲೆ, ದೌರ್ಜನ್ಯ, ಶೋಷಣೆಗಳಾದರೆ, ಅವರು ದೈಹಿಕ ಮತ್ತು ಮಾನಸಿಕವಾಗಿ ಕುಗ್ಗುತ್ತಾರೆ. ಅದರಲ್ಲೂ ಮಕ್ಕಳು ಲೈಂಗಿಕ ಶೋಷಣೆಗೆ ಗುರಿಯಾದಲ್ಲಿ ಅವರ ಮೇಲೆ ತೀವ್ರ ರೀತಿಯ ಆಘಾತ ಉಂಟಾಗುತ್ತದೆ.

ಮಕ್ಕಳ ಮೇಲೆ ನಡೆಯುವ ಮಾನಸಿಕ ಮತ್ತು ದೈಹಿಕಶಿಕ್ಷೆ, ಹಿಂಸೆ, ಶೋಷಣೆಗಳಿಗಿಂತಲೂ ಲೈಂಗಿಕ ಶೋಷಣೆಯು ಅತ್ಯಂತ ಹೇಯವಾದುದಾಗಿದೆ. ಈ ಕುರಿತು ವಿಶ್ವ ಆರೋಗ್ಯ ಸಂಸ್ಥೆ (WHO - World Health Organisation) "ಯಾವ ಲೈಂಗಿಕ ಚಟುವಟಿಕೆಗಳ ಕುರಿತು ಮಕ್ಕಳಿಗೆ ಸರಿಯಾದ ತಿಳಿವಳಿಕೆ ಇಲ್ಲವೋ, ಅವುಗಳ ಕುರಿತು ಅರಿವು ಪೂರ್ಣವಾಗಿ ಬಂದಿರುವುದಿಲ್ಲವೋ, ಮತ್ತು ಅಂತಹದರಲ್ಲಿ ಭಾಗಿಯಾಗಲು ಅವರು ಸಮ್ಮತಿಕೊಡಲು ಸಮರ್ಥರಲ್ಲವೋ ಹಾಗೂ ಯಾವ ಚಟುವಟಿಕೆಗಳನ್ನು ನಡೆಸಲು ದೈಹಿಕವಾಗಿ ಅವರು ವಿಕಾಸವಾಗಿಲ್ಲವೋ ಮತ್ತು ಅಂತಹದನ್ನು ಸಮಾಜ ಮತ್ತು ಕಾನೂನು ನಿಷೇಧಿಸಿರುವುದೋ–ಅವುಗಳಲ್ಲಿ ಮಕ್ಕಳನ್ನು ತೊಡಗಿಸುವುದು ಲೈಂಗಿಕ ಶೋಷಣೆಯಾಗಿದೆ (1999)" ಎಂದು ವ್ಯಾಖ್ಯಾನಿಸಿದೆ.

ವಯಸ್ಕರು ಅಥವಾ ದೊಡ್ಡವರು, ಹದಿಹರೆಯದವರು, ಮಕ್ಕಳ ಜವಾಬ್ದಾರಿ ಹೊತ್ತಿರುವವರು, ಮಕ್ಕಳು ಯಾರನ್ನು ನಂಬುತ್ತಾರೋ, ಗೌರವಿಸುತ್ತಾರೋ ಅಥವಾ ಮಕ್ಕಳ ಮೇಲೆ ಅಧಿಕಾರ ಹೊಂದಿರುತ್ತಾರೋ ಅಂತಹವರು ಮಕ್ಕಳೊಡನೆ ಲೈಂಗಿಕವಾಗಿ ವರ್ತಿಸುವುದೇ ಮಕ್ಕಳ ಲೈಂಗಿಕ ದುರುಪಯೋಗ, ಶೋಷಣೆಯಾಗಿದೆ. ಇಂತಹವುಗಳಿಂದ ಮಕ್ಕಳನ್ನು ರಕ್ಷಿಸಲು ಹಾಗೂ ಯಾರಾದರೂ ವಯಸ್ಕರು ಮಕ್ಕಳನ್ನು ತೊಂದರೆಗೆ ಸಿಲುಕಿಸಿದರೆ, ಅಂತಹವರಿಗೆ ಶಿಕ್ಷೆ ನೀಡಲೆಂದೇ ಭಾರತ ಸರ್ಕಾರ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ 2012 ಅನ್ನು ರೂಪಿಸಿದೆ.

ಈ ಕಾಯಿದೆಯಲ್ಲಿ ನಿಷೇಧಿಸಿರುವ ವಿಚಾರಗಳು ಹಾಗೂ ಮಕ್ಕಳ ಹಕ್ಕುಗಳನ್ನು ಕುರಿತು ನಡೆದಿರುವ ಚಿಂತನೆಗಳನ್ನು ಆಧರಿಸಿ, ತಮ್ಮ ಮೇಲಿನ ಲೈಂಗಿಕ ಶೋಷಣೆ ಕುರಿತು ಮಕ್ಕಳು ಈ ಮುಂದಿನವುಗಳನ್ನು ತಿಳಿಯಬೇಕಿದೆ.

ಮಕ್ಕಳ ಲೈಂಗಿಕ ಶೋಷಣೆಗಳು ಈ ಮುಂದಿನವುಗಳನ್ನು ಒಳಗೊಂಡಿದೆ:




### I. ಮಕ್ಕಳಿಗೆ ಹಿತವೆನಿಸದ ವಯಸ್ಕರ ಕೆಲವು ವರ್ತನೆಗಳು

- ಮಕ್ಕಳನ್ನು ದೈಹಿಕವಾಗಿ ಮುಟ್ಟುವ ನಡವಳಿಕೆಗಳು
- ಮುಟ್ಟದಯೇ ಮಾತು, ನೋಟದ ನಡವಳಿಕೆಗಳು

### II. ಮಕ್ಕಳಿಗೆ ಬೇಡದ ವಯಸ್ಕರ ಕೆಲವು ನಡವಳಿಕೆಗಳು

- ಮಕ್ಕಳೆದುರು ಲೈಂಗಿಕ ಅರ್ಥಕೊಡುವ ಶಬ್ದ, ಪದಗಳ ಬಳಕೆ.



- ಮಕ್ಕಳನ್ನು ಸ್ಪರ್ಶಿಸುವುದು, ಹಿಡಿದಿಟ್ಟುಕೊಳ್ಳುವುದು.
- ಬಲವಂತವಾಗಿ ಚುಂಬಿಸುವುದು.
- ತನ್ನ ದೇಹವನ್ನು ಮುಟ್ಟಲು ಹೇಳುವುದು / ಬಲವಂತ ಮಾಡುವುದು.
- ಮಕ್ಕಳಚಿತ್ರ / ಲೈಂಗಿಕ ಅಂಗಾಂಗಗಳ ಚಿತ್ರಗಳನ್ನು ತೆಗೆಯುವುದು/ ತೆಗೆದುಕೊಡಲು ಪೀಡಿಸುವುದು.

**III. ಮಕ್ಕಳ ಮೇಲೆ ತೀವ್ರವಾದ ಲೈಂಗಿಕ ನಡವಳಿಕೆಗಳು / ಅಪರಾಧಗಳು**



- ಮಕ್ಕಳ ಲೈಂಗಿಕ ಅಂಗಗಳನ್ನು / ಗುಪ್ತಾಂಗಗಳನ್ನು ಮುಟ್ಟುವುದು.
- ವಯಸ್ಕರು ಮಕ್ಕಳೆದುರು ತಮ್ಮ ಲೈಂಗಿಕ ಅಂಗಗಳನ್ನು ಪ್ರದರ್ಶಿಸುವುದು.
- ಮಕ್ಕಳಿಗೆ ತಮ್ಮ ಲೈಂಗಿಕ ಅಂಗಗಳನ್ನು ತೋರಿಸಲು ಹೇಳುವುದು / ಬಲವಂತ ಮಾಡುವುದು.
- ಮಕ್ಕಳಿಗೆ ಲೈಂಗಿಕ ಚಿತ್ರ ತೋರಿಸುವುದು.
- ಮಕ್ಕಳ ಲೈಂಗಿಕ ಚಿತ್ರ, ಅಥವಾ ಬೆತ್ತಲೆ ಫೋಟೋ ತೆಗೆಯುವುದು.
- ಲೈಂಗಿಕ ಹಲ್ಲೆ, ಲೈಂಗಿಕ ಅತ್ಯಾಚಾರ
- ಮಕ್ಕಳು ಲೈಂಗಿಕವಾಗಿ ಪರಸ್ಪರ ಸಹಕರಿಸಲು ಹೇಳುವುದು

**ಮಕ್ಕಳ ಮೇಲಿನ ಲೈಂಗಿಕ ಶೋಷಣೆಯ ಕುರಿತಂತೆ ಇನ್ನಷ್ಟು ಅಂಶಗಳು**

1. ಮಕ್ಕಳ ಮೇಲೆ ದೈಹಿಕ ಬಲ ಬಳಸಿ ಹಿಂಸೆ/ದೌರ್ಜನ್ಯ ಎಸಗುವುದು.
2. ಸಾಕಷ್ಟು ಸಂದರ್ಭಗಳಲ್ಲಿ, ಅಪರಾಧಿಯು ಮಕ್ಕಳಿಗೆ ಪರಿಚಯವಿರುವ ಮತ್ತು ವಿಶ್ವಾಸಾರ್ಹರೂ ಆದ ಪಾಲಕರು, ಪೋಷಕರು, ತರಬೇತುದಾರರು, ಶಿಕ್ಷಕರು ಆಗಿರುವ ಸಾಧ್ಯತೆಗಳಿವೆ.
3. ಮಕ್ಕಳ ಲೈಂಗಿಕ ದುರುಪಯೋಗವು ಒಮ್ಮೆ ಮಾತ್ರ ಆಗುವ ಘಟನೆಯಿಂದ ಹಿಡಿದು ಅನೇಕ ದಿನಗಳು, ವಾರಗಳು ಅಥವಾ ವರ್ಷಗಳವರೆಗೂ ಸಂಭವಿಸಿರಬಹುದು.
4. ಬೆದರಿಕೆಗಳು, ಸುಳ್ಳು ಭರವಸೆ / ಆಮಿಷಗಳು, ಬಲದ ಉಪಯೋಗ, ಸುಳ್ಳು/ತಪ್ಪು ಮಾಹಿತಿ ಕೊಡುವುದು ಮತ್ತು ಬಲವಂತಪಡಿಸುವ ಮೂಲಕ ದಾರಿತಪ್ಪಿಸಿ ವಯಸ್ಕರು ಮಕ್ಕಳನ್ನು ತಮ್ಮ ಬಲೆಗೆ ಬೀಳಿಸಿಕೊಳ್ಳಬಹುದು.



ಈ ಎಲ್ಲವೂ ಮತ್ತು ಇಂತಹ ವಯಸ್ಕರ ವರ್ತನೆಗಳು, ಅದರಲ್ಲೂ ಪರಿಚಿತರು, ನಂಬಿಕೆಗೆ ಅರ್ಹರಾಗಿರುವವರಿಂದ ಮಕ್ಕಳ ಮೇಲ್ ಆದಾಗ, ಮಕ್ಕಳಿಗೆ ಮುಜುಗರವಾಗುತ್ತದೆ, ಭಯವಾಗುತ್ತದೆ, ಗಲಿಬಿಲಿಯಾಗುತ್ತದೆ ಮತ್ತು ತಮ್ಮ ಮೇಲೆ ತಮಗೇ ಅಸಹ್ಯ ಉಂಟಾಗಬಹುದು. ಇಂತಹ ಸಂದರ್ಭಗಳಲ್ಲಿ ಮಕ್ಕಳು ಹೆದರಿ, ಒಂಟಿಯಾಗಿ ದುಃಖಿಸುತ್ತಾ ಕುಳಿತುಕೊಳ್ಳದೆ ಅವರಿಗೆ ಯಾರಲ್ಲಿ ನಂಬಿಕೆ ಇದೆಯೋ ಅಂತಹ ಪೋಷಕರು, ಆಪ್ತಸಮಾಲೋಚಕರು, ವೈದ್ಯರು, ಮುಂತಾದವರಲ್ಲಿ ತಿಳಿಸುವಂತೆ ಮಕ್ಕಳಿಗೆ ಮಾರ್ಗದರ್ಶನ ಮಾಡಬೇಕು. ಮಕ್ಕಳ ಮೇಲೆ ಲೈಂಗಿಕ ಶೋಷಣೆ ಮಾಡಿದವರ ವಿರುದ್ಧ ಪೊಲೀಸ್ ದೂರು ದಾಖಲಾಗುವಂತೆ ಮಾಡಬೇಕು.



## 1.2. ಮಕ್ಕಳ ಮೇಲೆ ಲೈಂಗಿಕ ಶೋಷಣೆಯಿಂದ ಆಗುವ ಪರಿಣಾಮಗಳು

ಮಕ್ಕಳೆಂದರೆ 18 ವರ್ಷಗಳ ಒಳಗಿನವರು. ಇದನ್ನು ಭಾರತದ ವಿವಿಧ ಕಾಯಿದೆಗಳು ಸ್ಪಷ್ಟಪಡಿಸಿವೆ. ಬಹಳ ಮುಖ್ಯವಾಗಿ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989, ಮಕ್ಕಳೆಂದರೆ ಇನ್ನೂ 18 ವರ್ಷ ಪೂರೈಸದವರು ಎಂದು ಸೂಚಿಸಿದೆ. ಇದಕ್ಕೆ ಭಾರತ ಸರ್ಕಾರ ಒಪ್ಪಿಕೊಂಡಿದೆ. ಅಷ್ಟೇ ಅಲ್ಲ ಭಾರತ ಸರ್ಕಾರ ಹೊರಡಿಸಿರುವ 'ರಾಷ್ಟ್ರೀಯ ಮಕ್ಕಳ ನೀತಿ 2013' ಕೂಡಾ ಇದನ್ನೇ ತಿಳಿಸುತ್ತಾ ದೇಶದ ಎಲ್ಲ ಮಕ್ಕಳನ್ನೂ ಯಾವುದೇ ತೊಂದರೆಗೆ ಒಳಗಾಗದಂತೆ ರಕ್ಷಿಸುವುದು ಸರ್ಕಾರ, ಸಮಾಜ, ಎಲ್ಲಾ ಇಲಾಖೆಗಳು ಮತ್ತು ಕುಟುಂಬಗಳ ಕರ್ತವ್ಯ ಎಂದು ಪ್ರತಿಪಾದಿಸಿದೆ.

ಮಕ್ಕಳ ದೈಹಿಕ, ಮಾನಸಿಕ ಆರೋಗ್ಯ ಕಾಪಾಡುವುದು, ಮಕ್ಕಳು ಯಾವುದೇ ದೈಹಿಕ, ಮಾನಸಿಕ, ಲೈಂಗಿಕ ಶೋಷಣೆಗೆ ಈಡಾಗದಂತೆ ನೋಡಿಕೊಳ್ಳುವುದು, ಮಕ್ಕಳು ಶಿಕ್ಷಣ ಪಡೆಯಲು ವ್ಯವಸ್ಥೆಗಳನ್ನು ಮಾಡುವುದು ಮತ್ತು ಬಹಳ ಮುಖ್ಯವಾಗಿ ಮಕ್ಕಳಿಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಲು, ತಮಗಾದ ತೊಂದರೆ, ನೋವು, ಬೇಸರಗಳನ್ನು ಹೇಳಿಕೊಳ್ಳಲು ಅವಕಾಶಗಳನ್ನು ಮಾಡಿಕೊಡುವುದು ಮಕ್ಕಳ ಹಕ್ಕುಗಳನ್ನು ಜಾರಿ ಮಾಡುವ ವಿಧಾನಗಳಾಗಿವೆ. ಶಾಲೆಗಳು ಈ ಎಲ್ಲಾ ವಿಚಾರಗಳನ್ನು ಮಕ್ಕಳಿಗೆ, ಪೋಷಕರಿಗೆ ಮತ್ತು ಶಾಲಾ ಶಿಕ್ಷಕರು, ಸಿಬ್ಬಂದಿ ಮತ್ತು ಆಡಳಿತ ವರ್ಗದವರಿಗೆ ತಿಳಿಸಿ, ಶಾಲೆಗಳನ್ನು ಮಕ್ಕಳ ಸ್ನೇಹಿ ಆಗಿಸಬೇಕಿದೆ.



### ಲೈಂಗಿಕ ಶೋಷಣೆಯ ಪರಿಣಾಮಗಳು

- ಯಾವುದೇ ಲೈಂಗಿಕ ಶೋಷಣೆಗೆ ಗುರಿಯಾದ ಮಕ್ಕಳು (ಹೆಣ್ಣುಮಕ್ಕಳು, ಗಂಡು ಮಕ್ಕಳು ಮತ್ತು ತೃತೀಯ ಲಿಂಗಿ ಮಕ್ಕಳು) ತಮಗೇನಾಗುತ್ತಿದೆ ಎಂದು ಅರ್ಥವಾಗದೆ ಗೊಂದಲ, ಗಲಿಬಿಲಿಗೆ ಗುರಿಯಾಗುತ್ತಾರೆ. ಇದನ್ನು ಯಾರಿಗಾದರೂ ಹೇಳಬೇಕೋ ಬೇಡವೋ, ತನ್ನದೇ ಏನಾದರೂ ತಪ್ಪಾಯಿತೋ ಎಂಬ ಸಂಶಯ, ಅಪಮಾನ, ಆತಂಕ, ದುಃಖಕ್ಕೂ ಒಳಗಾಗಬಹುದು.

- ಇಂತಹ ಆತಂಕಕ್ಕೆ ಒಳಗಾದ ಮಕ್ಕಳು ಹಾಸಿಗೆಯಲ್ಲಿ ಮೂತ್ರ ವಿಸರ್ಜಿಸುವುದು, ಸರಿಯಾಗಿ ಊಟ ಮಾಡದಿರುವುದು, ನಿದ್ರೆಯಿಂದ ವಂಚಿತರಾಗುವುದು, ಮಾಡುವ ಕೆಲಸ, ಓದಿನಲ್ಲಿ ಗಮನ ಕೊಡಲಾಗದಿರುವುದರಿಂದ ಸಮಸ್ಯೆ ಗೀಡಾಗುತ್ತಾರೆ.



- ಮನೆ, ಶಾಲೆ, ವಿದ್ಯಾರ್ಥಿನಿಲಯ, ಆಟದಮೈದಾನ, ಗ್ರಂಥಾಲಯ, ಇತ್ಯಾದಿಗಳಲ್ಲಿ ಲೈಂಗಿಕ ಶೋಷಣೆಗೆ ಗುರಿಯಾದ ಮಕ್ಕಳಿಗೆ ಸುತ್ತಲಿನ ಸಮಾಜದೊಡನೆ ಹೊಂದಿಕೊಳ್ಳಲು ಕಷ್ಟವಾಗಬಹುದು. ಸಾಮಾಜಿಕ-ಮಾನಸಿಕ ತೊಂದರೆಗಳು, ಒತ್ತಡಗಳು ಉಂಟಾಗಬಹುದು. ದೀರ್ಘಕಾಲದವರೆಗೆ ನೋವು, ಬೇಸರ ಮರೆಯಾಗದೆ, ಯಾರೊಡನೆಯೂ ಬೆರೆಯಲು ಕಷ್ಟವಾಗಬಹುದು.

- ತನಗೆ ತೊಂದರೆ ಕೊಟ್ಟವರು ಎದುರು ಬಂದಾಗ ಹೆದರಿಕೆಯಿಂದ ತತ್ತರಿಸುವಂತಾದೀತು. ತನ್ನನ್ನು ಕುರಿತು ಋಣಾತ್ಮಕ ಭಾವನೆಗಳು ಉಂಟಾಗಿ ಸದಾಕಾಲಕ್ಕೂ ಅಸಹ್ಯವಾಗಬಹುದು.

- ಲೈಂಗಿಕ ಶೋಷಣೆಗೆ ಈಡಾದ ಮಕ್ಕಳು ಶೈಕ್ಷಣಿಕವಾಗಿ ಹಿಂದೆ ಬೀಳಬಹುದು, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಚುರುಕಾಗಿ ಪಾಲ್ಗೊಳ್ಳುವುದರಿಂದ ಹಿಂದೆ ಸರಿಯಬಹುದು.

- ಕೀಟಲೆಯ ನೆಪದಲ್ಲಿ ಸಹಪಾಠಿಗಳೇ ಲೈಂಗಿಕವಾಗಿ ಕಿರುಕುಳ ನೀಡಿದ್ದರೆ, ಅಥವಾ ಗುಟ್ಟಾಗಿಡಬೇಕು ಎಂದು ಹೆದರಿಸಿದ್ದರೆ, ತೊಂದರೆಗೀಡಾದ ಮಕ್ಕಳು ಸರಿತಪ್ಪುಗಳ ತಾಕಲಾಟದಲ್ಲಿ ಒದ್ದಾಡುತ್ತಿರುತ್ತಾರೆ. ಅಂತಹವರು ಈ ಗುಟ್ಟನ್ನು ಯಾರಿಗೆ ಹೇಳುವುದು ಎಂಬ ತೊಳಲಾಟದಲ್ಲೇ ಇದ್ದು ನಿಧಾನವಾಗಿ ಖಿನ್ನತೆಗೆ ಬೀಳಬಹುದು.



- ಅಂತರ್ಜಾಲದ ಮೂಲಕ ಸೈಬರ್ ಅಪರಾಧಕ್ಕೆ ಈಡಾದವರು, ಅಥವಾ ಮಕ್ಕಳ ಫೋಟೋ, ವಿವರಗಳನ್ನು ಕದ್ದು ಅವರನ್ನು ಹೆದರಿಸುತ್ತಿದ್ದರೆ, ಮಕ್ಕಳು ಆ ಭಯದಲ್ಲೇ ಮುಳುಗಿ ಹೋಗಿರುತ್ತಾರೆ.
- ಹೆದರಿಕೆ, ಆತಂಕದಿಂದ ಮನೋಬಲ ಕುಸಿದ ಮಕ್ಕಳು ಸ್ವಯಂ ಹಾನಿ ಮಾಡಿಕೊಳ್ಳುವುದು, ಆತ್ಮಹತ್ಯೆಯ ಅಪಾಯಕ್ಕೂ ಒಳಗಾಗುವ ಸಾಧ್ಯತೆಯಿದೆ.

ಮಕ್ಕಳ ಮೇಲೆ ಲೈಂಗಿಕ ಶೋಷಣೆ ಆಗುವ ಸಾಧ್ಯತೆಗಳ ಬಗ್ಗೆ ವಯಸ್ಕರೂ ಮಾಹಿತಿಯನ್ನು ಸ್ವಯಂ ಹೊಂದಬೇಕು. ಮಕ್ಕಳು ತಮಗಾದ ಲೈಂಗಿಕ ಶೋಷಣೆ ಕುರಿತು ದೂರು, ಮಾಹಿತಿ ನೀಡಿದಾಗ, ಯಾವುದೇ ವಯಸ್ಕರು ಮಗು ನೀಡುತ್ತಿರುವ ಮಾಹಿತಿ, ವಿಚಾರವನ್ನು ನಂಬುತ್ತಿದ್ದೇನೆ ಎಂಬ ಭಾವನೆ ನೀಡಬೇಕು, ತಿರಸ್ಕರಿಸಬಾರದು. ಶಾಲೆ, ವಿದ್ಯಾರ್ಥಿನಿಲಯಗಳಲ್ಲಿ 'ಮಕ್ಕಳ ರಕ್ಷಣಾ ನೀತಿ' ಜಾರಿಯಲ್ಲಿರುವುದರಿಂದ ಎಲ್ಲರೂ ಮಕ್ಕಳ ಹಕ್ಕುಗಳ ಜಾರಿ ಕುರಿತು ಸದಾ ಜಾಗೃತರಾಗಿರಬೇಕು. ಪೊಲೀಸ್ ಮತ್ತು ನ್ಯಾಯಾಲಯ ವ್ಯವಸ್ಥೆಯೂ ಮಕ್ಕಳ ಪರವಾದ ನಿಲುವುಗಳು, ಕ್ರಮಗಳನ್ನು ಕೈಗೊಂಡು, ಯಾರು ಮಕ್ಕಳನ್ನು ಲೈಂಗಿಕವಾಗಿ ಶೋಷಿಸಲು ಯತ್ನಿಸುತ್ತಾರೋ ಅಥವಾ ಶೋಷಿಸುತ್ತಾರೋ, ಅವರ ವಿರುದ್ಧ ಕಾನೂನು ಕ್ರಮವನ್ನು ಕೈಗೊಳ್ಳುತ್ತದೆ.



# ಅಧ್ಯಾಯ-2

# ಲೈಂಗಿಕ ಶೋಷಣೆಯ ವಿರುದ್ಧ ಮಕ್ಕಳನ್ನು ರಕ್ಷಿಸಲು POCSO ಕಾಯಿದೆ

## 2.1 POCSO ಕಾಯಿದೆಯ ಹಿನ್ನೆಲೆ :

ಬಹಳಷ್ಟು ಬಾಲಕ ಬಾಲಕಿಯರು ಬಾಲ್ಯದಲ್ಲೇ ಲೈಂಗಿಕ ಕಿರುಕುಳ, ಲೈಂಗಿಕ ಶೋಷಣೆ, ಲೈಂಗಿಕ ದೌರ್ಜನ್ಯ ಅನುಭವಿಸಿರುತ್ತಾರೆ. ಈ ವಿಚಾರದ ಬಗ್ಗೆ ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಸಚಿವಾಲಯ 2006ರಲ್ಲಿ ನಡೆಸಿದ ಅಧ್ಯಯನದಲ್ಲಿ 'ವಯಸ್ಕರಾಗಿರುವ ನಾಲ್ಕು ಜನರಲ್ಲಿ ಮೂವರು ತಮ್ಮ ಬಾಲ್ಯದಲ್ಲಿ ಶಿಶುಪೀಡಕರಿಂದ ಹಿಂಸೆಗೆ ಒಳಗಾಗಿರುತ್ತಾರೆ' ಎಂದು ಉಲ್ಲೇಖಿಸಲಾಗಿದೆ. ಮಕ್ಕಳ ಮೇಲೆ ಉಂಟಾದ ಹಿಂಸೆಯು ದೈಹಿಕ, ಮಾನಸಿಕ, ಆರ್ಥಿಕ ಮತ್ತು ಲೈಂಗಿಕ ಶೋಷಣೆಗಳ ರೂಪದಲ್ಲಿದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಮಕ್ಕಳನ್ನು ಲೈಂಗಿಕ ಶೋಷಣೆಯಿಂದ ರಕ್ಷಿಸಲು ಕಠಿಣ ಕಾನೂನು ಸಿದ್ಧಪಡಿಸಿದರ ಪರಿಣಾಮವೇ, 'ಮಕ್ಕಳ ಮೇಲಾಗುವ ಲೈಂಗಿಕ ಅಪರಾಧಗಳ ತಡೆ ಕಾಯ್ದೆ 2012' (Protection Of Children from Sexual Offences Act 2012). ಇದನ್ನು ಚಿಕ್ಕದಾಗಿ 'POCSO' ಎನ್ನಲಾಗುತ್ತದೆ.

### POCSO ಕಾಯಿದೆಯ ವಿಶಿಷ್ಟತೆಗಳು :

- ಮಕ್ಕಳೊಡನೆ ಎಲ್ಲಾ ವಯಸ್ಕರು ತಾಳ್ಮೆಯಿಂದ, ಸ್ನೇಹದಿಂದ ವರ್ತಿಸಬೇಕು.
- ಪೊಲೀಸರು ಮಕ್ಕಳಿಂದ ಮಾಹಿತಿ ಸಂಗ್ರಹಿಸುವಾಗ ಯಾವುದೇ ರೀತಿಯ ಒತ್ತಡ ಹಾಕಬಾರದು.
- ನ್ಯಾಯಾಲಯಗಳಲ್ಲಿ ಮಕ್ಕಳ ಸ್ನೇಹಿ ವಾತಾವರಣ ಇರಬೇಕು.
- ಮಕ್ಕಳು ಮತ್ತು ಮಕ್ಕಳಿಗೆ ಸಂಬಂಧಿಸಿದವರ ಮೇಲೆ ನಡೆಸಲಾಗುವ ವಿಚಾರಣೆಯನ್ನು ಗೌಪ್ಯವಾಗಿರಿಸಬೇಕು.
- ಮಾಧ್ಯಮಗಳಲ್ಲಿ ಮಕ್ಕಳ ಹೆಸರು, ವಿವರಗಳನ್ನು ಬಹಿರಂಗಪಡಿಸಬಾರದು.

ಯಾವುದಾದರೂ ಬಾಲಕ ಅಥವಾ ಬಾಲಕಿ ದುರುಪಯೋಗಕ್ಕೆ ಒಳಗಾಗಿದ್ದರೆ, ಅಂತಹ ಮಕ್ಕಳಿಗೆ ಮಾನಸಿಕ ಧೈರ್ಯ ತುಂಬಿ, ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಲು ಈ ಕಾಯಿದೆ ಮತ್ತು ಅದರ ಜಾರಿ ಪ್ರಾಮುಖ್ಯತೆ ನೀಡಿದೆ.

### POCSO ಕಾಯಿದೆಯಲ್ಲಿರುವ ಮಕ್ಕಳ ಸ್ನೇಹಿ ಅಂಶಗಳು :

- ಸಾಮಾನ್ಯವಾಗಿ ಜನರಲ್ಲಿರುವ ತಪ್ಪು ಭಾವನೆ ಪೊಲೀಸ್ ಠಾಣೆಗೆ ಹೋಗಬಾರದು. ದೂರು ಕೊಡುವುದೆಂದರೆ ಬಹಳ ಕಷ್ಟ, ಪೊಲೀಸ್ ವಿಚಾರಣೆಗೆ ಒಳಪಡುವುದೆಂದರೆ ಯಾರಿಗೂ ಬೇಡದ ವಿಚಾರ. ಅದರಲ್ಲೂ ಮಕ್ಕಳನ್ನು ಪೊಲೀಸ್ ಠಾಣೆಗೆ ದೂರು ಕೊಡಲೋ, ಇಲ್ಲವೇ ವಿಚಾರಣೆಗಳಿಗೆ ಕರೆದೊಯ್ಯುವುದೆಂದರೆ ಅದು ಅತ್ಯಂತ ಕಠಿಣವಾದುದು ಇತ್ಯಾದಿ. ಆದರೆ ಈ ಕಾಯ್ದೆ ಮಕ್ಕಳ ಹಿತದೃಷ್ಟಿಗೆ ಪ್ರಾಮುಖ್ಯತೆ ನೀಡಿದೆ ಹಾಗೂ ಪ್ರತಿ ಹಂತದಲ್ಲೂ ಮಕ್ಕಳ ರಕ್ಷಣೆ ಹಾಗೂ ಅಭಿವೃದ್ಧಿಗೆ ಗಮನ ನೀಡಿದೆ.
- ಲೈಂಗಿಕ ಶೋಷಣೆಗೆ ಗುರಿಯಾದ ಮಕ್ಕಳು ಅವರಿಗೆ ಯಾವ ಸ್ಥಳ ಸುರಕ್ಷಿತವಾಗಿದೆ ಎಂದು ನಂಬುತ್ತಾರೋ ಅಂತಹ ಸ್ಥಳಕ್ಕೆ ಪೊಲೀಸರು ತಾವೇ ಹೋಗಿ ಮಾತನಾಡಿಸಬೇಕು.

- ಮಕ್ಕಳ ಮನೆ ಅಥವಾ ಮಕ್ಕಳ ಸ್ನೇಹಿ ವಾತಾವರಣದಲ್ಲಿ ಮಕ್ಕಳ ಹೇಳಿಕೆಗಳನ್ನು ತೆಗೆದುಕೊಳ್ಳಬೇಕು.
- ವಿಚಾರಣಾ ಸಂದರ್ಭದಲ್ಲಿ ಮಹಿಳಾ ಅಥವಾ ಪುರುಷ ಪೊಲೀಸ್ ಅಧಿಕಾರಿಗಳು (ಸಬ್‌ಇನ್ಸ್‌ಪೆಕ್ಟರ್ ಮತ್ತು ಮೇಲಿನ ಹಂತದವರು) ಪೊಲೀಸ್ ಸಮವಸ್ತ್ರದಲ್ಲಿರದೆ ಸಾಮಾನ್ಯರಂತೆ ಉಡುಪು ಧರಿಸಿರಬೇಕು. ತಮ್ಮ ಹೆಸರು ಮತ್ತು ಹುದ್ದೆ ಕುರಿತು ವಿವರ ಕೊಡಬೇಕು
- ಮಕ್ಕಳಿಂದ ಹೇಳಿಕೆ ತೆಗೆದುಕೊಳ್ಳುವಾಗ ಮಕ್ಕಳು ಹೊರತುಪಡಿಸಿ ಯಾವುದೇ ಕಾರಣಕ್ಕೂ ಇತರರು ಇರಬಾರದು. ಆದರೆ ಮಗುವಿಗೆ ಬೆಂಬಲ ನೀಡುವ ವ್ಯಕ್ತಿಗಳು ಇರಬಹುದು.
- ಮಕ್ಕಳನ್ನು ಪದೇ ಪದೇ ಪೊಲೀಸ್ ಠಾಣೆಗೆ ಕರೆಸುವಂತಿಲ್ಲ.
- ಮಕ್ಕಳ ವಿವರಗಳನ್ನು ಗೋಪ್ಯವಾಗಿ ಇರಿಸಬೇಕು. ಮಾಧ್ಯಮಗಳಿಗೆ ಹೇಳುವುದಾಗಲಿ, ಸಾಮಾಜಿಕ ಜಾಲ ತಾಣಗಳಲ್ಲಿ ಹಾಕಿ ಪ್ರಸಾರ ಮಾಡುವುದಾಗಲಿ ಮಾಡಬಾರದು.
- ಹೆಣ್ಣುಮಕ್ಕಳ ವೈದ್ಯಕೀಯ ತಪಾಸಣೆಯನ್ನು ಮಹಿಳಾ ವೈದ್ಯರು ಮಾತ್ರ ಮಾಡಬೇಕು. ಮಕ್ಕಳು ನಂಬುವ ಪೋಷಕರು ಅಥವಾ ಆಪ್ತ ಸಮಾಲೋಚಕರು ಯಾರಾದರೊಬ್ಬರು ಆ ಸಮಯದಲ್ಲಿ ಮಕ್ಕಳೊಡನೆ ಇರಬೇಕು.
- ಮಕ್ಕಳ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುವಾಗ, ಮಕ್ಕಳು ಹೇಳಿಕೆ ನೀಡುವ ಸಂದರ್ಭದಲ್ಲಿ ಮಗುವಿಗೆ ಆಯಾಸವಾದರೆ, ಮಾನಸಿಕವಾಗಿ ಒತ್ತಡಕ್ಕೀಡಾದರೆ ಮಧ್ಯಮಧ್ಯ ವಿಶ್ರಮಿಸಲು ಬಿಡುವು ನೀಡಲಾಗುತ್ತದೆ.
- ವಿಚಾರಣೆ, ಹೇಳಿಕೆ ಅಥವಾ ಸಾಕ್ಷ್ಯ ನೀಡುವ ಸಂದರ್ಭದಲ್ಲಿ ಮಕ್ಕಳೊಂದಿಗೆ ಅವರ ಪೋಷಕರು, ಗೆಳೆಯರು ಅಥವಾ ಆಪ್ತ ಸಮಾಲೋಚಕರು ಇರಬಹುದು.
- ಮಕ್ಕಳಿಗೆ ಸಹಕರಿಸಲು ಬೆಂಬಲ ವ್ಯಕ್ತಿಗಳು ಇರುತ್ತಾರೆ. ಅವರು ಮಕ್ಕಳಿಗೆ ಈ ಕೆಳಕಂಡ ರೀತಿ ಬೆಂಬಲವನ್ನು ಒದಗಿಸುತ್ತಾರೆ.
    - ಕಾನೂನು, ಅಪರಾಧಕ್ಕೆ ವಿಧಿಸಬಹುದಾದ ಶಿಕ್ಷೆ, ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಯುತ್ತಿರುವ ಹಂತಗಳ ಬಗ್ಗೆ ಮಾಹಿತಿ ನೀಡುತ್ತಾರೆ,
    - ತೊಂದರೆಗೀಡಾದ ಮಗುವಿಗೆ ನ್ಯಾಯಾಲಯ ಮತ್ತು ಸರ್ಕಾರ ನೀಡಬೇಕಾದ ಪರಿಹಾರ, ವೈದ್ಯಕೀಯ ನೆರವು ಇತ್ಯಾದಿ ಕುರಿತು ವಿವರಗಳನ್ನು ಒದಗಿಸುತ್ತಾರೆ.
    - ಆಪ್ತಸಮಾಲೋಚನೆ ಕೈಗೊಂಡು ಮಗುವಿನಲ್ಲಿ ಮಾನಸಿಕ ಸ್ಥೈರ್ಯ ತುಂಬುತ್ತಾರೆ.
- ವಕೀಲರು ಮಕ್ಕಳಿಗೆ ಮುಜುಗುರ ತರುವ, ಬೇಸರ ಉಂಟುಮಾಡುವ ಪ್ರಶ್ನೆಗಳನ್ನು ಕೇಳುವಂತಿಲ್ಲ.

- ಮಕ್ಕಳು ತಮಗಾಗಿರುವ ಕಿರುಕುಳ, ದೌರ್ಜನ್ಯದ ವಿಷಯವನ್ನು ಯಾರೊಂದಿಗಾದರೂ (ಪೋಷಕರು, ಶಿಕ್ಷಕರು, ವೈದ್ಯರು, ಆಪ್ತಸಮಾಲೋಚಕರು, ಇತ್ಯಾದಿ) ಹಂಚಿಕೊಂಡಿದ್ದರೆ ಅವರು ಮಗುವಿಗೆ ಸಂಬಂಧಪಟ್ಟವರಿಗೆ ತಿಳಿಸಿ, ನಂತರ ಪೊಲೀಸ್ ದೂರು ದಾಖಲು ಮಾಡಬೇಕು.
- ಮಕ್ಕಳಿಂದಲೇ ಇತರ ಮಕ್ಕಳ ಮೇಲೆ ಲೈಂಗಿಕ ಶೋಷಣೆಯ ಕೃತ್ಯ / ತಪ್ಪು ಆಗಿದ್ದರೆ, ಅಂತಹ ತಪ್ಪು ಮಾಡಿದ ಮಕ್ಕಳನ್ನು ಮಕ್ಕಳ ನ್ಯಾಯ ಮಂಡಳಿಯ ಎದುರು ಹಾಜರುಪಡಿಸಿ, ಮುಂದಿನ ವಿಚಾರಣೆಯನ್ನು ನಡೆಸಲಾಗುತ್ತದೆ.

## 2.2 POCSO ಕಾಯಿದೆ ನಿಗದಿಪಡಿಸಿರುವ ಅಪರಾಧಗಳು ಮತ್ತು ಶಿಕ್ಷೆ

POCSO ಕಾಯಿದೆ ಅಂದರೆ ಲೈಂಗಿಕ ಅಪರಾಧಗಳ ವಿರುದ್ಧ ಮಕ್ಕಳ ರಕ್ಷಣಾ ಕಾಯಿದೆ 2012, (ತಿದ್ದುಪಡಿ 2019) ರಂತೆ ಮಕ್ಕಳ ಮೇಲೆ ನಡೆಯುವ ಈ ಕೆಳಗಿನ ಲೈಂಗಿಕ ತೊಂದರೆಗಳನ್ನು ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಿದೆ.

- 18 ವರ್ಷದೊಳಗಿನ ಮಕ್ಕಳಿಗೆ ಲೈಂಗಿಕವಾಗಿ ತೊಂದರೆ ನೀಡುವ, ಅಂದರೆ, ಮಕ್ಕಳ ಬೆತ್ತಲೆ ಫೋಟೋಗಳನ್ನು ತೆಗೆದುಕೊಳ್ಳುವುದು, ಮತ್ತು ಬೇರೆಯವರಿಗೆ ಹಂಚುತ್ತೇವೆ ಎಂದು ಹೆದರಿಸುವುದು, ಇತ್ಯಾದಿ
- ಮಕ್ಕಳ ಖಾಸಗಿ ಅಂಗಗಳನ್ನು ಮುಟ್ಟುವುದು, ಇತರರ ಖಾಸಗಿ ಅಂಗಗಳನ್ನು ಮುಟ್ಟುವಂತೆ ಒತ್ತಾಯಿಸುವುದು, ಹೆದರಿಸುವುದು.
- ಮಕ್ಕಳನ್ನು ಹಿಂಬಾಲಿಸಿ ಲೈಂಗಿಕವಾಗಿ ಸಂಬಂಧ ಹೊಂದಲು ಪೀಡಿಸುವುದು,
- ಲೈಂಗಿಕವಾಗಿ ಸಂಭೋಗಿಸುವುದು, ಅತ್ಯಾಚಾರ ಮಾಡುವುದು, ಹೀಗೆ ಯಾವುದೇ ರೀತಿ ಲೈಂಗಿಕವಾಗಿ ತೊಂದರೆ ಮಾಡುವುದು.



ಈ ಕಾಯಿದೆ ನಿಗದಿಪಡಿಸಿದಂತೆ ಮಕ್ಕಳ ಮೇಲಿನ ಲೈಂಗಿಕ ಶೋಷಣೆಯ ಪ್ರಕರಣಗಳು ನಡೆದಾಗ ವಿಚಾರಣೆ ನಡೆಸಲು ಮಕ್ಕಳಿಗೆ ಅನುಕೂಲವಾಗುವಂತೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು POCSO ಕಾಯಿದೆ ನಿರ್ದೇಶನ ನೀಡಿದೆ.

## POCSO ಕಾಯಿದೆಯಡಿ ಮಕ್ಕಳ ಮೇಲಿನ ಲೈಂಗಿಕ ಶೋಷಣೆಯ ವಿರುದ್ಧ ವಿಧಿಸಲಾಗುವ ಅಪರಾಧ ಮತ್ತು ದಂಡನೆಗಳು:

| POCSO ಕಾಯ್ದೆಯಡಿ ಸೆಕ್ಷನ್ | ಮಕ್ಕಳ ಮೇಲ್ ಎಸಗುವ ಲೈಂಗಿಕ ಅಪರಾಧ | POCSO ಕಾಯ್ದೆಯಡಿ ಸೆಕ್ಷನ್ | ಸಂಬಂಧಿಸಿದ ಲೈಂಗಿಕ ಅಪರಾಧಗಳಿಗೆ ವಿಧಿಸಲಾಗುವ ಶಿಕ್ಷೆ |
|---|---|---|---|
| ಸೆಕ್ಷನ್ 3 | ಮಕ್ಕಳ ಮೇಲೆ ಭೇದಕ ಲೈಂಗಿಕ ದೌರ್ಜನ್ಯ ಎಸಗಿದಲ್ಲಿ | ಸೆಕ್ಷನ್ 4 | ಹತ್ತು ವರ್ಷಗಳಿಗೆ ಕಡಿಮೆ ಇಲ್ಲದಂತೆ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಬಹುದು. ಇದು ಜೀವಾವಧಿ ಶಿಕ್ಷೆಯವರೆಗೂ ವಿಸ್ತರಿಸಬಹುದು.<br><br>ಒಂದು ವೇಳೆ 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವಿನ ಮೇಲೆ ಲೈಂಗಿಕ ಆಕ್ರಮಣ ಎಸಗಿದ್ದಲ್ಲಿ, ಇಪ್ಪತ್ತು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಾರಾಗೃಹ ವಾಸದ ಶಿಕ್ಷೆಗೆ ಗುರಿಯಾಗುತ್ತಾರೆ ಮತ್ತು ಅದು ಜೀವಾವಧಿ ಶಿಕ್ಷೆಯಾಗಿ ವಿಸ್ತರಣೆಯಾಗಬಹುದು. |
| ಸೆಕ್ಷನ್ 5 | ಒಂದು ವೇಳೆ ಭೇದಕ ಲೈಂಗಿಕ ದೌರ್ಜನ್ಯವನ್ನು ಪೊಲೀಸ್ ಅಧಿಕಾರಿಗಳು, ಶಿಕ್ಷಕರು ಇನ್ನಿತರೆ ಸರ್ಕಾರಿ ಅಧಿಕಾರಿಗಳು ಅಥವಾ ಮಕ್ಕಳ ಪಾಲನೆ, ಪೋಷಣೆಯ ಜವಾಬ್ದಾರಿ ಇರುವವರು ಎಸಗಿದ್ದಲ್ಲಿ ಅದನ್ನು ತೀವ್ರ ಬೇಧಕ ಲೈಂಗಿಕ ದೌರ್ಜನ್ಯ ಎಂದು ಪರಿಗಣಿಸಲಾಗುತ್ತದೆ. | ಸೆಕ್ಷನ್ 6 | ಇಂತಹ ಪ್ರಕರಣಗಳಲ್ಲಿ ಇಪ್ಪತ್ತು ವರ್ಷಗಳಿಗಿಂತಲೂ ಕಡಿಮೆಯಿಲ್ಲದ ಅವಧಿಗೆ ಕಠಿಣ ಕಾರಾಗೃಹ ವಾಸದ ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ. ಇದು ಜೀವಾವಧಿ ಯವರೆಗೂ ಮುಂದುವರಿಯಬಹುದು ಮತ್ತು / ಅಥವಾ ಮರಣದಂಡನೆಯನ್ನೂ ಸಹ ವಿಧಿಸಬಹುದಾಗಿದೆ. |
| ಸೆಕ್ಷನ್ 7 | ಲೈಂಗಿಕ ಉದ್ದೇಶದಿಂದ ಮಕ್ಕಳ ಖಾಸಗಿ ಅಂಗಗಳನ್ನು ಮುಟ್ಟುವುದು ಅಥವಾ ಮಕ್ಕಳಿಂದ ಬೇರೆಯವರು ಮುಟ್ಟಿಸಿ ಕೊಳ್ಳುವುದು ಅಥವಾ ಮುಟ್ಟುವಂತೆ ಮಾಡುವುದು. ಅಂದರೆ ಲೈಂಗಿಕ ಉದ್ದೇಶದಿಂದ ಸಂಭೋಗ ಹೊರತುಪಡಿಸಿ ಮಕ್ಕಳ ದೇಹವನ್ನು ಸ್ಪರ್ಶಿಸಿದರೆ ಅದನ್ನು ಲೈಂಗಿಕ ದೌರ್ಜನ್ಯ ಎಂದು ಪರಿಗಣಿಸ ಲಾಗುವುದು. | ಸೆಕ್ಷನ್ 8 | ಈ ರೀತಿ ತೊಂದರೆ ಮಾಡುವವರಿಗೆ ಮೂರು ವರ್ಷಗಳಿಗೆ ಕಡಿಮೆ ಇಲ್ಲದಂತೆ, ಐದು ವರ್ಷದವರೆಗೂ ಕಾರಾಗೃಹವಾಸದ ಶಿಕ್ಷೆ ಮತ್ತು ದಂಡವನ್ನೂ ವಿಧಿಸಲಾಗುತ್ತದೆ. |

| POCSO ಕಾಯ್ದೆಯಡಿ ಸೆಕ್ಷನ್ | ಮಕ್ಕಳ ಮೇಲೆ ಎಸಗುವ ಲೈಂಗಿಕ ಅಪರಾಧ | POCSO ಕಾಯ್ದೆಯಡಿ ಸೆಕ್ಷನ್ | ಸಂಬಂಧಿಸಿದ ಲೈಂಗಿಕ ಅಪರಾಧಗಳಿಗೆ ವಿಧಿಸಲಾಗುವ ಶಿಕ್ಷೆ |
|---|---|---|---|
| ಸೆಕ್ಷನ್ 9 | ಈ ಮೇಲೆ ಹೇಳಿದಂತಹ ಅಪರಾಧಗಳನ್ನು ಸರ್ಕಾರಿ ಅಧಿಕಾರಿಗಳು ಅಥವಾ ಮಕ್ಕಳ ಆರೈಕೆ ಮತ್ತು ಮಕ್ಕಳನ್ನು ರಕ್ಷಿಸುವ ಜವಾಬ್ದಾರಿ ಹೊಂದಿರುವ ವ್ಯಕ್ತಿಗಳು ಮಾಡಿದ್ದಲ್ಲಿ, ಅದನ್ನು ತೀವ್ರ ಲೈಂಗಿಕ ದೌರ್ಜನ್ಯ ಎಂದು ಪರಿಗಣಿಸಲಾಗುವುದು. | ಸೆಕ್ಷನ್ 10 | 5 ವರ್ಷಗಳಿಗೆ ಕಡಿಮೆ ಇಲ್ಲದಂತೆ 7 ವರ್ಷಗಳವರೆಗೂ ಮುಂದುವರೆಸುವ ಕಾರಾಗೃಹವಾಸ ಶಿಕ್ಷೆ ಹಾಗೂ ದಂಡವನ್ನೂ ಕೂಡ ವಿಧಿಸಬಹುದಾಗಿದೆ. |
| ಸೆಕ್ಷನ್ 11 | ಲೈಂಗಿಕ ಉದ್ದೇಶದಿಂದ ಪದಗಳನ್ನು ಬಳಸುವುದು ಮತ್ತು ಶಬ್ದಮಾಡುವುದು, ಅಭಿನಯ, ಸನ್ನೆ ಇನ್ನಿತರೆ ಚಟುವಟಿಕೆಗಳನ್ನು ಮಾಡಿದಲ್ಲಿ ಲೈಂಗಿಕ ಕಿರುಕುಳವೆಂದು ಪರಿಗಣಿಸಲಾಗುವುದು. | ಸೆಕ್ಷನ್ 12 | ಮೂರು ವರ್ಷಗಳವರೆಗೂ ಜೈಲು ಶಿಕ್ಷೆ ಹಾಗೂ ದಂಡವನ್ನು ವಿಧಿಸಬಹುದು. |
| ಸೆಕ್ಷನ್ 13 | ಮಕ್ಕಳನ್ನು ಲೈಂಗಿಕ ಚಿತ್ರಗಳ ತಯಾರಿಗೆ ಬಳಸಿದರೆ ಮತ್ತು ಮಕ್ಕಳ ಲೈಂಗಿಕ ಚಿತ್ರ ತೆಗೆದಿಟ್ಟುಕೊಳ್ಳುವುದನ್ನು ಅಪರಾಧ ಎಂದು ಪರಿಗಣಿಸಲಾಗುವುದು. | ಸೆಕ್ಷನ್ 14 | ಐದು ವರ್ಷಗಳಿಂದ ಏಳು ವರ್ಷಗಳವರೆಗೂ ಶಿಕ್ಷೆ ಮತ್ತು ದಂಡ ವಿಧಿಸಬಹುದು. |
| ಸೆಕ್ಷನ್ 15 | ಮಕ್ಕಳನ್ನು ಒಳಗೊಂಡಿರುವ ಅಶ್ಲೀಲ ಚಿತ್ರಗಳನ್ನು ಯಾರೇ ಆಗಲಿ ಇರಿಸಿ ಕೊಳ್ಳುವುದು ಅಪರಾಧವೆಂದು ಪರಿಗಣಿಸ ಲಾಗುವುದು. | | ಈ ಅಪರಾಧಕ್ಕೆ ಐದರಿಂದ ಏಳು ವರ್ಷಗಳವರೆಗೂ ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ. |
| ಸೆಕ್ಷನ್ 16 | ಲೈಂಗಿಕ ಅಪರಾಧಗಳನ್ನು ಮಾಡಲು ಯಾರಾದರೂ ಯಾರಿಗಾದರೂ ನೆರವು ನೀಡುವುದು ಅಪರಾಧವಾಗುತ್ತದೆ. | ಸೆಕ್ಷನ್ 17 | ಎಸಗಿದ ಅಪರಾಧ ಎಂತಹ ದ್ದಾಗಿರುತ್ತದೋ, ಅದಕ್ಕೆ ಯಾವ ಶಿಕ್ಷೆ ವಿಧಿಸಲಾಗುತ್ತದೋ, ಅಷ್ಟೇ ಶಿಕ್ಷೆಯನ್ನು ನೆರವು ನೀಡಿದವರಿಗೂ ವಿಧಿಸಲಾಗುತ್ತದೆ. |
| ಸೆಕ್ಷನ್ 18 | ಈ ಮೇಲೆ ತಿಳಿಸಿರುವ ಯಾವುದೇ ಲೈಂಗಿಕ ಅಪರಾಧವನ್ನು ಎಸಗಲು ನಡೆಸಿದ ಪ್ರಯತ್ನವೂ ಅಪರಾಧವಾಗುತ್ತದೆ. | | ಕನಿಷ್ಟ ಒಂದೂವರೆ ವರ್ಷ ಕಾರಾಗೃಹ ಶಿಕ್ಷೆ ಮತ್ತು ದಂಡ. ಅದು ಅತಿ ದೀರ್ಘಾವಧಿ ಅಥವಾ ಜೀವಾವಧಿ ಶಿಕ್ಷೆಯೂ ಆಗಬಹುದು. |
| ಸೆಕ್ಷನ್ 21 | ಮಕ್ಕಳ ಮೇಲೆ ಆಗಿರಬಹುದಾದ ಲೈಂಗಿಕ ಅಪರಾಧದ ಬಗ್ಗೆ ಮಾಹಿತಿ ಇರುವವರು ಪೊಲೀಸ್ ದೂರು ನೀಡದಿರುವುದು ಸಹ ಅಪರಾಧ ಎಂದು ಪರಿಗಣಿಸಲಾಗುವುದು. | | ಆರು ತಿಂಗಳ ಕಾರಾಗೃಹ ಶಿಕ್ಷೆ. |

| POCSO ಕಾಯ್ದೆಯಡಿ ಸೆಕ್ಷನ್ | ಮಕ್ಕಳ ಮೇಲೆ ಎಸಗುವ ಲೈಂಗಿಕ ಅಪರಾಧ | POCSO ಕಾಯ್ದೆಯಡಿ ಸೆಕ್ಷನ್ | ಸಂಬಂಧಿಸಿದ ಲೈಂಗಿಕ ಅಪರಾಧಗಳಿಗೆ ವಿಧಿಸಲಾಗುವ ಶಿಕ್ಷೆ |
|---|---|---|---|
| ಸೆಕ್ಷನ್ 22 | ಮಕ್ಕಳ ಮೇಲೆ ಲೈಂಗಿಕ ಶೋಷಣೆ ಆಗಿದೆ ಎಂದು ಸುಳ್ಳು ದೂರು ನೀಡಲು ಮನವೊಲಿಸುವ ಅಥವಾ ಒತ್ತಾಯ ಮಾಡುವ ವಯಸ್ಕರಿಗೆ. | | ಆರು ತಿಂಗಳ ಕಾರಾಗೃಹ ಶಿಕ್ಷೆ. |
| ಸೆಕ್ಷನ್ 23 | ಲೈಂಗಿಕ ಶೋಷಣೆಗೆ ಗುರಿಯಾದ ಮಗು/ಮಕ್ಕಳ ಫೋಟೋ, ವಿವರಗಳನ್ನು ಪ್ರಕಟಿಸಿದರೆ | | ಆರು ತಿಂಗಳಿಂದ ಹಿಡಿದು ಒಂದು ವರ್ಷದವರೆಗಿನ ಕಾರಾಗೃಹ ಶಿಕ್ಷೆ ಮತ್ತು ದಂಡ. |

POCSO ಕಾಯಿದೆಯಲ್ಲಿ ತಿಳಿಸಿರುವಂತಹ ಲೈಂಗಿಕ ಅಪರಾಧಗಳನ್ನು ಮಕ್ಕಳೇ ಇತರ ಮಕ್ಕಳ ವಿರುದ್ಧ ಮಾಡಿದ್ದೇ ಆದಲ್ಲಿ, ಅಂತಹವರ ಮೇಲೂ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಹಾಗಾಗಿ ಇಂತಹ ತೊಂದರೆಗಳಾದಾಗ, ಮಕ್ಕಳು ಹೆದರದೇ ಆ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗುವಂತೆ ಜಾಗೃತಿ ಮೂಡಿಸುವುದು. ದೂರು ನೀಡುವ ಮೊದಲು, ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳು, ಪೋಷಕರು ಮತ್ತು ಮಕ್ಕಳಿಗೆ ನಂಬಿಕೆ ಇರುವ ಮತ್ತು ಮಕ್ಕಳ ಮೇಲೆ ಆಗಬಹುದಾದ ಲೈಂಗಿಕ ಅಪರಾಧ ತಡೆಯಲು ಸಹಾಯ ಮಾಡುವವರಿಗೆ ತಿಳಿಸುವಂತೆ ಮಕ್ಕಳಲ್ಲಿ ಅರಿವು ಮೂಡಿಸಬೇಕು.

## 2.3 ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2015–2021ರ ತಿದ್ದುಪಡಿಗಳೊಂದಿಗೆ




ಮಕ್ಕಳ ನ್ಯಾಯ ಕಾಯಿದೆ ಈ ಸಮಾಜದ ಪ್ರತಿಯೊಬ್ಬರಿಗೂ ಸಂಬಂಧಿಸಿದ್ದು, ಮಕ್ಕಳೊಡನೆ ಯಾರೇ ಒಡನಾಡುತ್ತಿದ್ದರೆ ಅಂತಹವರಿಗೆ ಈ ಕಾಯಿದೆಯ ಮೂಲ ಅಂಶಗಳ ಪರಿಚಯವಿರಲೇಬೇಕು. ಮಕ್ಕಳು, ಕುಟುಂಬ, ಮಕ್ಕಳೊಡನೆ ಕೆಲಸ ಮಾಡುವ ಸಂಸ್ಥೆಗಳು, ಶಾಲೆಗಳು, ವಿದ್ಯಾರ್ಥಿ ನಿಲಯಗಳು ಮತ್ತು ತರಬೇತಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರು, ನಿರ್ವಹಿಸುವವರಿಗೆ ಪರಿಚಯವಿರಲೇಬೇಕು. ವಿವಿಧ ಹಿನ್ನೆಲೆಯ ಮಕ್ಕಳ ಪೋಷಣೆ, ಆರೈಕೆ, ರಕ್ಷಣೆ, ಅವಶ್ಯಕತೆಗಳ ಪೂರೈಕೆ, ಅನಾಥರು, ಮನೆಯನ್ನು ತೊರೆದವರು, ಓಡಿಸಲ್ಪಟ್ಟವರು, ಹೆತ್ತವರಿಂದ ತೊರೆಯಲ್ಪಟ್ಟವರು, ಕಾನೂನಿನೊಡನೆ ಸಂಘರ್ಷಕ್ಕೆ ಬಿದ್ದ ಮಕ್ಕಳು, ಕಾನೂನಿನ ಸಂಪರ್ಕಕ್ಕೆ ಬಂದ ಮಕ್ಕಳು ಹಾಗು ಇತರರಿಂದ ಹಿಂಸೆ, ತೊಂದರೆ, ಶೋಷಣೆ, ಅಪರಾಧಕ್ಕೀಡಾದ ಮಕ್ಕಳು, ಹೀಗೆ ವಿವಿಧ ಪರಿಸ್ಥಿತಿಗಳಿಗೆ ಅನುಗುಣವಾಗಿ 18 ವರ್ಷದೊಳಗಿನ ಮಕ್ಕಳಿಗೆ ಭಾರತ ಸರ್ಕಾರ ನೀಡುವ ಸಾಂವಿಧಾನಿಕ ರಕ್ಷಣೆಯ ಅನಾವರಣ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2015. [ಗಮನಿಸಿ : ಈ ಕಾಯಿದೆಯನ್ನು ಹೊರಡಿಸುವ ಮೂಲಕ ಈ ಹಿಂದೆ ಇದ್ದ ಮಕ್ಕಳ ನ್ಯಾಯ ಕಾಯಿದೆಯನ್ನು (1986, 2000) ರದ್ದುಪಡಿಸಲಾಗಿದೆ].

ಈ ಕಾಯಿದೆಯ ಮೂಲ ತತ್ವಗಳಲ್ಲಿ ಪ್ರಮುಖವಾದುದು, 18 ವರ್ಷದ ತನಕ ಮಕ್ಕಳನ್ನು ಮುಗ್ಧರೆಂದು ಪರಿಗಣಿಸಬೇಕು. ಮಕ್ಕಳ ಘನತೆಗೆ ಗೌರವ, ಮಕ್ಕಳ ಹಿತದೃಷ್ಟಿಯಿಂದ ನಡೆದುಕೊಳ್ಳಬೇಕು. ಮಕ್ಕಳ ಅಭಿಪ್ರಾಯಕ್ಕೆ ಗೌರವ, ಮಕ್ಕಳ ಜವಾಬ್ದಾರಿ ಕುಟುಂಬಗಳದ್ದು. ಮಕ್ಕಳನ್ನು ಸಂರಕ್ಷಿಸುವ ಹೊಣೆ ಎಲ್ಲರದ್ದು. ಮಕ್ಕಳನ್ನು ಆದಷ್ಟು ಬೇಗನೆ ಅವರ ಮೂಲ ತಾಯಿ ತಂದೆ ಅಥವಾ ಪೋಷಕರೊಡನೆ ಸೇರಿಸುವುದು, ಮಕ್ಕಳಿಗೆ ಕಳಂಕಿತ ರಹಿತರಾಗಿ ಬಾಳು ಮುಂದುವರೆಸುವ ಹಕ್ಕನ್ನು ಮಾನ್ಯ ಮಾಡುವುದು ಹಾಗೂ ಮಕ್ಕಳನ್ನು ತೀರಾ ಅನಿವಾರ್ಯವಾದಲ್ಲಿ ಮಾತ್ರ ಸಂಸ್ಥೆಗಳಲ್ಲಿ ಇರಿಸುವುದು ಮಕ್ಕಳ ನ್ಯಾಯ ಜಾರಿಗಾಗಿ ಪ್ರಮುಖವಾಗಿ ಮೂರು ಇಲಾಖೆಗಳ ಕೆಲಸ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗೃಹ/ಪೊಲೀಸ್ ಮತ್ತು ನ್ಯಾಯಾಲಯಗಳು) ಗಮನಕ್ಕೆ ಬರುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ನಡೆಸುವುದು ಶಿಶು ಮಂದಿರಗಳು, ಮಕ್ಕಳ ನಿಲಯಗಳು, ಪರಿವೀಕ್ಷಣಾಲಯಗಳು ಹಾಗೂ ಇಲಾಖೆ ಸರ್ಕಾರದೊಡನೆ ಸಂಯೋಜಿಸುವುದು ಜಿಲ್ಲಾ ಮಕ್ಕಳ ನ್ಯಾಯ ಮಂಡಳಿಗಳು ಮತ್ತು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳು, ಪೊಲೀಸ್ ಇಲಾಖೆ ಪ್ರತಿ ಪೊಲೀಸ್ ಠಾಣೆಯಲ್ಲಿ 'ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿ'ಗಳನ್ನು ಹೊಂದಿದ್ದು, ಪ್ರತಿ ಜಿಲ್ಲೆ/ನಗರದಲ್ಲಿ 'ಮಕ್ಕಳ ವಿಶೇಷ ಪೊಲೀಸ್ ಘಟಕ'ಗಳನ್ನು ಸ್ಥಾಪಿಸಿದೆ. ವಿಶೇಷ ತರಬೇತಿ ಹೊಂದಿರುವ ಈ ಪೊಲೀಸ್ ಮಕ್ಕಳೊಡನೆ ಸಂಯಮದಿಂದ ಸಂವಹಿಸಿ ಮಕ್ಕಳ ಹಕ್ಕುಗಳ ರಕ್ಷಣೆಗೆ ಗಮನ ಕೊಡುತ್ತಾರೆ. ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ದೇಶದಾದ್ಯಂತ ಚೈಲ್ಡ್‌ಲೈನ್ ಇಂಡಿಯಾ ಫೌಂಡೇಶನ್ ಜೊತೆಯಲ್ಲಿ 'ಚೈಲ್ಡ್‌ಲೈನ್ 1098/112' ಉಚಿತ ದೂರವಾಣಿ ಸಹಾಯವಾಗಿ ನಡೆಸುತ್ತದೆ. ಇದರೊಂದಿಗೆ ದೇಶದಾದ್ಯಂತ ಹರಡಿಕೊಂಡಿರುವ ಅಸಂಖ್ಯಾತ ಸ್ವಯಂಸೇವಾ ಸಂಘಟನೆಗಳು ವಿವಿಧ ಹೆಸರುಗಳಲ್ಲಿ ಮಕ್ಕಳ ರಕ್ಷಣೆ, ಪುನರ್ವಸತಿಗಾಗಿ ನಿಲಯಗಳು, ಅನಾಥಾಲಯಗಳು, ಮಂದಿರಗಳು, ತಂಗುದಾಣ, ತೆರೆದ ಮನೆಗಳು, ಇತ್ಯಾದಿ ಸ್ವಯಂ ಆಗಿ, ಸರ್ಕಾರದ ನೆರವಿನೊಂದಿಗೆ ಇಲ್ಲವೇ ದೇಣಿಗೆಗಳನ್ನು ಪಡೆದು ನಡೆಸುತ್ತಾರೆ. ಮಕ್ಕಳ ಮೇಲಿನ ಅಪರಾಧಗಳ ವಿಚಾರಣೆಗೆ ಈಗ 'ಮಕ್ಕಳ ವಿಶೇಷ ನ್ಯಾಯಾಲಯ'ಗಳನ್ನು ಸ್ಥಾಪಿಸಲಾಗಿದೆ. ಅನಾಥರಾಗಿದ್ದು ಸೂಕ್ತವೆನಿಸಿದರೆ ಮಕ್ಕಳನ್ನು ದತ್ತು ನೀಡುವ, ಫಾಸ್ಟರ್ ಕೇರ್‌ನಲ್ಲಿ ಇರಿಸುವ ಮತ್ತು ತೊಂದರೆಯಲ್ಲಿರುವ ಮಕ್ಕಳಿಗೆ ಸಾಂಸ್ಥಿಕ ರಕ್ಷಣೆ ನೀಡುವುದು ಇಲ್ಲವೇ ಹಣಕಾಸನ್ನಿತ್ತು ಪ್ರಾಯೋಜನ ಕಾರ್ಯಕ್ರಮವನ್ನು ಸರ್ಕಾರ ನಡೆಸುತ್ತದೆ. ಈ ಎಲ್ಲವನ್ನೂ ಸಂಯೋಜಿಸುವ ಕೆಲಸವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ನೀಡಲಾಗಿದೆ. ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಅಡಿಯಲ್ಲಿ ರಾಜ್ಯ ಮಟ್ಟದ ಅಧಿಕಾರಿಗಳ ಉಸ್ತುವಾರಿಯಡಿಯಲ್ಲಿ ಪ್ರತಿ ಜಿಲ್ಲೆಯಲ್ಲಿ 'ಜಿಲ್ಲಾ ಮಕ್ಕಳ ರಕ್ಷಣಾ ಘಟಕ'ಗಳು ಕೆಲಸ ಮಾಡುತ್ತಿವೆ. ಈ ಎಲ್ಲ ಕೆಲಸಗಳನ್ನು ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಅತ್ಯುತ್ತಮ ವಿಧಾನಗಳನ್ನು ಸೂಚಿಸುವ ಕಾಯಿದೆಯೇ 'ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2015'.

ಮಕ್ಕಳ ನ್ಯಾಯ ಈಗ ಹಿಂದೆಂದಿಗಿಂತಲೂ ಹೆಚ್ಚು ಪ್ರಸ್ತುತವಾಗಿದೆ. ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ, ಭಾರತ ಸಂವಿಧಾನ, ರಾಷ್ಟ್ರೀಯ ಮಕ್ಕಳ ನೀತಿ 2013, ಮಕ್ಕಳನ್ನೇ ಉದ್ದೇಶಿಸಿ ಹೊರಡಿಸಲಾಗಿರುವ ವಿವಿಧ ಕಾಯಿದೆಗಳು, ಕಾರ್ಯಕ್ರಮಗಳು, ಯೋಜನೆಗಳು, ಇತ್ಯಾದಿಗಳ ಹಿನ್ನೆಲೆಯಲ್ಲಿ ನೀವು ಮಕ್ಕಳೊಡನೆ ಕೆಲಸ ಮಾಡುತ್ತೀರಿ, ಮಕ್ಕಳನ್ನು ಕುರಿತು ಚಿಂತಿಸುತ್ತೀರಿ, ಮಕ್ಕಳೊಡನೆ ಒಡನಾಡುತ್ತೀರಿ, ಮಕ್ಕಳನ್ನು ಕುರಿತು ಮತ್ತು ಮಕ್ಕಳಿಗಾಗಿ ಬರೆಯುತ್ತೀರಿ, ಮಕ್ಕಳ ಪರ ವಕೀಲಿ ಮಾಡುತ್ತೀರಿ ಎಂದರೆ ನಿಮಗೆ 'ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2015' ಪರಿಚಯ ಆಗಿರಲೇಬೇಕು.

ವಿಶೇಷವಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳು (ಸಿ.ಡಬ್ಲ್ಯು.ಸಿ) ಹಾಗೂ ಜಿಲ್ಲಾ ಮಕ್ಕಳ ನ್ಯಾಯ ಮಂಡಳಿ (ಜೆ.ಜೆ.ಬಿ.)ಗಳಲ್ಲಿ ಸದಸ್ಯರಾಗಿರುವವರು, ಚೈಲ್ಡ್‌ಲೈನ್ 1098ನಲ್ಲಿ ತೊಡಗಿರುವವರು, ಮಕ್ಕಳ ನಿಲಯಗಳು, ವಸತಿ ನಿಲಯಗಳೇ ಮೊದಲಾದವುಗಳಿಗೆ ನಿಯಮಿತವಾಗಿ ಭೇಟಿ ಕೊಡುವ ಸಮಿತಿಯ ಸದಸ್ಯರುಗಳಿಗೆ ಈ ಕಾಯಿದೆಯ ಅಮೂಲಾಗ್ರ ಪರಿಚಯ ಅತ್ಯಾವಶ್ಯಕ. ಸಮಾಜಕಾರ್ಯ, ಸಮಾಜವಿಜ್ಞಾನ, ಸಮಾಜಕಲ್ಯಾಣ, ಗ್ರಾಮೀಣಾಭಿವೃದ್ಧಿ, ಮನಃಶಾಸ್ತ್ರ, ಪತ್ರಿಕೋದ್ಯಮ, ಇತ್ಯಾದಿ ಮಾನವಿಕ ಅಧ್ಯಯನ ಮಾಡುವ ವಿದ್ಯಾರ್ಥಿಗಳು, ಸಂಶೋಧಕರು, ಬೋಧಕರಿಗೆ ಮಕ್ಕಳ ನ್ಯಾಯ ಕಾಯಿದೆ ಅರಿವು ಅತ್ಯಾವಶ್ಯಕ.

**ಶಾಲೆ, ಶಿಕ್ಷಣ, ಶಿಕ್ಷಕರು ಮತ್ತು ಮಕ್ಕಳ ನ್ಯಾಯ ಕಾಯಿದೆ**

ಭಾರತ ಸರ್ಕಾರ 2013ರಲ್ಲಿ ರಾಷ್ಟ್ರೀಯ ಮಕ್ಕಳ ನೀತಿಯನ್ನು ಹೊರಡಿಸಿದೆ. ಅದೇ ರೀತಿ 2018ರಲ್ಲಿ ರಾಷ್ಟ್ರೀಯ ಮಕ್ಕಳ ರಕ್ಷಣಾ ನೀತಿಯನ್ನು ಹೊರಡಿಸಿದೆ. ಇದೆಲ್ಲದರ ಜೊತೆಯಲ್ಲಿ ಪಾಕ್ಸೋ ಕಾಯಿದೆ 2012 ಕೂಡಾ ಇದೆ. ಈ ಎಲ್ಲದರ ಮೂಲ ಆಶಯ ಪ್ರತಿಯೊಂದು ಸಂಸ್ಥೆಯೂ ತಮ್ಮಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ರೂಪಿಸಿ, ಅದರ ಜಾರಿಗಾಗಿ ಸಮಿತಿಗಳನ್ನು ನಿಯೋಜಿಸಬೇಕಿದೆ ಮತ್ತು ಮಕ್ಕಳ ರಕ್ಷಣೆಯನ್ನು ಪಾಲಿಸಲೇಬೇಕಿದೆ. ಈ ಹಿನ್ನೆಲೆಯಲ್ಲಿ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2015 (ತಿದ್ದುಪಡಿ 2021) ಕುರಿತು ಎಲ್ಲ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ಮತ್ತು ಮಂಡಳಿಗಳಿಗೆ ಅರಿವಿರಲೇಬೇಕಿದೆ.

ಮಕ್ಕಳ ಮೇಲೆ ಲೈಂಗಿಕ ಶೋಷಣೆಯೂ ಸೇರಿದಂತೆ, ತೀವ್ರವಾದ ದೈಹಿಕ, ಮಾನಸಿಕ ಆಘಾತ ಅಪರಾಧವನ್ನು ಮಾಡಿದ 16 ರಿಂದ 18 ವರ್ಷದೊಳಗಿನ ಮಕ್ಕಳನ್ನು ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ 2015ರ ಅವಕಾಶಗಳಂತೆ ಪೋಲಿಸರು ವಶಕ್ಕೆ ಪಡೆಯುತ್ತಾರೆ. ಅಂತಹ ಮಕ್ಕಳನ್ನು ಮಕ್ಕಳ ನ್ಯಾಯ ಮಂಡಳಿ ವಿಚಾರಣೆ ಮಾಡುತ್ತದೆ. ಅವಶ್ಯಕತೆ ಇದ್ದರೆ 16–18 ವಯೋಮಾನದವರು ಮಾಡಿದ ಕೃತ್ಯ ತೀರಾ ವಯಸ್ಕರ ಮನೋಭಾವದಲ್ಲಿ ಆಗಿದೆ ಎನಿಸಿದರೆ ಮಕ್ಕಳ ನ್ಯಾಯಾಲಯದಲ್ಲಿ ವಿಚಾರಣೆ ಮಾಡಲಾಗುತ್ತದೆ ಹಾಗೂ ಕ್ರಮ ಕೈಗೊಳ್ಳಲಾಗುತ್ತಿದೆ.






# ಅಧ್ಯಾಯ–3

# POCSO ಕಾಯಿದೆ ; ಅರಿವು ಮತ್ತು ಜಾಗೃತಿ

ಶಾಲೆಗಳು 'ಮಕ್ಕಳ ರಕ್ಷಣಾ ನೀತಿ' ಯನ್ನು ಅಳವಡಿಸಿಕೊಂಡು ಎಲ್ಲಾ ಶಿಕ್ಷಕ ಮತ್ತು ಶಿಕ್ಷಕೇತರ ವರ್ಗದ ವಯಸ್ಕರಿಗೆ POCSO ಕಾಯಿದೆ, ಬಾಲ್ಯವಿವಾಹ ನಿಷೇಧ ಕಾಯಿದೆ, ಮಕ್ಕಳ ನ್ಯಾಯಕಾಯಿದೆ ಮತ್ತು ಭಾರತೀಯ ದಂಡ ಸಂಹಿತೆಯ ವಿಚಾರಗಳನ್ನು ಕುರಿತು ಮಾಹಿತಿ ನೀಡಬೇಕು. ತಮ್ಮ ವ್ಯಾಪ್ತಿಯಲ್ಲಿ ಇಂತಹ ಘಟನೆಗಳು ನಡೆದಾಗ ದೂರು ನೀಡಲು ಕೆಲವರು ವಿವಿಧ ಕಾರಣಗಳಿಂದ ಹಿಂಜರಿಯುತ್ತಾರೆ. ಬಾಲಕ/ಬಾಲಕಿಗೆ ಮುಜುಗರವಾಗುತ್ತದೆ, ಅವರ ಭವಿಷ್ಯ ಹಾಳಾಗುತ್ತದೆ ಅಥವಾ ಆರೋಪಿಗಳು ಪ್ರಭಾವಿಗಳಾಗಿದ್ದು, ಅವರಿಂದ ತೊಂದರೆ ಎದುರಿಸಬೇಕಾಗುತ್ತದೆ ಎಂಬ ನೆಪಗಳನ್ನೊಡ್ಡಿ ಪ್ರಕರಣಗಳನ್ನು ಮುಚ್ಚಿಹಾಕದೇ, ಆರೋಪಿಗಳ ವಿರುದ್ಧ ದೂರು ನೀಡುವಂತೆ ಸಂಬಂಧಿಸಿದವರಲ್ಲಿ ಜಾಗೃತಿ ಮೂಡಿಸಬೇಕು. ಮಕ್ಕಳ ಮೇಲೆ ಆಗಿರುವ ಲೈಂಗಿಕವಾಗಿ ಶೋಷಣೆಗಳಗಾದ ಕೆಲವು ನೈಜ ಪ್ರಕರಣಗಳನ್ನು ಈ ಕೆಳಗೆ ನೀಡಿದ್ದು, ಅವುಗಳನ್ನು ಅವಲೋಕಿಸಿ, ಚಿಂತನಶೀಲರಾಗೋಣ.

## 3.1 ಮಕ್ಕಳ ಮೇಲೆ ಆಗಿರುವ ಲೈಂಗಿಕವಾಗಿ ಶೋಷಣೆಗೊಳಗಾದ ಕೆಲವು ನೈಜ ಪ್ರಕರಣಗಳು

### ಪ್ರಕರಣ–1

ಒಂದು ಶಾಲೆ. ಅಲ್ಲಿನ ಬಹುತೇಕ ಎಲ್ಲಾ ವಿದ್ಯಾರ್ಥಿಗಳ ಬಳಿ ಮೊಬೈಲ್ ಇತ್ತು. ಕೋವಿಡ್ ಲಾಕ್–ಡೌನ್ ಸಂದರ್ಭದಲ್ಲಿ ಆನ್ಲೈನ್ ತರಗತಿಗಳಲ್ಲಿ ಮಕ್ಕಳು ಶಿಕ್ಷಣ ಪಡೆದುಕೊಳ್ಳಲಿ ಎಂದು ಪೋಷಕರು ಮೊಬೈಲನ್ನು ಮಕ್ಕಳಿಗೆ ಕೊಡಿಸಿದ್ದರು. ಲಾಕ್–ಡೌನ್ ತೆರವಾದ ನಂತರ ಸಹ ಮಕ್ಕಳು ಮೊಬೈಲ್ ಬಳಕೆ ಮಾಡುತ್ತಿದ್ದರು. ಒಂಭತ್ತನೇ ತರಗತಿ ವಿದ್ಯಾರ್ಥಿ ರವಿ (ಹೆಸರು ಬದಲಿಸಿದೆ) ತನ್ನ ಗೆಳೆಯರನ್ನು ಸೇರಿಸಿ ಒಂದು Whats App ಗುಂಪು ಮಾಡಿದ್ದ. ಆ ಗುಂಪಿನಲ್ಲಿ ಶಾಲೆಯ ಆಟದ ಬಗ್ಗೆ, ಕ್ರಿಕೆಟ್ ಟೀಂ ಬಗ್ಗೆ, ಸಿನಿಮಾ ಬಗ್ಗೆ ಚರ್ಚೆ, ಅಭಿಪ್ರಾಯ ಹಂಚಿಕೆ ನಡೆಯುತ್ತಿತ್ತು. ಒಂದು ದಿನ ಹತ್ತನೇ ತರಗತಿಯ ವಿದ್ಯಾರ್ಥಿ ವಿಶ್ವ (ಹೆಸರು ಬದಲಿಸಿದೆ) ಒಂದು ಅಶ್ಲೀಲ ಜೋಕ್ ಅನ್ನು ಗುಂಪಿಗೆ ಹಾಕಿದ. ಎಲ್ಲರೂ ನಕ್ಕರು. ಯಾರೂ ವಿರೋಧ ವ್ಯಕ್ತಪಡಿಸಲಿಲ್ಲ. ವಿಶ್ವನಂತೆ ಇತರ ವಿದ್ಯಾರ್ಥಿಗಳು ಅಶ್ಲೀಲ ಜೋಕ್, ಚಿತ್ರಗಳನ್ನು ಹಾಕತೊಡಗಿದರು. ಮೊದಲು ಆಗುತ್ತಿದ್ದ ಉತ್ತಮ ಚರ್ಚೆಗಳು ನಿಂತು ಹೋಗಿ ಬರೀ ಅಶ್ಲೀಲ ಜೋಕ್ ಹಾಗೂ ಚಿತ್ರಗಳಿಂದ ಗುಂಪು ತುಂಬಿಹೋಯಿತು. ನಿಮಗೆಲ್ಲಾ ತಿಳಿದಿರುವಂತೆ ವಾಟ್ಸ್‌ಆಪ್‌ಗೆ ಬಂದ ಚಿತ್ರಗಳು ಮೊಬೈಲಿನ ಗ್ಯಾಲರಿಯಲ್ಲಿ ಶೇಖರವಾಗುತ್ತವೆ. ಒಂಬತ್ತನೇ ತರಗತಿಯ ಇನ್ನೊಬ್ಬ ವಿದ್ಯಾರ್ಥಿ ಸಂಜನ್ (ಹೆಸರು ಬದಲಿಸಿದೆ) ಒಂದು ದಿನ ಯಾವುದೋ ಕಾರಣಕ್ಕೆ ತನ್ನ ಮೊಬೈಲ್ ಅನ್ನು ತನ್ನ ತಂದೆಗೆ ಕೊಟ್ಟಿದ್ದ. ಆತನ ತಂದೆ ಒಂದು ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಶಾಲೆಯಲ್ಲಿ ಸ್ಟಾಫ್ ರೂಮ್ನಲ್ಲಿ ಕುಳಿತ ಸಂಜನ್ ತಂದೆ ಮಗನ ಮೊಬೈಲ್ ಗ್ಯಾಲರಿಯಲ್ಲಿ ಏನು ಇರಬಹುದು ಎಂಬ ಕುತೂಹಲದಿಂದ ಗ್ಯಾಲರಿ ತೆಗೆದರು. ಅಲ್ಲಿದ್ದ ಅಶ್ಲೀಲ ಚಿತ್ರಗಳನ್ನು ಕಂಡು ಗಾಬರಿಯಾದರು. ಮೊಬೈಲ್‌ನಲ್ಲಿ ಅಶ್ಲೀಲ ಚಿತ್ರಗಳನ್ನು, ವಿಡಿಯೋಗಳನ್ನು ಶೇಖರಿಸುವುದು ತಪ್ಪು ಎನ್ನುವ ಅರಿವು ಅವರಿಗೆ ಇತ್ತು. ಮನೆಗೆ ಬಂದವರು ನವಿರಾಗಿಯೇ ಸಂಜನ್ ಅನ್ನು ಈ ಕುರಿತು ವಿಚಾರಿಸಿದರು. ಸಂಜನ್ Whats App group ನಲ್ಲಿ ಬರುತ್ತಿದ್ದ ವಿಚಾರಗಳೆಂದು ತಿಳಿಸಿದ. ಈ ಬಗ್ಗೆ ಎಚ್ಚರ ವಹಿಸಬೇಕೆಂದುಕೊಂಡ ಅವರು, ಸಂಜನ್‌ನ ಶಾಲೆಯ ಪ್ರಾಂಶುಪಾಲರಿಗೆ ವಿಚಾರ ಮುಟ್ಟಿಸಿದರು.

ಪ್ರಾಂಶುಪಾಲರು Whats App group ನಲ್ಲಿದ್ದ ಎಲ್ಲಾ ಸುಮಾರು 45 ವಿದ್ಯಾರ್ಥಿಗಳನ್ನು ಕರೆಸಿ ಅಶ್ಲೀಲ ಚಿತ್ರಗಳನ್ನು, ವಿಡಿಯೋಗಳನ್ನು ಹಂಚಿಕೊಳ್ಳುವುದರಿಂದ ಆಗುವ ಅಪಾಯ, POCSO ಕಾನೂನು ಕುರಿತು ವಿವರಿಸಿ, ಮೊಬೈಲ್‌ಗಳಲ್ಲಿರುವ ಆ ರೀತಿಯ ಎಲ್ಲಾ ಫೋಟೋ ಹಾಗೂ ವಿಡಿಯೋಗಳನ್ನೂ ಡಿಲೀಟ್ ಮಾಡಿಸಿದರು. ವಿದ್ಯಾರ್ಥಿಗಳಿಗೆ ಮತ್ತು ಅದರಿಂದ ಇತರರಿಗೆ ಆಗಬಹುದಾಗಿದ್ದ ಅಪಾಯ ತಪ್ಪಿತು.

**ನಿಮ್ಮ ಶಾಲೆ/ತರಗತಿಯ ಸಹಪಾಠಿ ವಿದ್ಯಾರ್ಥಿಯು ಮೊಬೈಲ್‌ನಲ್ಲಿ ಅಶ್ಲೀಲ ಚಿತ್ರ, ವಿಡಿಯೋಗಳನ್ನು ವೀಕ್ಷಿಸುವ ಪ್ರಕರಣ ಕಂಡು ಬಂದಲ್ಲಿ, ಆ ವಿದ್ಯಾರ್ಥಿಗೆ ಸ್ನೇಹಿತ/ಸ್ನೇಹಿತೆಯಾಗಿ ಮಾರ್ಗದರ್ಶನವನ್ನು ಹೇಗೆ ಮಾಡುವಿರಿ?**

**ಪ್ರಕರಣ–2**

ನಗರವೊಂದರ ಹೊರವಲಯದಲ್ಲಿ ಇರುವ ಪ್ರೌಢಶಾಲೆಯೊಂದರಲ್ಲಿ ಸ್ಮಿತಾ (ಹೆಸರು ಬದಲಿಸಿದೆ) ಒಂಭತ್ತನೇ ತರಗತಿಯಲ್ಲಿ ಓದುತ್ತಿದ್ದಳು. ದಿನವೂ ಸುಮಾರು ಎರಡು ಕಿಮೀ ದೂರ ನಡೆದುಕೊಂಡು ಶಾಲೆಗೆ ಹೋಗಬೇಕಿತ್ತು. ಮೊದಮೊದಲು ಶಾಲೆಗೆ ಸಂತೋಷದಿಂದ ಹೋಗುತ್ತಿದ್ದ ಸ್ಮಿತಾ ದಿನ ಕಳೆದಂತೆ ಶಾಲೆಗೆ ಹೋಗಲು ಬೇಸರ ಪಡುತ್ತಿದ್ದಳು. ಅದೇ ಶಾಲೆಯಲ್ಲಿ ಓದುತ್ತಿದ್ದ ಹತ್ತನೇ ತರಗತಿ ವಿದ್ಯಾರ್ಥಿ ಸಂತೋಷ (ಹೆಸರು ಬದಲಿಸಿದೆ) ತನ್ನ ಗೆಳೆಯರನ್ನು ಬೈಕ್ ಮೇಲೆ ಕೂರಿಸಿಕೊಂಡು ಸ್ಮಿತಾಳನ್ನು ಹಿಂಬಾಲಿಸಿಕೊಂಡು ಹೋಗುತ್ತಿದ್ದ. ಮೊದಲು ಬರಿ ಹಿಂಬಾಲಿಸುತ್ತಿದ್ದ ಸಂತೋಷ, ಸ್ಮಿತಾ ಸುಮ್ಮನಿರುವುದನ್ನು ಪ್ರೋತ್ಸಾಹ ಎಂದು ಭಾವಿಸಿ, ನನ್ನನ್ನು ಪ್ರೀತಿಸು ಎಂದು ಪೀಡಿಸತೊಡಗಿದ.

ಶಾಲೆಯಲ್ಲಿ ಕಲಿತು ಶಿಕ್ಷಕಿಯಾಗಬೇಕೆಂದು ಸ್ಮಿತಾ ಕನಸು ಕಾಣುತ್ತಿದ್ದಳು. ಆದರೆ ಸಂತೋಷ ಮತ್ತು ಗೆಳೆಯರಿಂದ ತನ್ನ ಶಿಕ್ಷಣ ಹಾಳಾಗಬಹುದು ಎಂದು ಆತಂಕಕ್ಕೆ ಒಳಗಾಗಿದ್ದಳು. ಮನೆಯಲ್ಲಿ ಈ ವಿಚಾರವನ್ನು ಪೋಷಕರಿಗೆ ತಿಳಿಸಿದರೆ ತನ್ನನ್ನು ಶಾಲೆಗೆ ಹೋಗಲೇಬೇಡ ಎನ್ನಬಹುದು. ಶಾಲೆಯಲ್ಲಿ ಶಿಕ್ಷಕರಿಗೆ ಹೇಳಿದರೆ ಸಂತೋಷ ಮತ್ತು ಅವನ ಗೆಳೆಯರು ಕೋಪದಿಂದ ತೊಂದರೆ ಕೊಡಬಹುದು ಎನ್ನುವ ಭಯದಿಂದ ದಿನ ಕಳೆಯುತ್ತಿದ್ದಳು.

ಒಂದು ದಿನ ಸಂತೋಷನಿಗೆ ಹೀಗೆ ನನ್ನನ್ನು ಪೀಡಿಸಬೇಡ ಎಂದು ಬೇಡಿಕೊಂಡರೂ ಸಂತೋಷ ತನ್ನ ಕೆಲಸ ಬಿಡಲಿಲ್ಲ. ಬದಲಾಗಿ ಹೆಚ್ಚು ಮಾಡಿದ. ಬಲವಂತವಾಗಿ ಗ್ರೀಟಿಂಗ್ಸ್ ಕೊಡುವುದು, ಚಾಕಲೇಟ್ ಕೊಡುವುದು, ಅವಳು ಓಡಾಡುವಾಗ ಮೊಬೈಲ್‌ನಿಂದ ಫೋಟೋ ತೆಗೆಯುವುದು, ಹತ್ತಿರ ಬಂದು ಹೂ ಎಸೆಯುವುದು ಮಾಡುತ್ತಿದ್ದ. ಮಾನಸಿಕ ನೋವು ಆತಂಕಗಳನ್ನು ಎದುರಿಸಲಾರದೆ ಸ್ಮಿತಾ ಒಂದು ದಿನ ಮನೆಯ ಪಕ್ಕದಲ್ಲಿದ್ದ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಳು.

ವಿದ್ಯಾರ್ಥಿನಿಯೊಬ್ಬಳ ಜೀವ, ಕನಸು, ಬದುಕು, ಶಿಕ್ಷಣ ಗಾಳಿಯಲ್ಲಿ ತೂರಿ ಹೋಯಿತು. ಸಂತೋಷ ಸ್ಮಿತಾಳನ್ನು ಹಿಂಬಾಲಿಸುತ್ತಿದ್ದ ಮತ್ತು ಕಿರುಕುಳ ಕೊಡುತ್ತಿದ್ದ ಎಂಬುದನ್ನು ತಿಳಿದಿದ್ದ ಕೆಲವು ಬಾಲಕ–ಬಾಲಕಿಯರು ವಿಚಾರವನ್ನು ಪ್ರಾಂಶುಪಾಲರ ಗಮನಕ್ಕೆ ತಂದಿದ್ದರು. ಪರಿಣಾಮ, ಪೊಲೀಸರು ಸಂತೋಷನನ್ನು ವಿಚಾರಣೆಗಾಗಿ ತಮ್ಮ ವಶಕ್ಕೆ ತೆಗೆದುಕೊಂಡರು. ಅವನಿಗೆ ಸಹಕರಿಸುತ್ತಿದ್ದ ಇತರ ವಿದ್ಯಾರ್ಥಿಗಳ ಹೆಸರು ಪೊಲೀಸರ ಹತ್ತಿರ ಈಗ

**ಸ್ಮಿತಾಳ ಸ್ಥಾನದಲ್ಲಿ ನೀವು ಇರುವಿರೆಂದು ಭಾವಿಸಿ, ಆ ಸಮಸ್ಯೆಯಿಂದ ಹೊರಬರಲು ಯಾರ ಸಹಾಯ, ಬೆಂಬಲ ಪಡೆಯುವಿರಿ ಎಂಬ ಬಗ್ಗೆ ಚರ್ಚಿಸಿ, ಮಂಡಿಸಿ.**

ಪ್ರಕರಣ–3

ಮೈಸೂರಿನ ಬಳಿಯ ಒಂದು ಶಾಲೆ ,ಅಲ್ಲಿನ ಎಲ್ಲಾ ಮಕ್ಕಳು ಸಾಮಾಜಿಕ ಜಾಲತಾಣಗಳಲ್ಲಿ ಕ್ರಿಯಾತ್ಮಕವಾಗಿದ್ದರು. ಶಾಲೆಯಲ್ಲಿನ ಕೆಲವು ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳನ್ನು ಕುರಿತು ಅವರು ಸಾಮಾಜಿಕ ಜಾಲತಾಣಗಳಲ್ಲಿ ಅಪ್ಲೋಡ್ ಮಾಡುತ್ತಿದ್ದರು.

ಒಂದು ದಿನ ಶಾಲೆಯ ಎಲ್ಲಾ ಮಕ್ಕಳಿಗೆ ಏಂಜಲ್ 13 ಎಂಬ ಅಕೌಂಟ್ ನಿಂದ ಫ್ರೆಂಡ್ ವಿನಂತಿ ಬಂತು, ಕೆಲವರು ಅದನ್ನು ಒಪ್ಪಿ ಗೆಳೆತನ ಬೆಳೆಸಿದರು. ಆದರೆ ಕೆಲವರು ಒಪ್ಪಿಕೊಳ್ಳಲಿಲ್ಲ. ಈ ಏಂಜಲ್ 13 ಅಕೌಂಟ್ ಎಲ್ಲರ ಎಲ್ಲಾ ಪೋಸ್ಟ್ ಲೈಕ್ ಮಾಡುವುದರೊಂದಿಗೆ ಹತ್ತನೇ ತರಗತಿ ಅಪೂರ್ವ (ಹೆಸರು ಬದಲಿಸಿದೆ) ಎಂಬ ಹುಡುಗಿಯ ಬಗ್ಗೆ ಮಾಹಿತಿ ನೀಡತೊಡಗಿತು. ಪ್ರತಿದಿನ ಅಪೂರ್ವಳ ವಿಭಿನ್ನ ಫೋಟೊಗಳು ಅಪ್ಲೋಡ್ ಆಗುತ್ತಿತ್ತು. ಅವೆಲ್ಲವೂ ಎಲ್ಲೋ ದೂರದಲ್ಲಿ ನಿಂತು ತೆಗೆದ ಫೋಟೋಗಳೇ ಆಗಿರುತ್ತಿತ್ತು. ಶಾಲೆಯ ಪ್ರತಿಯೊಬ್ಬರೂ ಯಾರೋ ನಮ್ಮ ಶಾಲೆಯ ಈ ವಿದ್ಯಾರ್ಥಿ, ಅಪೂರ್ವ ಪ್ರೇಮಿ ಎಂದುಕೊಂಡು ಆ ಪ್ರೊಫೈಲ್ ಫಾಲೋ ಮಾಡುತ್ತಿದ್ದರು, ಫೋಟೋಗಳಿಗೆ ಕಾಮೆಂಟ್ ಮಾಡುತ್ತಿದ್ದರು,

ಒಂದು ದಿನ ಏಂಜಲ್ 13ರಿಂದ ಎಲ್ಲರಿಗೂ ನಿಮ್ಮ ಫೋಟೋ ಕಳಿಸಿ ಎಂಬ ಮನವಿ ಬಂತು. ಅನೇಕ ಹುಡುಗರು ಮತ್ತು ಹುಡುಗಿಯರು ತಮ್ಮ ಫೋಟೋ ಸೆಲ್ಫಿ ಕಳಿಸಿದರು. ಮಾರನೇ ದಿನ ಬಹುತೇಕ ಹೆಣ್ಣು ಮಕ್ಕಳ ನಗ್ನಚಿತ್ರಗಳು, ಏಂಜಲ್ 13ರ ಅಕೌಂಟಿನಿಂದ ಶಾಲೆಯ ಸಾಮಾಜಿಕ ಜಾಲತಾಣದಲ್ಲಿ ಹಾಕಲ್ಪಟ್ಟಿತ್ತು. ಚಿತ್ರಗಳನ್ನು ಮಾರ್ಫ್ ಮಾಡಲಾಗಿದೆ, ಕೃತಕವಾಗಿ ಸೃಷ್ಟಿಸಲ್ಪಟ್ಟಿದೆ ಎಂದು ತಿಳಿದಿದ್ದರೂ ಅನೇಕ ಹೆಣ್ಣುಮಕ್ಕಳ ಪ್ರೊಫೈಲ್ ಬ್ಲಾಕ್ ಮಾಡಲಾಯಿತು. ಪೋಷಕರು ನೀಡಿದ ದೂರಿನ ನಂತರ ಏಂಜಲ್ 13 ಅಕೌಂಟ್ ಹೊಂದಿದ್ದ ಸಮೀರನನ್ನು (ಹೆಸರು ಬದಲಿಸಿದೆ) ಬಂಧಿಸಲಾಯಿತು. ಅಪೂರ್ವಳನ್ನು ಏಕಮುಖವಾಗಿ ಪ್ರೀತಿಸುತ್ತಿದ್ದ ಸಮೀರ್ ಅವಳ ಮೇಲೆ ಸೇಡು ತೀರಿಸಿಕೊಳ್ಳಲು ಫೇಕ್ ಅಕೌಂಟ್ ತೆರೆದಿದ್ದ ಎಂಬ ವಿಚಾರ ತಿಳಿದು ಬಂತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

**ಸಾಮಾಜಿಕ ಜಾಲತಾಣಗಳಲ್ಲಿ ಉಂಟಾಗುವ ಈ ರೀತಿಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಎಚ್ಚರಿಕೆಯಿಂದ ಇರುವುದು ಹೇಗೆ? ಎಂಬ ಬಗ್ಗೆ ಐದು ಅಂಶಗಳನ್ನು ಪಟ್ಟಿ ಮಾಡಿ.**

1.
2.
3.
4.
5.

ಪ್ರಕರಣ–4

ರವಿ ತಂದೆ ತಾಯಿಯಿಲ್ಲದ ಮಗು. ಅಜ್ಜಿಯ ಆರೈಕೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಪೂರೈಸಿದನು. ಅಜ್ಜಿಗೆ ತುಂಬಾ ವಯಸ್ಸಾಗಿದ್ದು, ರವಿಯನ್ನು ನೋಡಿಕೊಳ್ಳಲು ಆಗದ ಪರಿಸ್ಥಿತಿ ಎದುರಾದಾಗ ಹಾಸ್ಟಲ್ ಸೇರಿ ಪ್ರೌಢಶಾಲೆಯ ವ್ಯಾಸಂಗ ಮುಂದುವರೆಸಲು ಇಚ್ಛಿಸುತ್ತಾನೆ. ಶಾಲೆಯ ಎಲ್ಲಾ ಚಟುವಟಿಕೆಗಳಲ್ಲಿ ಬಹಳ ಕ್ರಿಯಾಶೀಲವಾಗಿ ಭಾಗವಹಿಸುವ ಅವನು ಶಿಕ್ಷಕರೆಲ್ಲರಿಗೂ ಮೆಚ್ಚುಗೆಗೆ ಪಾತ್ರನಾಗಿದ್ದನು. ಸಂಜೆ ಹಾಸ್ಟಲ್ ಗೆ ಬಂದ ನಂತರ ಚೆನ್ನಾಗಿ ಅಭ್ಯಾಸ ಮಾಡುತ್ತಿದ್ದನು. ಹಾಸ್ಟೆಲ್ನಲ್ಲಿ ನಡು ವಯಸ್ಸಿನ ಅಡುಗೆ ಸಹಾಯಕ ಹುಡುಗ ರಮೇಶ. ರವಿಯನ್ನು ಕಂಡು ಮುಗುಳ್ನಗುವುದು, ಶಾಲೆಯ ವಿಚಾರಗಳನ್ನು ಕೇಳುವುದು ಮಾಡುತ್ತಾ ಸ್ನೇಹದಿಂದ ವರ್ತಿಸುತ್ತಿದ್ದ. ಕೆಲ ದಿನ ಕಳೆದ ಮೇಲೆ ರಮೇಶ ರವಿಯೊಟ್ಟಿಗೆ ಸಲಿಗೆಯಿಂದ ವರ್ತಿಸತೊಡಗಿದ. ರವಿಯನ್ನು ತಬ್ಬಿಕೊಳ್ಳುವುದು, ಮುತ್ತು ಕೊಡುವುದನ್ನು ಮಾಡತೊಡಗಿದ. ಇದರಿಂದ ರವಿಗೆ ಕಸಿವಿಸಿಯಾದರೂ ರಮೇಶ ಕೊಡುವ ಹಣ್ಣುಗಳು, ಚಾಕಲೇಟ್‌ಗಳು ಇನ್ನಿತರ ಉಡುಗೊರೆಗಳ ಆಸೆಗೆ ಸಹಿಸಿಕೊಳ್ಳುತ್ತಿದ್ದನು. ಅಂದು ಭಾನುವಾರ ಹಾಸ್ಟೆಲ್‌ನ ಇತರ ಹುಡುಗರು ಊರಿಗೆ ಹೋಗಿರುತ್ತಾರೆ. ರವಿ ಒಬ್ಬನೇ ತನ್ನ ಕೋಣೆಯಲ್ಲಿ ಇದ್ದ ಸಮಯದಲ್ಲಿ ಅಲ್ಲಿಗೆ ಬಂದ ರಮೇಶ, ರವಿಗೆ ತನ್ನ ಜನನಾಂಗವನ್ನು ತೋರಿಸುತ್ತಾ ಲೈಂಗಿಕ ಕ್ರಿಯೆಯಲ್ಲಿ ಸಹಕರಿಸುವಂತೆ ಬಲವಂತಗೊಳಿಸಿದ. ಇದಕ್ಕೆ ರವಿ ಅಸಮ್ಮತಿ ತೋರಿದಾಗ, ಅಲ್ಲೇ ಇದ್ದ ಕೋಲಿನಿಂದ ಹೊಡೆಯುವುದರ ಜೊತೆಗೆ ಬಲವಂತವಾಗಿ ಲೈಂಗಿಕ ಸಂಪರ್ಕ ಮಾಡಿದ. ಇದು ರವಿಗೆ ಆಘಾತಕಾರಿಯಾದ ವಿಚಾರವಾಗಿತ್ತು. ಈ ವಿಚಾರವನ್ನು ಹೊರಗೆ ಎಲ್ಲಾದರೂ ಹೇಳಿದರೆ, ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಹೆದರಿಸಿದ್ದ.

ಈ ಘಟನೆಯ ನಂತರ ರವಿಗೆ ತನ್ನ ಬಗೆಗೆ ತನಗೇ ಹೇಸಿಗೆ ಎನಿಸತೊಡಗಿಸಿತು. ಅವಮಾನ ಮತ್ತು ಕೀಳರಿಮೆಯಿಂದ ಮಾನಸಿಕವಾಗಿ ಜರ್ಜರಿತನಾಗಿದ್ದ. ಓದಿನಲ್ಲಿ, ಶಾಲೆಯ ಇತರ ಚಟುವಟಿಕೆಯಲ್ಲಿ ಮೊದಲಿನ ಕ್ರಿಯಾಶೀಲತೆ ಮಾಯವಾಗಿತ್ತು. ಶಿಕ್ಷಕರಿಗೆ ಈ ಬದಲಾವಣೆ ಆಶ್ಚರ್ಯ ಉಂಟು ಮಾಡಿತ್ತು. ಕೆಲವರು ಅವನನ್ನು ಕರೆದು ಏನಾಯಿತು ಎಂದು ವಿಚಾರಿಸಲು ಪ್ರಯತ್ನಿಸಿದರೂ ರವಿ ಹುಷಾರಿಲ್ಲ ಎಂದು ಹೇಳಿ ಜಾರಿಕೊಂಡಿದ್ದ. ರವಿಗೆ ಈ ರೀತಿಯ ಅಸಹ್ಯಕರ ವಿಚಾರವನ್ನು ಹೇಗೆ ಹೇಳಬೇಕು? ಹೇಳಿದರೆ ನನ್ನ ಬಗೆಗೆ ಏನೆಂದು ಕೊಳ್ಳುತ್ತಾರೋ ಎಂಬ ಆತಂಕ ಇತ್ತು. ಅವನು ಯಾವುದರಲ್ಲೂ ಆಸಕ್ತಿ ಇಲ್ಲದೆ ಬಹಳ ಖಿನ್ನತೆಗೆ ಒಳಗಾಗಿದ್ದ. ಸುಮ್ಮನೆ ಹಾಸ್ಟೆಲ್ ಆವರಣದಲ್ಲಿ ಕುಳಿತಿದ್ದಾಗ, ಇವನ ಶಾಲೆಯಲ್ಲೇ ಓದುತ್ತಿದ್ದ ಹತ್ತನೇ ತರಗತಿ ವಿದ್ಯಾರ್ಥಿ ಸತೀಶ ಬಂದು ಏನಾಯಿತೆಂದು ಕೇಳಿದಾಗ, ರವಿ ಏನಾಗಿಲ್ಲ ಎಂದು ಉತ್ತರಿಸುತ್ತಾನೆ. ಆಗ ಸತೀಶ, ನನಗೆ ಗೊತ್ತು ಕಣೋ ಅದಕ್ಕೆಲ್ಲ ತಲೆಕೆಡಿಸಿಕೊಳ್ಳಬೇಡ. ಈ ಹಾಸ್ಟೆಲಿನಲ್ಲಿ ಇದೆಲ್ಲಾ ಸಾಮಾನ್ಯವಾದ ವಿಚಾರ ರಮೇಶ ನನಗೂ ಸಾಕಷ್ಟು ಬಾರಿ ಈ ರೀತಿ ಮಾಡಿದ್ದಾನೆ. ಯಾರೊಂದಿಗೂ ಹೇಳಿಕೊಳ್ಳಲಾಗದೆ ಸಂಕಟ ಪಡುತ್ತಿದ್ದೇನೆ ಎನ್ನುತ್ತಾನೆ. ನಂತರ ಇಬ್ಬರೂ ಧೈರ್ಯವಾಗಿ ರಮೇಶನ ನಡವಳಿಕೆಯ ಬಗ್ಗೆ ಯಾರಿಗಾದರೂ ದೂರು ಕೊಡೋಣ ಎಂದು ಕೊಳ್ಳುತ್ತಾರೆ. ಆದರೆ ಯಾರಿಗೆ ದೂರು ಕೊಡುವುದು?

ಈ ಘಟನೆಯಲ್ಲಿ ರವಿ ಮತ್ತು ಸತೀಶ ಯಾರಿಗೆ ದೂರು ಕೊಡಬೇಕು ಎಂಬ ಗೊಂದಲದಲ್ಲಿ ಇದ್ದಾರೆ. ಅವರಿಗೆ ಸಹಾಯ ಮಾಡುವಿರಾ? ಇಂತಹ ಸಂದರ್ಭದಲ್ಲಿ ಅವರು ಯಾರ ಸಹಾಯ ಪಡೆದುಕೊಳ್ಳಬಹುದು ತಿಳಿಸಿ.

ಶಾಲೆಗಳಲ್ಲಿ ಮಕ್ಕಳ ಮೇಲೆ ಹಿಂಸೆ, ಕಿರುಕುಳ, ಶೋಷಣೆ, ದೌರ್ಜನ್ಯಗಳಿಂದಾಗುವ ಅನಾಹುತಗಳು ಹಾಗೂ ನಿವಾರಣೋಪಾಯಗಳ ಬಗ್ಗೆ ಅರಿವು ಮೂಡಿಸಿ, ಶಾಲೆಗಳನ್ನು ಮಕ್ಕಳ ಸ್ನೇಹಿಯಾಗಿಸಲು ಯುನೆಸ್ಕೋ ಕರೆ ನೀಡಿದೆ ಹಾಗೂ ನವೆಂಬರ್ 2 ಅನ್ನು 'ಶಾಲೆಯಲ್ಲಾಗುವ ಹಿಂಸೆಗಳನ್ನು ತಡೆಯುವ ದಿನ' ಎಂದು ಘೋಷಣೆ ಮಾಡಿದೆ. ಹಾಗಾಗಿ ಶಾಲೆಗಳನ್ನು ಭಯ ಮುಕ್ತ ಸ್ಥಳ ಹಾಗೂ ಮಕ್ಕಳ ಸ್ನೇಹಿ ಶಾಲೆಯನ್ನಾಗಿಸಲು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಚಿಂತಿಸೋಣ.

## 3.2 ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶ; ನಿಮಗೆ ತಿಳಿದಿದೆಯೇ?

ಇಂದಿನ ಸನ್ನಿವೇಶದಲ್ಲಿ, ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಮತ್ತು ಶೋಷಣೆಯ ಪ್ರಕರಣಗಳು ಹೆಚ್ಚು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿರುವುದರಿಂದ ಪೋಷಕರು, ಶಿಕ್ಷಕರು ಮತ್ತು ಪಾಲಕರು ಆತಂಕಕ್ಕೆ ಈಡಾಗಿದ್ದಾರೆ. ಇದರಿಂದ ರಕ್ಷಣೆ ಹೊಂದಲು ಆಘಾತಗಳನ್ನು ತಡೆಯಲು ಪೋಷಕರು, ತಮ್ಮ ಮಕ್ಕಳೊಂದಿಗೆ ಸೂಕ್ತವಾದ ಮತ್ತು ಅನುಚಿತವಾದ ವರ್ತನೆಗಳ ನಡುವಿನ ವ್ಯತ್ಯಾಸಗಳ ಬಗ್ಗೆ ಮಾತನಾಡುವುದು ಅತ್ಯಗತ್ಯವಾಗಿದೆ. ಲೈಂಗಿಕ ಗುರುತು ಮತ್ತು ಲೈಂಗಿಕ ಬೆಳವಣಿಗೆಯ ಬಗ್ಗೆ ಮಕ್ಕಳೊಂದಿಗೆ ಮಾತನಾಡುವುದು ಸಹ ಮುಖ್ಯವಾಗಿದೆ.



ಚಿಕ್ಕ ವಯಸ್ಸಿನಲ್ಲಿ, ಮಕ್ಕಳು ತಮ್ಮ ದೇಹದ ವಿವಿಧ ಭಾಗಗಳನ್ನು ಕುರಿತು ಕುತೂಹಲ ಹೊಂದಿರುತ್ತಾರೆ. ತಮ್ಮ ದೇಹದ ಭಾಗಗಳನ್ನು ಸ್ಪರ್ಶಿಸುವ ಮೂಲಕ ಅಥವಾ ಜನನಾಂಗಗಳನ್ನು ಮುಟ್ಟಿ ನೋಡಿಕೊಳ್ಳುವ ಮೂಲಕ ತಮ್ಮ ದೇಹವನ್ನು ಅನ್ವೇಷಿಸಲು ಪ್ರಾರಂಭಿಸುತ್ತಾರೆ. ಆರಂಭಿಕ ವರ್ಷಗಳಲ್ಲಿ, ಅವರಿಗೆ ತಮ್ಮ ಪಾತ್ರ, ಸುರಕ್ಷತೆ ಮತ್ತು ಗೌಪ್ಯತೆ ಮತ್ತು ಖಾಸಗಿ ಭಾಗಗಳ ಬಗೆಗೆ ಸೂಕ್ತ ಮಾರ್ಗದರ್ಶನದ ಅಗತ್ಯವಿರುತ್ತದೆ.

## ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶದ ಬಗ್ಗೆ ತಿಳಿಸುವುದರ ಪ್ರಾಮುಖ್ಯತೆ

ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶದ ಬಗ್ಗೆ ಮಕ್ಕಳನ್ನು ಭಾವನಾತ್ಮಕವಾಗಿ ದೃಢವಾಗಿಸುವಂತೆ ಮಾಡುವ ವಿವಿಧ ವಿಷಯಗಳ ಬಗ್ಗೆ ಮಕ್ಕಳನ್ನು ಸಂವೇದನಾಶೀಲಗೊಳಿಸುವುದು ಕಡ್ಡಾಯವಾಗಿದೆ. ಜೀವನದಲ್ಲಿ ಅಷ್ಟೊಂದು ಸಕಾರಾತ್ಮಕವಲ್ಲದ ಘಟನೆಗಳನ್ನು ಉತ್ತಮ ರೀತಿಯಲ್ಲಿ ಮತ್ತು ಆರೋಗ್ಯಕರ ರೀತಿಯಲ್ಲಿ ನಿರ್ವಹಿಸಲು ಇದು ಅವರಿಗೆ ಸಹಾಯ ಮಾಡುತ್ತದೆ. ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶದ ನಡುವಿನ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳುವುದು ಅವರು ಸಹಜವಾಗಿ ಬೆಳೆಯಲು ಸಹಾಯ ಮಾಡುತ್ತದೆ ಮತ್ತು ಅವರ ಜೀವನದಲ್ಲಿ ವಿವಿಧ ಘಟನೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

## ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶದ ನಡುವಿನ ವ್ಯತ್ಯಾಸ

ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶ ಎಂಬ ಎರಡು ಪ್ರಮುಖ ಪರಿಕಲ್ಪನೆಗಳು ಪ್ರತಿಯೊಬ್ಬರೂ ತಿಳಿದಿರಲೇಬೇಕು. ಯಾವುದೇ ರೀತಿಯ ದೈಹಿಕ ಸಂಪರ್ಕವಾಗಿದ್ದು ಅದು ಯಾರನ್ನಾದರೂ ಸುರಕ್ಷಿತವಾಗಿ ಮತ್ತು ಆರಾಮದಾಯಕವಾಗಿಸುತ್ತದೆ. ಇದು ಅಪ್ಪುಗೆಗಳು, ಹೈ-ಫೈವ್ಸ್ ಮತ್ತು ಬೆನ್ನುತಟ್ಟುವಿಕೆಗಳನ್ನು ಒಳಗೊಂಡಿರುತ್ತದೆ.

ಮತ್ತೊಂದೆಡೆ, ಅಸುರಕ್ಷಿತ ಸ್ಪರ್ಶವು ಯಾವುದೇ ರೀತಿಯ ದೈಹಿಕ ಸಂಪರ್ಕವಾಗಿದ್ದು ಅದು ಅಹಿತಕರ ಭಾವನೆ ಅಥವಾ ಭಯವನ್ನು ಉಂಟುಮಾಡುತ್ತದೆ. ಇದು ಮಕ್ಕಳನ್ನು ಅವರ ಅನುಮತಿಯಿಲ್ಲದೆ ಹೊಡೆಯುವುದು, ತಳ್ಳುವುದು ಅಥವಾ ಹಿಡಿಯುವುದನ್ನು ಮತ್ತು ಅವರ ಖಾಸಗಿ ಅಂಗಗಳನ್ನು ಮುಟ್ಟುವುದನ್ನು ಒಳಗೊಂಡಿರುತ್ತದೆ.

ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶದ ಬಗ್ಗೆ ವಯಸ್ಕರು ಮಕ್ಕಳೊಂದಿಗೆ ಮಾತನಾಡುವುದು ಮುಖ್ಯವಾಗಿದೆ ಆದ್ದರಿಂದ ಅವರು ಏನಾದರೂ ಸರಿಯಾಗಿಲ್ಲದಿದ್ದಾಗ ಅದರ ಬಗೆಗೆ ತಿಳಿಯುವುದು ಮತ್ತು ಅಗತ್ಯವಿದ್ದರೆ ಇತರರ ಸಹಾಯವನ್ನು ಹೇಗೆ ಪಡೆಯುವುದು ಎಂದು ತಿಳಿಯಬಹುದು.

## ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶದ ಉದಾಹರಣೆಗಳು


ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶಗಳ ಬಗೆಗೆ ತಿಳಿಸುವ ವಿವರಗಳು ಮಕ್ಕಳಿಗೆ ವೈಯಕ್ತಿಕ ಸುರಕ್ಷತೆಯ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡುವ ಪ್ರಮುಖ ಸಾಧನವಾಗಿದೆ. ಇದು ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶಗಳ ನಡುವಿನ ವ್ಯತ್ಯಾಸವನ್ನು ಗುರುತಿಸಲು ಎಲ್ಲರಿಗೂ ಸಹಾಯ ಮಾಡುತ್ತವೆ. ತಮ್ಮ ಭಾವನೆಗಳು ಮತ್ತು ಅನುಭವಗಳ ಬಗ್ಗೆ ಮಾತನಾಡಲು ಮಕ್ಕಳಿಗೆ ಸುರಕ್ಷಿತ ಭಾವವನ್ನು ಒದಗಿಸುತ್ತವೆ. ಈ ವಿವರಗಳನ್ನು ಬಳಸುವ ಮೂಲಕ, ಪೋಷಕರು, ಶಿಕ್ಷಕರು ಮತ್ತು ಆರೈಕೆ ಮಾಡುವವರು ವಿವಿಧ ಸಂದರ್ಭಗಳಲ್ಲಿ ಸುರಕ್ಷಿತವಾಗಿರುವುದು ಹೇಗೆ ಎಂಬುದನ್ನು ಅರ್ಥಮಾಡಿಕೊಳ್ಳಲು ಮಕ್ಕಳಿಗೆ ಸಹಾಯ ಮಾಡಬಹುದು. ಅವರು ಅಸುರಕ್ಷಿತ ಸ್ಪರ್ಶವನ್ನು ಅನುಭವಿಸಿದರೆ ಅಥವಾ ಅಸುರಕ್ಷಿತವೆಂದು ಭಾವಿಸಿದರೆ ಹೇಗೆ ಪ್ರತಿಕ್ರಿಯಿಸಬೇಕು ಎಂಬುದರ ಕುರಿತು ಅವು ಮಾರ್ಗದರ್ಶನ ನೀಡುತ್ತವೆ. ಈ ವಿವರಗಳ ಪಟ್ಟಿಯೊಂದಿಗೆ ನಡೆಸುವ ಚರ್ಚೆ ಮಕ್ಕಳಿಗೆ ಸೂಕ್ತವಾದ ಮತ್ತು ಸೂಕ್ತವಲ್ಲದ ನಡವಳಿಕೆಯ ಜ್ಞಾನದ ಮೂಲಕ ಅವರು ತಮ್ಮನ್ನು ತಾವು ಹಾನಿಯಿಂದ ರಕ್ಷಿಸಿಕೊಳ್ಳಲು ಸಹಾಯ ಮಾಡುತ್ತವೆ.

**ಸುರಕ್ಷಿತ ಸ್ಪರ್ಶದ ಉದಾಹರಣೆಗಳು** – ಪೋಷಕರಿಂದ ಅಪ್ಪುಗೆಗಳು ಮತ್ತು ಚುಂಬನಗಳು, ಪುಟ್ಟ ಮಕ್ಕಳಿಗೆ ಪೋಷಕರು ಸ್ನಾನ ಮಾಡಿಸುವುದು ಮತ್ತು ಖಾಸಗಿ ಭಾಗಗಳನ್ನು ಸ್ವಚ್ಛಗೊಳಿಸುವುದು, ಶಿಕ್ಷಕರಿಂದ ಮೆಚ್ಚುಗೆಯ ಮತ್ತು ವಾತ್ಸಲ್ಯದ ಬೆನ್ನು ತಟ್ಟುವಿಕೆ.

**ಅಸುರಕ್ಷಿತ ಸ್ಪರ್ಶದ ಉದಾಹರಣೆಗಳು** – ಮಗುವನ್ನು ಹೊಡೆಯುವುದು, ಗಿಲ್ಲುವುದು ಅಥವಾ ನೋಯಿಸುವುದು, ಯಾರಾದರೂ ಮಗುವಿನ ಖಾಸಗಿ ಭಾಗಗಳ ಮೇಲೆ ತಮ್ಮ ಕೈಗಳನ್ನು ಹಾಕುವುದು ಮತ್ತು ಮಗುವಿನ ಬಟ್ಟೆಯೊಳಗೆ ಯಾರಾದರೂ ತಮ್ಮ ಕೈಗಳನ್ನು ಹಾಕುವುದು.

## ಮಗುವಿಗೆ ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶ ಕಲಿಸಲು ಸಲಹೆಗಳು

**ಸ್ಪಷ್ಟ ಮಾರ್ಗ ಸೂಚಿಗಳು :** ಮಕ್ಕಳಿಗೆ ಈ ಮುಂದಿನ ವಿಚಾರಗಳ ಕುರಿತು ತಿಳಿದಿದೆಯೇ ಎಂದು ಖಚಿತಪಡಿಸಿಕೊಳ್ಳಿ, ಯಾರೂ ಸಹ ಅವರ ಖಾಸಗಿ ಭಾಗಗಳನ್ನು ಸ್ಪರ್ಶಿಸುವುದು ಅಥವಾ ನೋಡುವುದು ಸರಿಯಲ್ಲ. ಮಕ್ಕಳಿಗೆ ಈ ನಿಯಮವನ್ನು ಅನುಸರಿಸಲು ಸುಲಭವಾಗುತ್ತದೆ ಮತ್ತು ಅವರು ಅಸುರಕ್ಷಿತ ಸ್ಪರ್ಶವನ್ನು ಗುರುತಿಸಲು ಸಾಧ್ಯವಾಗುತ್ತದೆ. 7 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ, ನೀವು ಖಾಸಗಿ ಭಾಗಗಳನ್ನು ವಿವರಿಸಲು ಈಜುಡುಗೆ ನಿಯಮವನ್ನು ಬಳಸಬಹುದು (ಈಜು ಸೂಟ್‌ನಿಂದ ಮುಚ್ಚಲ್ಪಟ್ಟ ಭಾಗಗಳು).



## 3.3 ಬಾಲ್ಯದಲ್ಲೇ ಪ್ರೀತಿ, ಪ್ರೇಮ, ಪ್ರಣಯದ ಹೆಸರಿನಲ್ಲಿ ಮಕ್ಕಳ ಮೇಲೆ ಆಗುವ ಪರಿಣಾಮಗಳು

ಶಾಲೆ ಎಂದರೆ ಗೆಳೆಯ ಗೆಳತಿಯರಿರುವ ಸ್ವರ್ಗ. ಹದಿಹರೆಯದ ಮಕ್ಕಳಲ್ಲಿ ಹಲವಾರು ಭಾವನೆಗಳನ್ನು ಮೂಡಿಸುವ, ಬೆಳೆಸುವ ಅದ್ಭುತ ಸ್ಥಳ. ಇಲ್ಲಿಯೇ ಮಕ್ಕಳಿಗೆ ತಮ್ಮ ಅಸ್ತಿತ್ವ ಮತ್ತು ವ್ಯಕ್ತಿತ್ವ ಅರ್ಥವಾಗುವುದು. ಗೆಲುವು, ಸೋಲು, ಸಂತೋಷ, ದುಃಖ, ಕೋಪ, ನಿರಾಸೆ, ಪ್ರೀತಿ, ಪ್ರೇಮಗಳು ಅರಳುವ ಸ್ಥಳ ಸಹ. ಇದರೊಡನೆ ಒಂದಷ್ಟು ಮಕ್ಕಳಿಗೆ ಮನಸ್ಸನ್ನು ಹೇಗೆ ಹತೋಟಿಗೆ ತರುವುದು ಎಂಬುದು ಅರ್ಥವಾಗದೆ ಒದ್ದಾಡುವುದು ಈ ವಯಸ್ಸಿನಲ್ಲೇ. ಅದೂ ಪ್ರೌಢಶಾಲೆ ಮತ್ತು ಕಾಲೇಜಿನ ಮೆಟ್ಟಿಲುಗಳನ್ನು ಹತ್ತಿದ ಸಂದರ್ಭದಲ್ಲಿ. ಇದೇ ಸಮಯದಲ್ಲಿ ಅಲ್ಲವೆ ಏನೇನೋ ಪ್ರಶ್ನೆಗಳು, ಆತಂಕಗಳು, ಹಲವಾರು ಭಾವನೆಗಳ ತಾಕಲಾಟ ನಡೆಯುವುದು. ಪರಸ್ಪರರಲ್ಲಿ ಸ್ಪರ್ಧೆ, ಆಸೆ, ದುರಾಸೆ, ಅವುಗಳಿಂದಾಗಿ ಚಿಕ್ಕಪುಟ್ಟ ಗುಂಪುಗಾರಿಕೆ, ಒಮ್ಮೊಮ್ಮೆ ಮೇಲಾಟ, ಕೀಳಾಟ, ಈರ್ಷ್ಯೆ, ಸ್ಪರ್ಧೆ, ಅದರಿಂದಾಗಿ ಹೊಡೆದಾಟಗಳೂ ಆಗುವ ಸಾಧ್ಯತೆಗಳು ಈ ದಿನಗಳಲ್ಲಿ ಅಲ್ಲಲ್ಲಿ ಕಂಡು ಬಂದಿರುತ್ತದೆ.

ಈ ನಿಟ್ಟಿನಲ್ಲಿ ಪ್ರತಿಯೊಬ್ಬರಿಗೂ, ಕೆಲವು ನಿರ್ದಿಷ್ಟ ಕಾನೂನುಗಳ ಪ್ರಮುಖ ವಿಚಾರಗಳು ಕಡ್ಡಾಯವಾಗಿ ತಿಳಿದಿರಲೇಬೇಕು. ಪರಸ್ಪರರನ್ನು ಕುರಿತು ಪ್ರೀತಿ ಇರುವುದು ತಪ್ಪಲ್ಲ. ಆದರೆ ಸಿನಿಮಾಗಳಲ್ಲಿ ತೋರಿಸುವಂತೆ ಪ್ರೀತಿ, ಪ್ರೇಮ, ಕಾಮ ಎಂದೆಲ್ಲಾ ವಿದ್ಯಾರ್ಥಿ ದೆಸೆಯ 'ಬಾಲ್ಯ ಅಥವಾ ಮಗು' ವಯಸ್ಸಿನಲ್ಲಿ ಮುಂದುವರಿಯುವುದು ಸರಿಯೇ ತಪ್ಪೇ ಎಂದು ಆಲೋಚಿಸಬೇಕು. ಪ್ರೀತಿ ಪ್ರೇಮಗಳು ಕಿರಿಕಿರಿ, ಕಿರುಕುಳ, ಶೋಷಣೆ, ದೌರ್ಜನ್ಯದ ರೂಪ ತಾಳುವ ಸಾಧ್ಯತೆ ಕುರಿತು ಬಾಲಕರು ಮತ್ತು ಬಾಲಕಿಯರು ಆಲೋಚಿಸಲೇಬೇಕು.

ಕಾನೂನು ಬಾಹಿರ ಕೃತ್ಯ ನಡೆಸಿದ್ದ ಮಕ್ಕಳನ್ನು ಕುರಿತು ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2015 ರಲ್ಲಿ ಒಂದು ಮಹತ್ವದ ಅಂಶ ಕಂಡು ಬರುತ್ತದೆ. ಯಾವುದೇ ಕಾನೂನು ಬಾಹಿರ ಕೃತ್ಯ ಎಸಗಿದ 16–18 ವರ್ಷದೊಳಗಿನ ಬಾಲಕಿ ಅಥವಾ ಬಾಲಕರ ವಿಚಾರಣೆ ನಡೆಸಿದ ಮಕ್ಕಳ ನ್ಯಾಯ ಮಂಡಳಿ, ಆ ಮಕ್ಕಳ ಮನೋಸ್ಥಿತಿ ವಯಸ್ಕರಂತೆ ಇದೆಯೋ ಏನೋ ಎಂಬುದನ್ನು ಗುರುತಿಸಲು ವಿಶೇಷವಾದ ಮಾನಸಿಕ ಪರೀಕ್ಷೆಗಳನ್ನು ನಡೆಸುತ್ತದೆ. ಅಂತಹ ಮಕ್ಕಳ ವಿಚಾರಣೆಯನ್ನು ಮಕ್ಕಳ ನ್ಯಾಯಾಲಯ ನಡೆಸಿ ಕ್ರಮಗಳನ್ನು ಸೂಚಿಸುತ್ತಿದೆ. ತಜ್ಞರ ಸಲಹೆಗಳಂತೆ, ಸಂಬಂಧಿತ ಮಕ್ಕಳನ್ನು ಪುನರ್ವಸತಿಗಾಗಿ ಪರಿವೀಕ್ಷಣಾ ಗೃಹಕ್ಕೆ ಕಳಿಸಬಹುದು.

ದೆಹಲಿಯ ನಿರ್ಭಯ ಪ್ರಕರಣದ ನಂತರ ಮಕ್ಕಳ ನ್ಯಾಯ (ರಕ್ಷಣೆ – ಪೋಷಣೆ) ಕಾಯ್ದೆಯಲ್ಲಿ ಒಂದು ಮಹತ್ವದ ಅಂಶ ಸೇರಿಕೊಂಡಿದೆ. ಯಾವುದೇ ಕಾನೂನು ಬಾಹಿರ ಕೃತ್ಯ ಎಸಗಿದ ಬಾಲಕಿ ಅಥವಾ ಬಾಲಕರ ವಿಚಾರಣೆ ನಡೆಸಿದ ಮಕ್ಕಳ ನ್ಯಾಯ ಮಂಡಳಿ, ಆ ಮಕ್ಕಳ ಮನೋಸ್ಥಿತಿ ವಯಸ್ಕರಂತೆ ಇದೆಯೋ ಏನೋ ಎಂಬುದನ್ನು ಗುರುತಿಸಲು ವಿಶೇಷವಾದ ಮಾನಸಿಕ ಪರೀಕ್ಷೆಗಳನ್ನು ನಡೆಸುತ್ತದೆ. ಅದರ ಸಲಹೆಗಳಂತೆ, ಸಂಬಂಧಿತ ಮಕ್ಕಳನ್ನು ಪುನರ್ವಸತಿಗಾಗಿ ಪರಿವೀಕ್ಷಣಾ ಗೃಹಕ್ಕೆ ಕಳಿಸಬಹುದು ಅಥವಾ ವಯಸ್ಕರ ಮನಸ್ಸಿನಲ್ಲಿ ಮಾಡಿದ ಕೃತ್ಯ ಎಂದು ಪರಿಗಣಿಸಿದರೆ, ಮಕ್ಕಳ ನ್ಯಾಯಾಲಯ ವಿಚಾರಣೆ ಮಾಡಿ ಕಾನೂನು ಕ್ರಮ ಜರುಗಿಸಲು ಸೂಚಿಸಬಹುದು.

ಈ ನಿಟ್ಟಿನಲ್ಲಿ, ಎಲ್ಲಾ ಶಾಲೆಗಳು 'ಮಕ್ಕಳ ರಕ್ಷಣಾ ನೀತಿ' ಯನ್ನು ಅಳವಡಿಸಿಕೊಂಡು ಎಲ್ಲ ಶಿಕ್ಷಕ ಮತ್ತು ಶಿಕ್ಷಕೇತರ ವರ್ಗದ ವಯಸ್ಕರಿಗೆ POCSO ಕಾಯಿದೆ, ಬಾಲ್ಯವಿವಾಹ ನಿಷೇಧ ಕಾಯಿದೆ, ಮಕ್ಕಳ ನ್ಯಾಯ ಕಾಯಿದೆ ಮತ್ತು ಭಾರತೀಯ ದಂಡ ಸಂಹಿತೆಯ ವಿಚಾರಗಳನ್ನು ಕುರಿತು ಅರಿವು ಮೂಡಿಸುವುದು ಅತ್ಯವಶ್ಯಕ. ಜೊತೆಗೆ ಎಲ್ಲಾ ಮಕ್ಕಳೂ ಈ ಕಾಯಿದೆಗಳ ಮುಖ್ಯಾಂಶಗಳನ್ನು ಕುರಿತು ಅರಿತುಕೊಳ್ಳುವುದು ಅತ್ಯಗತ್ಯ.

# ಅಧ್ಯಾಯ–4

# ನೀವು ಲೈಂಗಿಕ ಶೋಷಣೆಗೆ ಗುರಿಯಾದರೆ ಅಥವಾ ಅಂತಹ ಗುರಿಯಾಗುವ ಸಾಧ್ಯತೆ ಕಂಡು ಬಂದರೆ ಏನು ಮಾಡಬೇಕು?

ಮಕ್ಕಳೇ, 18 ವರ್ಷದವರೆಗೂ ಎಲ್ಲಾ ವ್ಯಕ್ತಿಗಳು ಮಕ್ಕಳು ಎಂದು ಈ ಮೊದಲಿನ ಚರ್ಚೆಗಳಲ್ಲಿ ನೀವು ತಿಳಿದಿದ್ದೀರಿ. ಮಕ್ಕಳನ್ನು ಹಕ್ಕುಗಳಿರುವ ಪ್ರಜೆಗಳು ಎಂದು ಭಾರತದ ಸಂವಿಧಾನದ 5ನೇ ಪರಿಚ್ಛೇದ ತಿಳಿಸಿದೆ. ಮಕ್ಕಳ ರಕ್ಷಣೆಯ ಹಕ್ಕುಗಳನ್ನು ಮಕ್ಕಳ ಹಕ್ಕುಗಳ ಒಡಂಬಡಿಕೆ, ಭಾರತದ ಹಲವು ಕಾಯಿದೆಗಳು, ಸಂವಿಧಾನ ಸ್ಪಷ್ಟಪಡಿಸಿದೆ. ಯಾವುದೇ ಮಕ್ಕಳಿಗೂ ದಬ್ಬಾಳಿಕೆ, ದೌರ್ಜನ್ಯ ಆಗದಂತೆ ರಕ್ಷಿಸಬೇಕಿದೆ. ಈ ಮೊದಲು ವಿವರಿಸಲಾಗಿರುವ ಅಧ್ಯಾಯಗಳಲ್ಲಿ ಯಾವುದೇ ರೀತಿಯ ಲೈಂಗಿಕ ಶೋಷಣೆಗಳು ಮಕ್ಕಳಿಗೆ ಆಗಬಾರದು ಎಂದು ಮೇಲಿಂದ ಮೇಲೆ ಹೇಳಲಾಗಿದೆ. ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸಲು ಇರುವ ಕಾಯಿದೆ POCSO ಎಂದು ಕೂಡ ಈಗಾಗಲೇ ನೀವು ಅರಿತಿದ್ದೀರಿ.

ವಿಜ್ಞಾನದ ಪಾಠಗಳಲ್ಲಿ ದೇಹರಚನೆ, ಸ್ವಚ್ಛತೆ ಬಗ್ಗೆ ನೀವು ಕಲಿತಿರಬಹುದು. ಪ್ರತಿಯೊಬ್ಬರ ದೇಹದ ಮೇಲೆ ಅವರದೇ ಅಧಿಕಾರವೂ ಇರುತ್ತದೆ. ಅಂದರೆ ಬೇರೆ ಯಾರೂ ಕೂಡ ಮಕ್ಕಳಿಗೆ ತೊಂದರೆ ನೀಡಬಾರದು, ಲೈಂಗಿಕವಾಗಿ ಹಿಂಸಿಸಬಾರದು ಎಂದರ್ಥ.

ಇದನ್ನು ಹೀಗೆ ಅರ್ಥಮಾಡಿಕೊಳ್ಳೋಣ. ಮಕ್ಕಳ ಖಾಸಗಿ ಅಂಗಗಳನ್ನು, ಮಕ್ಕಳ ದೇಹವನ್ನು ಅನಗತ್ಯವಾಗಿ ಯಾರೂ ಸ್ಪರ್ಶ ಮಾಡಬಾರದು (ಮುಟ್ಟಬಾರದು). ಬಟ್ಟೆಯಿಂದ ನಾವು ಮುಚ್ಚಿಕೊಳ್ಳುವ ಅಂಗಗಳನ್ನು ತೋರಿಸು ಎಂದು ಬಲವಂತ ಮಾಡಬಾರದು ಅಥವಾ ಕದ್ದುಮುಚ್ಚಿ ನೋಡಬಾರದು. ಚಿಕ್ಕಮಕ್ಕಳಿಗೆ ಅವರ ಪೋಷಕರು ಸ್ನಾನ ಮಾಡಿಸುವಾಗ ಮೈಮುಟ್ಟುವುದು, ಎದೆ, ಹೊಟ್ಟೆ, ಜನನಾಂಗಗಳನ್ನು ಸ್ವಚ್ಛಗೊಳಿಸಲು ನೀರು ಹಾಕುವುದು ಸಾಮಾನ್ಯ. ಹಾಗೆಯೇ ಮಕ್ಕಳಿಗೆ ವೈದ್ಯರು ಚಿಕಿತ್ಸೆ ನೀಡುವಾಗ ಅವರ ಪೋಷಕರ ಸಮ್ಮುಖದಲ್ಲಿ ದೇಹವನ್ನು ಮುಟ್ಟಿ ಪರೀಕ್ಷೆ ಮಾಡಬಹುದು, ಚಿಕಿತ್ಸೆ ನೀಡಬಹುದು. ಆದರೆ ಬೇರೇ ಯಾರೋ (ಅವರ ಬಂಧುಗಳು, ಸ್ನೇಹಿತರು ಇನ್ಯಾರಾದರೂ ಸರಿ) ಕಾರಣವಿಲ್ಲದೆ ಮತ್ತು ಕಿರಿಕಿರಿಯಾಗುವಂತೆ ಎಲ್ಲಿಯೂ ಮುಟ್ಟಬಾರದು. ಮಕ್ಕಳೂ ಕೂಡ ಇತರರ ಖಾಸಗಿ ಅಂಗಗಳನ್ನು ಮುಟ್ಟಬಾರದು.

ಮಕ್ಕಳು ಬಟ್ಟೆ ಧರಿಸದಿರುವ ಫೋಟೋಗಳನ್ನು ತೆಗೆಯುವುದು, ಇರಿಸಿಕೊಳ್ಳುವುದು, ಮಕ್ಕಳ ಮೈಮೇಲೆ ಬೇಕೆಂದೇ ಬೀಳುವುದು ಇತ್ಯಾದಿ ಲೈಂಗಿಕ ಅಪರಾಧಗಳ ಬಗ್ಗೆ ಈ ಹಿಂದೆ ಈ ಕೈಪಿಡಿಯ ಇತರ ಅಧ್ಯಾಯಗಳಲ್ಲಿ ನೀವು ಓದಿದ್ದೀರಿ. ಈ ಅಧ್ಯಾಯದಲ್ಲಿ ಇಂತಹ ಯಾವುದೇ ಘಟನೆಗಳಿಗೆ ಗುರಿಯಾಗುವ ಸಾಧ್ಯತೆ ಇದ್ದರೆ ಅಥವಾ ಇಂತಹ ತೊಂದರೆಗಳಿಗೆ ಒಳಗಾದರೆ ನಿಮ್ಮನ್ನು ನೀವು ಹೇಗೆ ರಕ್ಷಿಸಿಕೊಳ್ಳಬಹುದು, ಮುಂದೆ ಏನು ಮಾಡಬಹುದು, ಯಾರ ಸಹಾಯ ಪಡೆದುಕೊಳ್ಳಬಹುದು ಇತ್ಯಾದಿ ಅಂಶಗಳ ಬಗ್ಗೆ ತಿಳಿಯೋಣ. ಆ ಮೂಲಕ ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ ಒಳ್ಳೆಯ ಪ್ರಯತ್ನಕ್ಕೆ ನಾವೆಲ್ಲರೂ ಕೈ ಜೋಡಿಸೋಣ.

ಈ ವಿಚಾರಗಳನ್ನು ಎರಡು ಬಗೆಯಲ್ಲಿ ತಿಳಿಯೋಣ.

**ಮೊದಲನೆಯದಾಗಿ, ಮಕ್ಕಳು ಲೈಂಗಿಕ ಶೋಷಣೆ, ಲೈಂಗಿಕ ಹಲ್ಲೆಗಳಂತಹ ಯಾವುದೇ ಘಟನೆಗಳಿಗೆ ಗುರಿಯಾಗುವ ಸಾಧ್ಯತೆ ಇದ್ದರೆ ಏನು ಮಾಡಬಹುದು ನೋಡೋಣ.**

ನಿಮ್ಮ ದೇಹ ನಿಮ್ಮ ಹಕ್ಕು. ಯಾರೂ ಕೂಡ ಮಕ್ಕಳಿಗೆ ತೊಂದರೆ ಕೊಡಬಾರದು. ತೊಂದರೆಗಳು ಆಗುತ್ತಿದ್ದಲ್ಲಿ ಧೈರ್ಯವಾಗಿ ಆ ಕುರಿತು ದೂರು ನೀಡಿ ಸಹಾಯ ಪಡೆಯಬಹುದು. ಅಷ್ಟೇ ಅಲ್ಲ, ಪ್ರೀತಿ ಮಾಡುತ್ತೇವೆಂದು ಯಾರಾದರೂ ಒತ್ತಾಯಿಸಿ ತೊಂದರೆ ಕೊಡಲು ಬಂದರೂ ಕೂಡ ಸಹಾಯ ಪಡೆಯಿರಿ. ಸಹಾಯ ಪಡೆಯಲು ಕೆಲವು ಚಿಕ್ಕಪುಟ್ಟ ಸಲಹೆಗಳು ಈ ಮುಂದಿನಂತಿವೆ.

**ಇವುಗಳನ್ನು ಯಾವಾಗಲೂ ನೆನಪಿಟ್ಟುಕೊಳ್ಳಲು ಪ್ರಯತ್ನಿಸಿ ಮತ್ತು ನಿಮ್ಮ ಸ್ನೇಹಿತರೊಂದಿಗೂ ಹಂಚಿಕೊಳ್ಳಿ.**

1. ಯಾರಾದರೂ ನಿಮ್ಮೊಂದಿಗೆ ನಿಮಗಿಷ್ಟವಿಲ್ಲದ ರೀತಿ ನಡೆದುಕೊಂಡಲ್ಲಿ "ಬೇಡ" ಎಂದು ಗಟ್ಟಿಯಾಗಿ ಕೂಗಿ ಹೇಳಿ.
2. ಅಂತಹವರು ನಿಮಗೆ ತಿಳಿಯದಿರುವವರು ಅಥವಾ ತಿಳಿದಿರುವವರು ಆದರೂ, ಅವರು ನಡೆದುಕೊಳ್ಳುತ್ತಿರುವ ರೀತಿ ನಿಮಗಿಷ್ಟವಿಲ್ಲದಿದ್ದರೆ–ಬಲವಂತವಾಗಿ ಮುತ್ತು ನೀಡುವುದು, ಕೈ, ಕೆನ್ನೆ, ತೊಡೆ, ಎದೆ, ಸೊಂಟ, ನಿತಂಬ ಮುಟ್ಟಲು ಬಂದರೆ, ಅಪ್ಪಿಕೊಳ್ಳಲು ಬಂದರೆ ನೀವು ನವಿರಾಗಿ 'ಬೇಡ ದೂರವಿರಿ' ಎಂದು ಹೇಳಬಹುದು. ಅದು ಕಿರಿಕಿರಿ ಎನಿಸಿದರೆ ನೀವು ಗಟ್ಟಿಯಾಗಿಯೇ ಹೇಳಬಹುದು.
3. ನೀವೊಬ್ಬರೇ ಇದ್ದ ಸಮಯದಲ್ಲಿ, ಸ್ಥಳದಲ್ಲಿ ನಿಮಗೆ ತೊಂದರೆ ಎನಿಸುವಂತೆ ಯಾರಾದರೂ ನಡೆದುಕೊಂಡರೆ, ಮುಂದಾದರೆ ತಕ್ಷಣವೇ ಹೆಚ್ಚು ಜನರಿರುವ ಕಡೆಗೆ ಅಥವಾ ನಿಮಗೆ ತಿಳಿದಿರುವ ಜನರಿರುವ ಕಡೆ ಆದಷ್ಟು ಬೇಗ ಹೋಗಿ ಅವರ ನಡುವೆ ಇರಿ.
4. ತೊಂದರೆ ಕೊಡಲು ಬಂದವರನ್ನು ಕುರಿತು ನಿಮಗೆ ನಂಬಿಕೆ ಇರುವವರ ಜೊತೆ–ನಿಮ್ಮ ಪೋಷಕರು, ಶಿಕ್ಷಕರು ಅಥವಾ ಆಪ್ತ ಸಮಾಲೋಚಕರ ಬಳಿ ಹಂಚಿಕೊಳ್ಳಿ. ಸಹಾಯ ಪಡೆದುಕೊಳ್ಳಿ.

**ಎರಡನೆಯದು, ಒಂದು ವೇಳೆ ಇಂತಹ ತೊಂದರೆಗಳಿಗೆ ಒಳಗಾದರೆ ನಿಮ್ಮನ್ನು ನೀವು ಹೇಗೆ ರಕ್ಷಿಸಿಕೊಳ್ಳಬಹುದು ಎಂಬುದನ್ನು ತಿಳಿಯೋಣ.**

- ಮಕ್ಕಳ ಮೇಲೆ ಲೈಂಗಿಕ ಕಿರುಕುಳಗಳು ಆಗಬಾರದು ಎಂದು POCSO ಕಾಯಿದೆ ತಿಳಿಸಿದ್ದು, ಲೈಂಗಿಕ ಶೋಷಣೆ ಮಾಡಿದರೆ ಅಂತಹವರ ವಿರುದ್ಧ ಆದಷ್ಟು ಬೇಗನೆ ಪೊಲೀಸ್ ದೂರು ನೀಡುವುದು ಮುಖ್ಯವಾದ ಮತ್ತು ಅಗತ್ಯವಾದ ಕೆಲಸವಾಗಿದೆ. ಅದು ಮೆಚ್ಚುವಂತಹದ್ದು ಕೂಡಾ. ಯಾಕೆಂದರೆ ದೂರು ನೀಡಿದ್ದೇ ಆದಲ್ಲಿ, ಪೊಲೀಸ್ ಕ್ರಮ ಆರಂಭವಾಗುತ್ತದೆ ಮತ್ತು ಕಿರುಕುಳ ನೀಡುವ ವ್ಯಕ್ತಿ/ವ್ಯಕ್ತಿಗಳು ಮತ್ತೆ ಮತ್ತೆ ಇಂತಹ ತೊಂದರೆಗಳನ್ನು ಯಾರ ಮೇಲೂ ಮಾಡದಂತೆ ತಡೆಯಬಹುದು. ಅಂತಹ ವ್ಯಕ್ತಿಗಳು ಇತರ ಮಕ್ಕಳಿಗೆ ತೊಂದರೆ ಕೊಡುವುದನ್ನು ನಿಮ್ಮಿಂದ ತಡೆದಂತಾಯಿತು ಅಲ್ಲವೇ. ಹಾಗಾಗಿ ನೀವು ದೂರು ಕೊಡುವುದು ಬಹಳ ಒಳ್ಳೆಯ ಕೆಲಸ.

ಇಂತಹ ಘಟನೆಗಳು ನಡೆದಾಗ

1. ನಿಮಗೆ ಯಾರ ಮೇಲೆ ನಂಬಿಕೆ ಇರುತ್ತದೋ ಅಂದರೆ ಪೋಷಕರು, ಶಿಕ್ಷಕರು ಅಥವಾ ಆಪ್ತ ಸಮಾಲೋಚಕರು ಅವರ ಬಳಿ ಹಂಚಿಕೊಳ್ಳಿ.

2. ಚೈಲ್ಡ್‌ಲೈನ್ 1098 ಅಥವಾ ಪೊಲೀಸ್ ಸಹಾಯವಾಣಿ 112 ದೂರವಾಣಿ ಸಂಖ್ಯೆಗೆ ಕರೆ ಮಾಡಿ, ನಿಮಗಾಗಿರುವ ತೊಂದರೆ ಬಗ್ಗೆ ಮುಕ್ತವಾಗಿ ತಿಳಿಸಿ ಸಹಾಯ ಪಡೆದುಕೊಳ್ಳಬಹುದು

3. ನಿಮ್ಮ ಸಮೀಪದ ಪೊಲೀಸ್ ಠಾಣೆಯಲ್ಲಿ ಮಕ್ಕಳಿಗೆ ಸಹಾಯ ಮಾಡಲೆಂದೇ ನೇಮಕವಾಗಿರುವ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳಿಗೆ ತಿಳಿಸಿ, ದೂರು ದಾಖಲಿಸಿ ರಕ್ಷಣೆ ಪಡೆಯಿರಿ.

4. ನಿಮಗೆ ಅಗತ್ಯವಿದ್ದರೆ ಕಾನೂನಿನ ಮೂಲಕ ಸಹಾಯ ಮಾಡುವ ಬೆಂಬಲ ವ್ಯಕ್ತಿಗಳನ್ನು ನಿಮ್ಮ ಸಹಾಯಕ್ಕೆ ನೇಮಿಸಲು ಮಕ್ಕಳ ಕಲ್ಯಾಣ ಸಮಿತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದವರನ್ನು ಸಂಪರ್ಕಿಸಿ.

5. ಸರ್ಕಾರದಿಂದ ನಿಮಗೆ ವಕೀಲರನ್ನು (ಸರ್ಕಾರಿ ಅಭಿಯೋಜಕರನ್ನು) ನೇಮಿಸಲಾಗುತ್ತದೆ. ನಿಮಗೆ ಬೇಕಿದ್ದಲ್ಲಿ ಖಾಸಗಿಯಾಗಿ ವಕೀಲರನ್ನು ನೇಮಿಸಿಕೊಳ್ಳಬಹುದು.

6. ಮಕ್ಕಳ ಮೇಲೆ ಲೈಂಗಿಕ ತೊಂದರೆ ಆಗಿದ್ದರೆ, ಅಂತಹ ಪ್ರಕರಣಗಳನ್ನು ವಿಶೇಷ ನ್ಯಾಯಾಲಯಗಳಲ್ಲಿ ಇತ್ಯರ್ಥ ಮಾಡಲಾಗುತ್ತದೆ ಹಾಗೂ ಆರೋಪಿಯನ್ನು ಭೇಟಿ ಮಾಡದೆ, ಅವರ ಎದುರು ನಿಂತು ಮಾತನಾಡದಂತೆ, ಮುಜುಗರ, ಭಯ ಅನುಭವಿಸದಂತೆ ಮಕ್ಕಳನ್ನು ರಕ್ಷಿಸಲು ವ್ಯವಸ್ಥೆಗಳಿವೆ. ನೀವು ಅವುಗಳ ಸಹಾಯ ಪಡೆದುಕೊಂಡು ಮುಕ್ತವಾಗಿ ಘಟನೆಯ ಬಗ್ಗೆ ತಿಳಿಸಿ, ನ್ಯಾಯ ಪಡೆದುಕೊಳ್ಳಿ ಮತ್ತು ಇತರ ಮಕ್ಕಳಿಗೆ ತೊಂದರೆಯಾಗದಂತೆ ರಕ್ಷಿಸಿ.

## 4.1 ಮಕ್ಕಳು ಲೈಂಗಿಕ ಶೋಷಣೆ ಅಥವಾ ಇನ್ನಿತರೆ ಸಮಸ್ಯೆ/ತೊಂದರೆಗೊಳಗಾದಲ್ಲಿ ಜಾಗೃತವಾಗಿರುವ ರಕ್ಷಣಾ ವ್ಯವಸ್ಥೆಗಳು

1. ಚೈಲ್ಡ್ ಹೆಲ್ಪ್ ಲೈನ್ 1098
2. ಪೊಲೀಸ್ ಸಹಾಯವಾಣಿ 112
3. ಶಾಲಾ ಮಕ್ಕಳ ರಕ್ಷಣಾ ಸಮಿತಿ
4. ವಿದ್ಯಾರ್ಥಿನಿಲಯಗಳ ಮಕ್ಕಳ ರಕ್ಷಣಾ ಸಮಿತಿ
5. ಸ್ಥಳೀಯ ಪೊಲೀಸ್ ಠಾಣೆಗಳ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳು (CWPO)
6. ಮಕ್ಕಳ ಪರವಾಗಿ ಇರುವ ಪಂಚಾಯತಿಗಳ ಮಕ್ಕಳ ಸಮಿತಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು
7. ಮಹಿಳೆಯರು ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ (WCPC)
8. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳು (CWC)

9. ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು (DCPU)

10. ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ

11. ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (KSCPCR)

12. ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ. (NCPCR)

## 4.2 ಮಕ್ಕಳೇ ನಿಮಗೆ ಪೊಲೀಸ್ ಠಾಣೆಗಳು ನಡೆಸುವ ತೆರೆದ ಮನೆ ಕುರಿತು ಪರಿಚಯವಿದೆಯೇ?

**'ತೆರೆದ ಮನೆ: ಮಕ್ಕಳ ರಕ್ಷಣೆಯತ್ತ ಒಂದು ವಿನೂತನ ಹೆಜ್ಜೆ'**

- ಮಕ್ಕಳ ಮತ್ತು ಮಹಿಳೆಯರ ರಕ್ಷಣೆಗಾಗಿ ಪೊಲೀಸ್ ಇಲಾಖೆಯಿಂದ ರೂಪುಗೊಂಡ ಕಾರ್ಯಕ್ರಮ 'ತೆರೆದಮನೆ'. ಉತ್ತರ ಕರ್ನಾಟಕದ ಗುಲ್ಬರ್ಗಿ ವಲಯದಲ್ಲಿ ಪ್ರಾರಂಭಗೊಂಡ ಈ ಕಾರ್ಯಕ್ರಮವನ್ನು (ಸಂ: ಡಿಜಿಪಿ/ತರಬೇತಿ/ಎಸ್‌ಜೆಪಿಯು/15/2013 ದಿ:31/05/2013) ವಿಶಾಲ ಕರ್ನಾಟಕಕ್ಕೆ ವಿಸ್ತರಿಸಿದೆ. ಮೂಲತ: ಶಾಲಾ ಮಕ್ಕಳನ್ನು ಹಾಗೂ ಮಹಿಳೆಯರನ್ನು ಪೊಲೀಸ್ ಠಾಣೆಗೆ ಕರೆತಂದು ಪೊಲೀಸ್ ಇಲಾಖೆ ಮತ್ತು ಕರ್ತವ್ಯಗಳ ಹಾಗೂ ಅವರ ರಕ್ಷಣೆ ಮತ್ತು ಸುರಕ್ಷತೆಯ ಬಗ್ಗೆ ಸಂವಾದ ನಡೆಸುವುದೇ 'ತೆರೆದ ಮನೆ'.
- ತೆರೆದ ಮನೆ ಕಾರ್ಯಕ್ರಮವು ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಪ್ರತಿ ಗುರುವಾರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 4–30 ಗಂಟೆಯವರೆಗೆ ನಡೆಯುತ್ತದೆ. ಪೊಲೀಸ್ ಠಾಣೆಗೆ ಮಕ್ಕಳನ್ನು ಹಾಗೂ ಮಹಿಳೆಯರನ್ನು ಆಹ್ವಾನಿಸಿ/ಠಾಣಾ ವ್ಯಾಪ್ತಿಯ ಶಾಲೆಗಳಿಗೆ ಪೊಲೀಸರು ಭೇಟಿ ನೀಡಿ ಸಂವಾದ ನಡೆಸುವುದರ ಮೂಲಕ ಪೊಲೀಸ್ ಹಾಗೂ ಮಕ್ಕಳು, ಸಂಬಂಧವನ್ನು ಸಬಲೀಕರಣಗೊಳಿಸಿ, ಗಟ್ಟಿ ಮಾಡುವುದು.
- ಮಕ್ಕಳು ಸಮುದಾಯದ ಪ್ರಜ್ಞಾವಂತ ಪ್ರಜೆಗಳಾಗಿರುವುದರಿಂದ (ಇಂದಿನ ಮಕ್ಕಳು ಇಂದಿನ ಪ್ರಜೆಗಳು) ಠಾಣಾ ವ್ಯಾಪ್ತಿಯಲ್ಲಿರುವ ಶಾಲಾ ಕಾಲೇಜುಗಳ ಮಕ್ಕಳನ್ನು ಪೊಲೀಸ್ ಠಾಣೆಗೆ ಕರೆತಂದು ಅಥವಾ ಅವರು ಇರುವಲ್ಲಿಗೆ ತೆರಳಿ ಪೊಲೀಸ್ ವ್ಯವಸ್ಥೆ ಮತ್ತು ಸೌಲಭ್ಯಗಳ ಕುರಿತು ಅರಿವು ಮೂಡಿಸುವುದು ಮತ್ತು ಅವರ ಹಕ್ಕುಗಳ ಬಗ್ಗೆ ಜ್ಞಾನವನ್ನು ಹೆಚ್ಚಿಸಿ ಅವರ ರಕ್ಷಣೆಗೆ ಸಹಕಾರಿಯಾಗುವುದೇ ಕಾರ್ಯಕ್ರಮದ ಉದ್ದೇಶ. ಇದರಿಂದ ಮಕ್ಕಳಲ್ಲಿ ಪೊಲೀಸರ ಬಗ್ಗೆ ಇರುವ ಭಯವನ್ನು ತೊಡೆದು ಹಾಕಿ ಮಕ್ಕಳ ಸ್ನೇಹಿ ಪೊಲೀಸ್ ಕಲ್ಪನೆಯ ಬೀಜ ಬಿತ್ತಿ ಸಮುದಾಯ ಪೊಲೀಸ್ ರಕ್ಷಣಾ ವ್ಯವಸ್ಥೆಯನ್ನು ಎತ್ತಿ ಹಿಡಿಯುವುದಾಗಿದೆ. ಕೇವಲ ಮಾಹಿತಿ ನೀಡುವುದಲ್ಲದೆ ಕಲಿಕೆಗೆ ಅವಕಾಶ ಕಲ್ಪಿಸಿ ಅವರಿಗೆ ಸ್ವರಕ್ಷಣೆಯ ವಿಧಾನಗಳನ್ನು ತಿಳಿಸುವುದಾಗಿದೆ.

## 4.3 ಮಕ್ಕಳೇ ಇವುಗಳ ಬಗ್ಗೆ ಎಚ್ಚರಿಕೆ ಇರಲಿ – ಸೈಬರ್ ಸಂಪರ್ಕ, ಲೈಂಗಿಕ ಅಪರಾಧಗಳು ಮತ್ತು ತಡೆ

ಅಂತರ್ಜಾಲದ, ಅಂದರೆ ಇಂಟರ್‌ನೆಟ್ ಶೋಧನೆಯಿಂದ ವಿಶ್ವ ಬಹಳ ಹತ್ತಿರವಾಗಿದೆ ಅಲ್ಲವೇ? ಸಂವಹನದಲ್ಲಿ ಕ್ರಾಂತಿಯೇ ಆಗಿದೆ. ಹಾಗೆಯೆ ಇಂಟರ್‌ನೆಟ್ ಬಳಸಿ ಅಪರಾಧಗಳೂ ಹೆಚ್ಚಾಗಿವೆ. ಈಗ ನಮ್ಮೆದುರು ಇರುವ ದೊಡ್ಡ ಸವಾಲು ಇಂಟರ್‌ನೆಟ್ ದುರ್ಬಳಕೆಯಿಂದ ಆಗುವ ಅಪರಾಧಗಳ ವಿರುದ್ಧ ಮಕ್ಕಳನ್ನು ಹಾಗೂ ಮುಗ್ಧರನ್ನು ರಕ್ಷಿಸುವುದೇ ಆಗಿದೆ.

ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ವಾಟ್ಸ್‌ಆಪ್, ಎಕ್ಸ್, ಹೀಗೆ ಹಲವಾರು ಜಾಲತಾಣಗಳು ಎಲ್ಲರಿಗೂ ಹೊಸ ಪ್ರಪಂಚವನ್ನೇ ತೋರಿಸಿದೆ. ವಾಸ್ತವವಾಗಿ 18 ವಯಸ್ಸಿನ ಕೆಳಗಿನ ಮಕ್ಕಳು ಇವುಗಳಲ್ಲಿ ತೊಡಗಿಕೊಳ್ಳಬಾರದು ಎಂದು ಇದ್ದರೂ, ಅನೇಕ ಮಕ್ಕಳು ತಮ್ಮನ್ನು ತಾವು ವಯಸ್ಸು ಹೆಚ್ಚಿಸಿಕೊಂಡು ಇವುಗಳಲ್ಲಿ ನೋಂದಾಯಿಸಿಕೊಂಡಿದ್ದಾರೆ. ತಾವೇ ಮುಂದಾಗಿ ಅಥವಾ ತಮ್ಮ ಕುಟುಂಬಗಳ ವಯಸ್ಕರ ಮಾರ್ಗದರ್ಶನದಲ್ಲಿ ಅವುಗಳ ಪ್ರಯೋಜನ ಪಡೆಯುತ್ತಿದ್ದಾರೆ.

ಆದರೆ ಮಕ್ಕಳನ್ನು ದುರುಪಯೋಗ ಮಾಡಲು ಶಿಶುಪೀಡಕರು ಸಹ ಸಾವಿರಾರು ಸಂಖ್ಯೆಯಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಇದ್ದಾರೆ. ಕಂಪ್ಯೂಟರ್, ಮೊಬೈಲ್, ಟ್ಯಾಬ್‌ಗಳೇ ಇವರ ಆಯುಧಗಳು. ಮುಗ್ಧ ಮಕ್ಕಳಿಗೆ ಬಲೆ ಬೀಸಿ ಕಾಯುತ್ತಿರುತ್ತಾರೆ. ಏನೂ ಅರಿಯದ ಮಕ್ಕಳು ಇವರ ಗಾಳಕ್ಕೆ ಸಿಕ್ಕಿ ಶೋಷಣೆ, ದೌರ್ಜನ್ಯಗಳನ್ನು ಅನುಭವಿಸುತ್ತಿದ್ದಾರೆ.

ಮಕ್ಕಳಿಗೆ ಗೆಳೆತನದ ಬೇಡಿಕೆ ಕಳಿಸುವುದು, ಅವರ ಇನ್‌ಬಾಕ್ಸ್‌ಗೆ ಸಂದೇಶ ಕಳಿಸುವುದು, ಮೊದಮೊದಲು ಬಹಳ ಚೆನ್ನಾಗಿ ಮಾತನಾಡಿ ಸ್ನೇಹ ಸಂಪಾದಿಸುವುದು ಮತ್ತು ಮುಂದೆ ಹೆದರಿಸುವುದು, ದುರುಪಯೋಗ ಮಾಡಿಕೊಳ್ಳುವುದು ಅವರ ತಂತ್ರ.

ಮಕ್ಕಳು ತಮ್ಮ ತಮ್ಮ ಆಸಕ್ತಿ, ಇಷ್ಟ ಮೊದಲಾದ ವಿಚಾರಗಳನ್ನು ತಮ್ಮ ಪ್ರೊಫೈಲ್‌ನಲ್ಲಿ ಹಾಕಿರುತ್ತಾರೆ. ತಾವು ಮಾಡಿದ ನೃತ್ಯ, ನಾಟಕ, ಆಡಿದ ಆಟಗಳು, ಭೇಟಿ ಕೊಟ್ಟ ಸ್ಥಳಗಳು, ತಮ್ಮ ಉಡುಗೆ ತೊಡುಗೆ, ತಮ್ಮ ಪರಿಚಿತರ ಫೋಟೋ ಹಾಕಿರುತ್ತಾರೆ. ಶಿಶು ಪೀಡಕರು ಇಂತಹವುಗಳನ್ನು ಗಮನಿಸುತ್ತಿರುತ್ತಾರೆ. ತಾವೇ ಮುಂದಾಗಿ ಈ ಎಲ್ಲಾ ಫೋಟೋಗಳನ್ನು ಲೈಕ್ ಮಾಡುವುದು, ಗುಡ್, ಗ್ರೇಟ್ ಎಂದು ಕಾಮೆಂಟ್ ಮಾಡಿ ಮಕ್ಕಳ ಮನಸ್ಸನ್ನು ಗೆದ್ದು ಇ–ಮೇಲ್ ಅಥವಾ ವಾಟ್ಸ್‌ಆಪ್ ನಂಬರ್ ಪಡೆದುಕೊಳ್ಳುತ್ತಾರೆ. ಮರೆಯಬೇಡಿ, ಶಿಶುಪೀಡಕರು ಮಕ್ಕಳನ್ನು ಗಾಳಕ್ಕೆ ಸಿಕ್ಕಿಸಲು ತಿಂಗಳುಗಟ್ಟಲೆ ಕಾಯಬಲ್ಲರು. ಮಕ್ಕಳು ತಮ್ಮ ಇ–ಮೇಲ್ ವಿಳಾಸ ಅಥವಾ ವಾಟ್ಸ್‌ಆಪ್ ನಂಬರ್ ಕೊಟ್ಟರೆ ಶಿಶು ಪೀಡಕರ ಬಲೆಗೆ ಬಿದ್ದಂತೆಯೇ!

ತಮ್ಮ ಗಾಳಕ್ಕೆ ಬಿದ್ದ ಮಕ್ಕಳ ಬಗ್ಗೆ ಶಿಶುಪೀಡಕರು ಎಷ್ಟು ಸಂಶೋಧನೆ ಮಾಡಿರುತ್ತಾರೆ ಎಂದರೆ ಮಕ್ಕಳ ಪೋಷಕರ ವಿವರಗಳು, ಗೆಳೆಯ/ಗೆಳತಿಯರ ವಿವರ, ಶಿಕ್ಷಕರ ವಿವರ ಹಾಗೂ ಮಕ್ಕಳ ವಿಳಾಸ ಮತ್ತು ಮೊಬೈಲ್ ನಂಬರ್‌ಗಳನ್ನು ಸಂಗ್ರಹಿಸಿರುತ್ತಾರೆ. ಒಂದು ಮಗುವಿನ ಮೇಲೆ ಹತೋಟಿ ಸಾಧಿಸುವ ಮೊದಲು ಆ ಮಗುವಿನ ಎಲ್ಲಾ ಗೆಳೆಯರ ಪರಿಚಯ ಮಾಡಿಕೊಂಡಿರುತ್ತಾರೆ ಹಾಗೂ ವಿವರಗಳನ್ನು ಪಡೆದುಕೊಂಡಿರುತ್ತಾರೆ.

ಬಾಲಕ ಅಥವಾ ಬಾಲಕಿ ತನ್ನೊಂದಿಗೆ ಗೆಳೆತನ ಬೆಳೆಸಿಕೊಂಡಿದ್ದಾರೆ ಎಂದು ಅರಿತ ನಂತರ ಶಿಶು ಪೀಡಕರು ತಮ್ಮ ಆಟವನ್ನು ಆಡಲು ಪ್ರಾರಂಭಿಸುತ್ತಾರೆ. ಮಕ್ಕಳ ಯಾವುದೋ ಒಂದು ತಪ್ಪನ್ನು ಹುಡುಕಿ ಬ್ಲ್ಯಾಕ್‌ಮೇಲ್ ಶುರು ಮಾಡುತ್ತಾರೆ. ನಗ್ನ ಚಿತ್ರಗಳನ್ನು ಕಳಿಸುವಂತೆ ಕೇಳುವುದಲ್ಲದೆ, ನಗ್ನವಾಗಿ ವಿಡಿಯೋ ಕರೆಮಾಡಲು ಒತ್ತಾಯಿಸುತ್ತಾರೆ. ಶಿಶುಪೀಡಕರ ಮಾತಿಗೆ ಮರುಳಾಗಿ ಅಥವಾ ಭಯ ಪಟ್ಟು ಮಕ್ಕಳು ಅವರ ನಿರ್ದೇಶನದಂತೆ ಕರೆ ಮಾಡಿದರೆ, ಅವುಗಳನ್ನು ರೆಕಾರ್ಡ್ ಮಾಡಿಕೊಂಡು ವಿವಿಧ ರೀತಿಯಲ್ಲಿ ಶೋಷಣೆ ಮಾಡಲು ಪ್ರಾರಂಭಿಸುತ್ತಾರೆ. ಇದರಿಂದ ಮಕ್ಕಳ ಆತ್ಮವಿಶ್ವಾಸ ಕುಗ್ಗಿ, ಮಾನಸಿಕ ನೋವು ಆತಂಕ ಅವರಲ್ಲಿ ಮೂಡುತ್ತದೆ. ಸಾಮಾಜಿಕ ಜಾಲತಾಣಗಳನ್ನು ಬ್ಲಾಕ್ ಮಾಡಿ, ತಮ್ಮ ಅಕೌಂಟ್ ಡಿಲೀಟ್ ಮಾಡಿ ಶಿಶು ಪೀಡಕರಿಂದ ಮುಕ್ತರಾಗಲು ಮಕ್ಕಳು ಯತ್ನಿಸುತ್ತಾರೆ. ಆದರೆ ಅದು ತಪ್ಪು ಕಲ್ಪನೆ. ಶಿಶು ಪೀಡಕರು ಮಕ್ಕಳ ಪೋಷಕರ ದೂರವಾಣಿಗೆ, ಮಕ್ಕಳ ಗೆಳೆಯರ ದೂರವಾಣಿಗೆ ಪದೇ ಪದೇ ಕರೆಮಾಡಿ ತಮ್ಮ

ದುರುದ್ದೇಶ ಈಡೇರುವವರೆಗೂ ಪ್ರಯತ್ನ ಪಡುತ್ತಲೇ ಇರುತ್ತಾರೆ. ಹಣಕ್ಕಾಗಿ ಕೆಲವು ಪೀಡಕರು ಒತ್ತಾಯಿಸಿದರೆ, ಮತ್ತೆ ಕೆಲವು ಶಿಶು ಪೀಡಕರು ಲೈಂಗಿಕ ಲಾಭಕ್ಕಾಗಿ ಒತ್ತಾಯಿಸುತ್ತಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಶಿಶುಪೀಡಕರ ಜಾಲಕ್ಕೆ ಸಿಕ್ಕು ಸಾವಿರಾರು ಮಕ್ಕಳು ಪರಿತಪಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಗೆ ಸಿಕ್ಕಿ ಬಿದ್ದಲ್ಲಿ ಮಕ್ಕಳು ಈ ವಿಚಾರವನ್ನು ಕಡ್ಡಾಯವಾಗಿ ಪೋಷಕರಿಗೆ ಅಥವಾ ಶಿಕ್ಷಕರಿಗೆ ತಿಳಿಸಲೇಬೇಕು. ಶಿಶು ಪೀಡಕರು ಮಕ್ಕಳ ಮನದಲ್ಲಿ ಅಪರಾಧಿ ಮನೋಭಾವವನ್ನು ಉಂಟು ಮಾಡಿರುತ್ತಾರೆ. ಅದು ಅವರ ಒಂದು ತಂತ್ರ. ತಾವೇನೂ ತಪ್ಪು ಮಾಡಿಲ್ಲ ಎಂಬ ಭಾವನೆ ಮಕ್ಕಳಲ್ಲಿ ಇರಬೇಕು. ತಾವು ತಮ್ಮ ನಗ್ನಫೋಟೋ ಕಳಿಸಿ ಬಿಟ್ಟಿದ್ದೇವೆ, ಅಂತರಂಗದ ಭಾವನೆಗಳನ್ನು ಹಂಚಿಕೊಂಡಿದ್ದೇನೆ ಎಂದು ಚಿಂತಿಸಲೇಬಾರದು. ಅದಕ್ಕೆ ಮೊದಲು ಇಂತಹ ಬೇಡಿಕೆ ಬಂದ ತಕ್ಷಣವೇ ಅಂತಹ ವ್ಯಕ್ತಿಗಳನ್ನೇ ಬ್ಲಾಕ್ ಮಾಡಬೇಕು. ಪ್ರತಿಕ್ರಿಯಿಸಲೇಬಾರದು.

ಮರೆಯಬೇಡಿ, ಶಿಶುಪೀಡಕರು ಪುರುಷರು ಮಾತ್ರವಲ್ಲ, ಮಹಿಳೆಯರೂ ಇದ್ದಾರೆ. ಕೆಲವೊಮ್ಮೆ ಹಣದ ಲಾಭಕ್ಕಾಗಿ ಒಂದು ತಂಡವೇ ಜಾಲತಾಣಗಳಲ್ಲಿ ಕೆಲಸ ಮಾಡುತ್ತಿರುತ್ತದೆ.

**ಇದಕ್ಕೇನು ಪರಿಹಾರ?**

ಮಕ್ಕಳನ್ನು ಜಾಲತಾಣಗಳಲ್ಲಿ ಶಿಶುಪೀಡಕರಿಂದ ರಕ್ಷಿಸಲು ನಮ್ಮಲ್ಲಿ ಹಲವಾರು ಕಾನೂನುಗಳಿವೆ.

ಮಕ್ಕಳ ದುರುಪಯೋಗವನ್ನು ತಡೆಯಬೇಕೆಂದು ವಿಶ್ವ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪರಿಚ್ಛೇದ 19 ತಿಳಿಸಿದೆ.

1. ಮಾಹಿತಿ ತಂತ್ರಜ್ಞಾನ (IT) ಕಾಯಿದೆ, 2000 ಸೆಕ್ಷನ್ 67B ಮಕ್ಕಳ ಲೈಂಗಿಕ ಅವಹೇಳನ, ನಗ್ನತೆ, ಅಗೌರವ ಹೊಂದಿರುವ ವಿಷಯವನ್ನು ಇಂಟರ್ನೆಟ್‌ನಲ್ಲಿ ಪ್ರಕಟಿಸುವುದನ್ನು, ವರ್ಗಾಯಿಸುವುದನ್ನು ಮಾಡಿದವರಿಗೆ ತೀವ್ರವಾದ ಶಿಕ್ಷೆ ಹಾಗೂ ದಂಡವನ್ನು ವಿಧಿಸುತ್ತದೆ.



2. ಮಕ್ಕಳನ್ನು ಯಾವುದೇ ವಿಧದಲ್ಲಿ ಲೈಂಗಿಕವಾಗಿ ಶೋಷಿಸುವುದು, ಮಕ್ಕಳ ಲೈಂಗಿಕ ಚಿತ್ರಗಳನ್ನು ಮೊಬೈಲ್, ಟ್ಯಾಬ್, ಲ್ಯಾಪ್‌ಟಾಪ್, ಕಂಪ್ಯೂಟರ್, ಕ್ಯಾಮೆರಾ, ಹಾರ್ಡ್‌ಡಿಸ್ಕ್ ಗಳಲ್ಲಿ ಇಟ್ಟುಕೊಳ್ಳುವುದು ಮತ್ತು ಮಕ್ಕಳಿಗೆ ಈ ಮೂಲಕ ಕಿರುಕುಳ ನೀಡುವುದನ್ನು POCSO ಕಾನೂನು ನಿಷೇಧಿಸಿದೆ.

## ನೀವು ಜಾಲತಾಣಗಳಲ್ಲಿ ಮಾಡಬೇಕಿರುವ ಕೆಲವು ಪ್ರಮುಖ ಕೆಲಸಗಳು ಹಾಗೂ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು

- ಯಾವುದೇ ಕಾರಣಕ್ಕೂ ಅಪರಿಚಿತರನ್ನು ಗೆಳೆಯರನ್ನಾಗಿ ಮಾಡಿಕೊಳ್ಳಬೇಡಿ.
- ನಿಮ್ಮ ಅಗತ್ಯ ವಿವರಗಳನ್ನು ಮಾತ್ರ ಅಪ್ಲೋಡ್ ಮಾಡಿ.
- ನಿಮ್ಮ ಕ್ಲೋಸ್ ಅಪ್ ಫೋಟೋಗಳನ್ನು ಅಪ್ಲೋಡ್ ಮಾಡಲೇಬೇಡಿ.
- ನಿಮ್ಮ ಫೋಟೋ, ಬರಹಗಳಿಗೆ ಜಾಸ್ತಿ ಲೈಕ್ಸ್ ಬರಲಿಲ್ಲ ಎಂದು ಯಾವುದೇ ಕಾರಣಕ್ಕೂ ಬೇಸರ ಪಟ್ಟು ದುಡಕಬೇಡಿ.

- ನೀವು ಬೇರೆಯವರ ಫೋಟೋ, ಬರಹ, ಫಾರ್ವರ್ಡ್‌ಗಳಿಗೆ ಕಾಮೆಂಟ್ ಮಾಡುವಾಗ ಎಚ್ಚರವಹಿಸಿ.

- ನಿಮ್ಮ ಆಪ್ತರು, ಇಷ್ಟರು, ಗೆಳೆಯ ಗೆಳತಿಯರು ಕೇಳಿದರೆಂದು ನಿಮ್ಮ ಬೆತ್ತಲೆ ಫೋಟೋ, ವಿಡಿಯೋ ತೆಗೆದು ಕೊಳ್ಳಬೇಡಿ ಮತ್ತು ಯಾರಿಗೂ ಕಳುಹಿಸಬೇಡಿ. ಬಹಳ ಮುಖ್ಯವಾಗಿ ನೀವೂ ಕೂಡಾ ಯಾರಲ್ಲಿಯೂ ಇಂತಹ ಬೇಡಿಕೆ ಇಡಬೇಡಿ. ಇವು ಸೈಬರ್ ಅಪರಾಧವಾಗುತ್ತದೆ.

- ಏನಾದರೂ ತೊಂದರೆ ಆಗುತ್ತಿದೆ ಎನಿಸಿದರೆ ಮರೆಯದೆ ಹಿರಿಯರಿಗೆ ತಿಳಿಸಿ. .

- ಯಾವುದಾದರೂ ಆಟ, Application ಡೌನ್ಲೋಡ್ ಮಾಡಲು I agree ಒತ್ತುವ ಮೊದಲು ಅಲ್ಲಿರುವ ಷರತ್ತುಗಳನ್ನು ಕಡ್ಡಾಯವಾಗಿ ಓದಿ.

- ನಿಮ್ಮದೇ ಫೋಟೋ ಹಾಕಿ ಯಾರಾದರೂ ಪ್ರೊಫೈಲ್ ತೆರೆದಿದ್ದರೆ ನಿಮ್ಮ ಗೆಳೆಯರಿಗೆ, ಪೋಷಕರಿಗೆ ವಿಚಾರ ತಿಳಿಸಿ. ಏನೂ ಆಗುವುದಿಲ್ಲ ಎಂದು ಉಡಾಫೆ ಮಾಡಬೇಡಿ.

- ನಿಮ್ಮ ಬೆಸ್ಟ್ ಫ್ರೆಂಡ್ ಆಗಿರಲಿ, ಸೋದರ ಸಂಬಂಧಿಗಳೇ ಆಗಿರಲಿ ಯಾರಿಗೂ ನಿಮ್ಮ ಪಾಸ್ ವರ್ಡ್ ನೀಡಬೇಡಿ.

- ಅಂಗಡಿಗಳಲ್ಲಿ ಮೊಬೈಲ್‌ಗೆ ರಿಚಾರ್ಜ್ ಮಾಡಿಸುವಾಗ ನಂಬಿಕೆ ಇರುವ ಅಂಗಡಿಯಲ್ಲಿಯೇ ಮತ್ತು ನಂಬಿಕಸ್ಥರಲ್ಲಿಯೇ ಮಾಡಿಸಿ. ನಿಮ್ಮ ನಂಬರ್ ದುರುಪಯೋಗವಾಗದಂತೆ ನೋಡಿಕೊಳ್ಳಿ.

- ಮೊಬೈಲ್ ನಲ್ಲಿ ಸೆಲ್ಫಿ ತೆಗೆಯುವಾಗ ಎಚ್ಚರದಿಂದ ಇರಿ. ಸಾಹಸ ಮಾಡಲು ಹೋಗಿ ಅಪಾಯಕ್ಕೆ ಒಳಗಾಗಬೇಡಿ.

- ಜಾಲತಾಣಗಳಲ್ಲಿ ಇತರರನ್ನು ತಮಾಷೆ ಮಾಡುವುದಾಗಲೀ ಹೀಯಾಳಿಸುವುದಾಗಲೀ ಮಾಡಬೇಡಿ. ಸ್ಕ್ರೀನ್ ಶಾಟ್ ತೆಗೆದುಕೊಂಡು ನಿಮ್ಮನ್ನು ಬೆದರಿಸಲು, ಬ್ಲ್ಯಾಕ್ ಮೇಲ್ ಮಾಡಲು ಅದನ್ನು ಉಪಯೋಗಿಸಬಹುದು.

- ನಿಮ್ಮ ತರಗತಿಯ ಯಾವುದಾದರೂ ಹುಡುಗಿ ಅಥವಾ ಹುಡುಗ ಫ್ರೆಂಡ್ ರಿಕ್ವೆಸ್ಟ್ ಕಳಿಸಿದ್ದಾರೆ ಎಂದರೆ ಅದನ್ನು ಒಪ್ಪಿಕೊಳ್ಳುವ ಮೊದಲು ಆ ಗೆಳೆಯರನ್ನು ಕೇಳಿ ಅವರು ನಿಜವಾಗಿಯೂ ಫ್ರೆಂಡ್ ರಿಕ್ವೆಸ್ಟ್ ಕಳಿಸಿದ್ದಾರೆಯೇ? ಎಂದು ಅದು ಬೇರಾರೋ ಕಳ್ಳತನದಲ್ಲಿ ಸೃಷ್ಟಿಸಿದ ಫೇಕ್ ಪ್ರೊಫೈಲ್ ಕೂಡಾ ಆಗಿರಬಹುದು.

- ಗೆಳೆಯ ಗೆಳತಿಯರ ಮೇಲೆ ಕೋಪ ಮಾಡಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಸ್ಟೇಟಸ್ ಹಾಕಬೇಡಿ. ನೀವು ಬಳಸುವ ಭಾಷೆ, ಅಪ್ಲೋಡ್ ಮಾಡುವ ಚಿತ್ರಗಳನ್ನು ಹಲವಾರು ಜನ ಗಮನಿಸುತ್ತಿರುತ್ತಾರೆ. ಅದನ್ನೇ ಬಳಸಿಕೊಂಡು ನಿಮ್ಮನ್ನು ಸಮಾಧಾನ ಮಾಡುವ ರೀತಿ ಸೈಬರ್ ಕಳ್ಳರು ನಿಮ್ಮ ಜೀವನದಲ್ಲಿ ಪ್ರವೇಶಿಸಬಹುದು.

- ಸಾಮಾಜಿಕ ಜಾಲತಾಣಗಳು, ಅಂತರ್ಜಾಲಗಳನ್ನು ಶಿಕ್ಷಣ, ಹೊಸ ವಿಚಾರಗಳನ್ನು ತಿಳಿದುಕೊಳ್ಳಲು ಬಳಸಿ. ಅಪಾಯಕ್ಕೆ ತುತ್ತಾಗಬೇಡಿ.

# ಅಧ್ಯಾಯ– 5

# ನಿಮ್ಮ ಶಾಲೆ ಮಕ್ಕಳ ಸ್ನೇಹಿ ಆಗಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಿ.

ಸಾಕಷ್ಟು ಸಂಖ್ಯೆಯ ಮಕ್ಕಳು, ಅದರಲ್ಲೂ ಹದಿ ವಯಸ್ಸಿನ ಮಕ್ಕಳಿಗೆ ತಮ್ಮ ಶಾಲಾ ಕಾಲೇಜಿನಲ್ಲಿನ ಅನುಭವಗಳು ಅಷ್ಟೊಂದು ಸಂತೋಷಕರವಾಗಿರುವುದಿಲ್ಲ. ಬೈಗುಳ, ಹೊಡೆತ, ತಾರತಮ್ಯ, ಅವಮಾನ, ಲೈಂಗಿಕಶೋಷಣೆ, ಕಿರುಕುಳಕ್ಕೆ ಹೆದರಿರುತ್ತಾರೆ ಅಥವಾ ಕುಗ್ಗಿ ಹೋಗಿರುತ್ತಾರೆ. ಯಾವುದೇ ವಿದ್ಯಾರ್ಥಿಗೆ ಹೀಗೆ ಆಗಬಾರದು.

ನಿಮ್ಮ ಶಾಲೆ ಮತ್ತು ಕಾಲೇಜುಗಳಲ್ಲಿ ಯಾವುದೇ ಮಗುವಿಗೆ ಇಂತಹ ಅನುಭವ, ಅದರಲ್ಲೂ ಲೈಂಗಿಕ ಶೋಷಣೆ ಆಗದಂತೆ ನಾವು ವಿದ್ಯಾರ್ಥಿಗಳು ಏನು ಮಾಡಬಹುದು, ನಮ್ಮ ಶಾಲೆಗಳನ್ನು ಎಲ್ಲ ಮಕ್ಕಳ ಸ್ನೇಹಿ ಆಗಿಸಲು ಹಾಗೂ 'ಮಕ್ಕಳ ಲೈಂಗಿಕ ಶೋಷಣೆ ದುರುಪಯೋಗ ಮುಕ್ತಶಾಲೆ, ಕಾಲೇಜು' ಎಂದು ಘೋಷಿಸಿಕೊಳ್ಳಲು ಏನೇನು ಮಾಡಬಹುದು ಎಂದು ನೋಡೋಣ.

ನಿಮ್ಮ ಶಾಲೆ / ಕಾಲೇಜಿನಲ್ಲಿ ಮಕ್ಕಳ ರಕ್ಷಣಾ ನೀತಿ ಮತ್ತು ಮಕ್ಕಳ ರಕ್ಷಣಾ ಸಮಿತಿ ಇರುವುದನ್ನು ಖಚಿತಪಡಿಸಿಕೊಳ್ಳಿ, ಹಾಗೆಯೇ ಶಾಲೆಯಲ್ಲಿ ಈ ಕುರಿತು ಪ್ರಚಾರ ಮಾಡಲು ಮತ್ತು ಸಮಿತಿಯ ಸದಸ್ಯರ ವಿವರಗಳನ್ನು ನೀವೂ ತಿಳಿದುಕೊಳ್ಳಿ ಮತ್ತು ಇತರರಿಗೆ ತಿಳಿಸಿ.

- ಶಾಲೆ / ಕಾಲೇಜಿನಲ್ಲಿ ಮಕ್ಕಳ ಹಕ್ಕುಗಳು ಹಾಗೂ POCSO ಮತ್ತಿತರ ಸಂಬಂಧಿತ ಕಾಯಿದೆಗಳನ್ನು ಕುರಿತು ಎಲ್ಲ ವಿದ್ಯಾರ್ಥಿಗಳಿಗೆ ಪರಿಚಯ ಕಾರ್ಯಕ್ರಮ ಏರ್ಪಡಿಸಲು ಶಾಲೆ / ಕಾಲೇಜು ಮುಖ್ಯಸ್ಥರಿಗೆ ತಿಳಿಸಿ. ಹಾಗೆ ಆಯೋಜಿಸಿದ ಕಾರ್ಯಕ್ರಮದಲ್ಲಿ ಭಾಗವಹಿಸಿ.

- ಶಾಲೆ / ಕಾಲೇಜಿನಲ್ಲಿ ನುರಿತ ಆಪ್ತಸಮಾಲೋಚಕರನ್ನು ನೇಮಿಸಲು ಕೋರಿಕೆ ನೀಡಿ. ಈಗಾಗಲೇ ಆಪ್ತಸಮಾಲೋಚಕರು ಇದ್ದಲ್ಲಿ ಅವರಿಂದ ಸೂಕ್ತ ಮಾಹಿತಿಗಳನ್ನು ಪಡೆದುಕೊಳ್ಳಿ. ಆಪ್ತಸಮಾಲೋಚನೆ ಎಂದರೆ ಶಿಕ್ಷೆಯ ಇನ್ನೊಂದು ರೂಪ ಎಂಬ ವಿದ್ಯಾರ್ಥಿಗಳಲ್ಲಿರುವ ತಪ್ಪು ಕಲ್ಪನೆಯನ್ನು ಹೋಗಲಾಡಿಸಿ.

- ಶಾಲೆ / ಕಾಲೇಜಿಗೆ ಬರುವ ಎಲ್ಲ ವಿದ್ಯಾರ್ಥಿಗಳನ್ನು ಸಮನಾಗಿ ಪರಿಗಣಿಸಿ. ಎಲ್ಲಿಯೂ ಯಾರೂ ತಾರತಮ್ಯಕ್ಕೆ ಈಡಾಗದಂತೆ ಶಾಲಾಕ್ರಮಗಳು, ವಿಧಾನಗಳನ್ನು ಜಾರಿ ಮಾಡಲು ಕಣ್ಗಾವಲು ಹಾಕಲು ವಿನಂತಿಸಿ. ಮಕ್ಕಳೂ ಇದರಲ್ಲಿ ಮುಖ್ಯ ಪಾತ್ರವಹಿಸಬಹುದು.

- POCSO ಕಾಯಿದೆಯ ಮುಖ್ಯಾಂಶಗಳಿರುವ ಭಿತ್ತಿಪತ್ರ ಮತ್ತು ಕರಪತ್ರವನ್ನು ಎಲ್ಲರಿಗೂ ವಿತರಿಸಲು ಸೂಚಿಸಿ ಮತ್ತು ನೀವೂ ಅದನ್ನು ಓದಿ. ನಿಮ್ಮ ಗುಂಪಿನಲ್ಲಿ ಚರ್ಚೆ ಮಾಡಿ.

- ಯಾರಾದರೂ ನಿಮಗೆ ಕಿರುಕುಳ ನೀಡಿದರೆ, ಕಿರುಕುಳ ಮಾಡಲು ಪ್ರಯತ್ನಿಸಿದರೆ, ಹಾಗೆ ಮಾಡಬೇಡಿ ಎಂದು ನೇರವಾಗಿ ಅವರಿಗೆ ಹೇಳಿ. ಇಂತಹ ನಡವಳಿಕೆ ನನಗೆ ಇಷ್ಟವಾಗುವುದಿಲ್ಲ ಎಂದು ಅವರಿಗೆ ದೃಢವಾಗಿ ಹೇಳಿ. ಅದು ಸಹವಿದ್ಯಾರ್ಥಿಗಳು, ಹಿರಿಯ ವಿದ್ಯಾರ್ಥಿಗಳು ಅಥವಾ ಶಿಕ್ಷಕವರ್ಗ, ಆಡಳಿತದ ವ್ಯಕ್ತಿಗಳು ಯಾರೇ ಆಗಿರಲಿ ನಿಮ್ಮ ನಿಲುವನ್ನು ಸ್ಪಷ್ಟಪಡಿಸಿ. ಇದನ್ನು ನೀವು ಬರಹದ ಮೂಲಕ ದೂರಿನ ರೂಪದಲ್ಲಿ ನಿಮ್ಮ ಶಾಲಾ/ಕಾಲೇಜು ಮುಖ್ಯಸ್ಥರಿಗೆ ನೀಡಿ.

- ಯಾರಾದರೂ ಇತರ ವಿದ್ಯಾರ್ಥಿಗಳಿಗೆ ಕಿರುಕುಳ, ಅದರಲ್ಲೂ ಲೈಂಗಿಕ ಕಿರುಕುಳ ಕೊಡುವುದು ತಿಳಿದರೆ, ನೀವು ಸುಮ್ಮನಿರಬೇಡಿ. ಈ ಕುರಿತು ನೀವು ನಂಬುವ ಶಿಕ್ಷಕ ವರ್ಗದವರಿಗೆ ತಕ್ಷಣ ತಿಳಿಸಿ.

- ನಿಮಗೆ ಲೈಂಗಿಕ ಕಿರುಕುಳದ ಅನುಭವವಾದರೆ, ಶಾಲೆ/ಕಾಲೇಜಿನಲ್ಲಿ ಸ್ಥಾಪಿಸಲಾಗಿರುವ ಮಕ್ಕಳ ರಕ್ಷಣಾ ಸಮಿತಿಗೆ ಬರಹದ ಮೂಲಕ ದೂರು ಕೊಡಿ. ನಿಮ್ಮ ಪೋಷಕರಿಗೆ ಈ ಕುರಿತು ತಿಳಿಸಿ.

- ಯಾರಾದರೂ ಇತರ ವಿದ್ಯಾರ್ಥಿಗಳು, ನಿಮ್ಮ ಸ್ನೇಹಿತರು ಅಥವಾ ಶಿಕ್ಷಕವರ್ಗದವರು ನಿಮ್ಮ ಸ್ನೇಹವನ್ನು ದುರುಪಯೋಗಪಡಿಸಿಕೊಳ್ಳಲು, ಲೈಂಗಿಕವಾಗಿ ಜೊತೆಯಲ್ಲಿ ಸಮಯ ಕಳೆಯಲು ಕೇಳಿದರೆ ಅಥವಾ ಪ್ರೀತಿಮಾಡು ಎಂದೋ, ಮದುವೆಯಾಗೋಣ ಎಂದೋ ಕೇಳಿದರೆ, ಅವರಿಗೆ ಈ ವಯಸ್ಸಿನಲ್ಲಿ ಅದು ಬೇಡ ಎಂದು ಸ್ಪಷ್ಟವಾಗಿ ಹೇಳಿ.

- ನಿಮ್ಮ ಮೇಲೆ ಆದ ಅಥವಾ ಆಗಬಹುದಾದ ಲೈಂಗಿಕ ಶೋಷಣೆ, ಹಲ್ಲೆ, ದೂಷಣೆಯನ್ನು ನಿರ್ಲಕ್ಷಿಸಬೇಡಿ. ತಡವಾದರೆ ಅದು ದೊಡ್ಡದಾಗಿ ಬೆಳೆಯಬಹುದು.

- ಯಾರಾದರೂ ಆನ್‌ಲೈನ್ ಅಥವಾ ಸೈಬರ್ ಸಾಧನದ ಮೂಲಕ (ಫೇಸ್‌ಬುಕ್, ಇಮೇಲ್, ಟ್ವಿಟ್ಟರ್, ವಾಟ್ಸ್‌ಆಪ್ ಇತ್ಯಾದಿ) ನಿಮ್ಮನ್ನು ಹೀಯಾಳಿಸಿದರೆ, ಲೈಂಗಿಕವಾಗಿ ಛೇಡಿಸಿದರೆ, ಹೆದರಿಸಿದರೆ ಅಥವಾ ಲೈಂಗಿಕ ಬೇಡಿಕೆಯನ್ನು ಇಟ್ಟರೆ, ಈ ಕುರಿತು ತಕ್ಷಣವೇ ನಿಮ್ಮ ಪೋಷಕರಿಗೆ ತಿಳಿಸಿ ಮತ್ತು ಶಾಲೆ/ಕಾಲೇಜಿನಲ್ಲಿ ದೂರು ನೀಡಿ.

- ಶಾಲೆ / ಕಾಲೇಜುಗಳ ಆಡಳಿತ, ಮತ್ತು ವಿದ್ಯಾರ್ಥಿಗಳ ಸಂಘಗಳು ಮಕ್ಕಳ ರಕ್ಷಣೆ ಕುರಿತು ಅದರಲ್ಲೂ ಲೈಂಗಿಕ ಶೋಷಣೆ ವಿರುದ್ಧ ಗೋಷ್ಠಿಗಳು, ಭಾಷಣ, ಭಿತ್ತಿಪತ್ರ ಪ್ರದರ್ಶನ ಏರ್ಪಡಿಸಿ, ಚರ್ಚೆಗಳಲ್ಲಿ ಎಲ್ಲರೂ ಯಾವುದೇ ಆತಂಕ, ಭಯವಿಲ್ಲದೆ ತೆರೆದ ಮನಸ್ಸಿನಿಂದ ಭಾಗವಹಿಸುವಂತಹ ವಾತಾವರಣ ಸೃಷ್ಟಿಸಬೇಕು.

- ಮಕ್ಕಳನ್ನು ಲೈಂಗಿಕವಾಗಿ ಶೋಷಿಸಿದರೆ ತೀವ್ರವಾದ ಶಿಕ್ಷೆಗಳನ್ನು ವಿಧಿಸಲಾಗುತ್ತದೆ ಎಂಬುದನ್ನು POCSO ಕಾಯಿದೆ ಮತ್ತು ಇತರ ಕಾಯಿದೆಗಳ ವಿಚಾರಗಳನ್ನು ಎಲ್ಲರಿಗೂ ಅರ್ಥವಾಗುವಂತೆ ವಿವರಿಸಿ. POCSO ಕಾಯಿದೆ ಕುರಿತು ಪತ್ರಿಕೆಗಳಲ್ಲಿ ಬರುವ ವರದಿ, ಲೇಖನಗಳನ್ನು ಓದಿ ಚರ್ಚಿಸಿ.

- ನಿಮ್ಮ ಶಾಲೆ ಲೈಂಗಿಕ ಶೋಷಣೆ ಮುಕ್ತ ಶಾಲೆ ಎಂದು ಘೋಷಿಸಿಕೊಳ್ಳಲು ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು, ಆಡಳಿತ ಮಂಡಳಿ ಈ ಎಲ್ಲರೂ ಸಮಾನ ಮನಸ್ಸಿನಿಂದ ಭಾಗವಹಿಸಿದರೆ ಮಾತ್ರ ಸಾಧ್ಯ ಎಂದು ತಿಳಿಯಪಡಿಸಿ.

- ಸೈಬರ್ ಸುರಕ್ಷತೆ ಮತ್ತು ಹೊಸದಾಗಿ ಹುಟ್ಟಿಕೊಳ್ಳುವ ಮೋಸದ ವಿಧಾನಗಳ ವಿರುದ್ಧ ಎಚ್ಚರಿಕೆಯಿಂದಿರುವುದನ್ನು ತಿಳಿಯಿರಿ.

- ಹತ್ತಿರದ ಪೊಲೀಸ್ ಠಾಣೆಗೆ ಹೋಗಿ 'ತೆರೆದ ಮನೆ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಕ್ಕಳ ವಿಶೇಷ ಪೊಲೀಸ್ ಘಟಕ ಮತ್ತು 'ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿ' ಗಳನ್ನು ಕುರಿತು ತಿಳಿದುಕೊಳ್ಳಿ.

- ನಿಮ್ಮ ಶಾಲೆ / ಕಾಲೇಜಿನಲ್ಲಿ ಲೈಂಗಿಕ ಶೋಷಣೆ ಪ್ರಕರಣ ವರದಿಯಾದಲ್ಲಿ, ಶೋಷಣೆಗೆ ಗುರಿಯಾದ ಮಗುವಿನ ಗುರುತು ಬಹಿರಂಗವಾಗದಂತೆ ಎಚ್ಚರಿಕೆ ವಹಿಸಿ. ಆ ಮಗುವಿಗೆ ಬೇಕಾದ ಎಲ್ಲ ಸಹಾಯ ಸೌಲಭ್ಯಗಳನ್ನು ಏರ್ಪಾಡು ಮಾಡಿ, ನೈತಿಕ, ಮಾನಸಿಕ ಬೆಂಬಲ ನೀಡಿ.

## ಈ ಚಟುವಟಿಕೆಗಳನ್ನು ಮಾಡೋಣ :

### ಚಟುವಟಿಕೆ–1

**ಮಕ್ಕಳು ಲೈಂಗಿಕ ಶೋಷಣೆ, ಲೈಂಗಿಕ ಹಲ್ಲೆಗಳಂತಹ ಯಾವುದೇ ಘಟನೆಗಳಿಗೆ ಗುರಿಯಾಗುವ ಸಾಧ್ಯತೆ ಇದ್ದರೆ ಏನು ಮಾಡಬಹುದು/ ಹೇಗೆ ರಕ್ಷಿಸಿಕೊಳ್ಳಬಹುದು? ವಿವರಣೆ ನೀಡಿ.**

### ಚಟುವಟಿಕೆ–2

**ಮಕ್ಕಳ ವಿರುದ್ಧ ಲೈಂಗಿಕ ಅಪರಾಧಗಳು ನಡೆದಾಗ ಯಾರಿಗೆಲ್ಲಾ ದೂರು ನೀಡಬಹುದು, ನಿಮಗಿರುವ ರಕ್ಷಣಾ ವ್ಯವಸ್ಥೆಗಳ ಬಗ್ಗೆ ಪಟ್ಟಿ ಮಾಡಿ.**

ಚಟುವಟಿಕೆ–3

**ಲೈಂಗಿಕ ಅಪರಾಧಗಳಾದಾಗ ಮಕ್ಕಳಿಗೆ ಸಹಾಯ ಮಾಡಲು ಸರ್ಕಾರದಿಂದ ನೇಮಿಸಲು ಕೋರಬಹುದಾದ ವ್ಯಕ್ತಿಗಳು ಯಾರು?**

ಚಟುವಟಿಕೆ–4

**ಬೆಂಬಲ ವ್ಯಕ್ತಿಗಳ ಸಹಾಯ ಪಡೆಯಲು ಯಾರನ್ನು/ಯಾವ ಸಂಸ್ಥೆಯನ್ನು ಸಂಪರ್ಕಿಸಬೇಕು?**

**ಮಕ್ಕಳೇ ನೆನಪಿಡಿ –** ಮಕ್ಕಳಿಗೆ ಯಾರಾದರೂ ಲೈಂಗಿಕವಾಗಿ ತೊಂದರೆಕೊಟ್ಟರೆ, ತೊಂದರೆ ಕೊಡಲು ಬಂದರೆ, ಇಲ್ಲಿ ಮಕ್ಕಳ ತಪ್ಪು ಯಾವುದೂ ಇಲ್ಲ. ಮಕ್ಕಳ ಮೇಲೆ ಯಾರು ಬಲವಂತ ಮಾಡಲು ಮುಂದಾಗುತ್ತಿದ್ದಾರೋ ಅವರದೇ ತಪ್ಪು. POCSO ಕಾಯಿದೆಯಲ್ಲಿ ಮಕ್ಕಳ ಸ್ನೇಹಿ ವ್ಯವಸ್ಥೆಗಳ ಮೂಲಕ ಮಕ್ಕಳ ಹೇಳಿಕೆಗಳನ್ನು ಪಡೆಯಲು ಸೂಚಿಸಿದೆ. ಮಕ್ಕಳಿಗೆ ಎಲ್ಲಿ ಇಷ್ಟವಿರುತ್ತದೆಯೋ, ಎಲ್ಲಿ ಮಕ್ಕಳಿಗೆ ಸುರಕ್ಷಿತ ಭಾವನೆ ಇರುತ್ತದೋ ಅಲ್ಲಿಯೇ ಅವರು ಹೇಳಿಕೆಗಳನ್ನು ಪೊಲೀಸರಿಗೆ ನೀಡಬಹುದು. ಇಷ್ಟೇ ಅಲ್ಲ, ನ್ಯಾಯಾಧೀಶರ ಮುಂದೆ ಯಾವುದೇ ಅಂಜಿಕೆ, ಒತ್ತಡವಿಲ್ಲದೆ ಮುಕ್ತವಾಗಿ ಹೇಳಿಕೆಗಳನ್ನು ವಿವರವಾಗಿ ನೀಡಬಹುದಾಗಿದೆ. ಇಂತಹ ಅಪರಾಧಗಳಾದಾಗ ಜಿಲ್ಲಾ ಮಕ್ಕಳ ರಕ್ಷಣಾ ಘಟಕದವರು ಚಿಕಿತ್ಸೆಗಾಗಿ ಹಣಕಾಸಿನ ನೆರವನ್ನು ನೀಡುತ್ತಾರೆ. ಹಾಗಾಗಿ ಅವರನ್ನೂ ಸಂಪರ್ಕ ಮಾಡುವುದು ಒಳ್ಳೆಯದು.

ಬಹಳ ಮುಖ್ಯವಾಗಿ ಲೈಂಗಿಕ ಕಿರುಕುಳ, ಆಕ್ರಮಣ, ಹಿಂಸೆ, ತೊಂದರೆ ಕೊಟ್ಟಿರುವ ವ್ಯಕ್ತಿ ಎಂದು ಯಾರ ಮೇಲೆ ಆಪಾದನೆ, ಪ್ರಕರಣ ದಾಖಲಾಗಿರುತ್ತದೋ, ಅಂತಹ ವ್ಯಕ್ತಿ ತನ್ನಿಂದ ಅಪರಾಧವಾಗಿಲ್ಲ ಎಂದು ಸಾಬೀತುಪಡಿಸಬೇಕು. ಅಪರಾಧಕ್ಕೆ ಈಡಾದ ಮಗು ತನಗೇನಾಯಿತು, ಏಕೆ ಅದು ತೊಂದರೆಯಾಯಿತು ಎಂದು ಹೇಳಿಕೆ ಕೊಟ್ಟರೆ ಸಾಕು. ಅವಶ್ಯಕತೆ ಬಿದ್ದರೆ ಮಾತ್ರ ಮಗು ಮತ್ತು ಮಗುವಿನ ಕಡೆಯವರು ಸಾಕ್ಷ್ಯಗಳನ್ನು ಒದಗಿಸಬೇಕಾಗುತ್ತದೆ.

ಯಾವ ಮಕ್ಕಳೂ ಕೂಡ ಲೈಂಗಿಕವಾಗಿ ತೊಂದರೆಗೆ ಒಳಗಾಗಬಾರದು. ಹಾಗೇನಾದರೂ ಆಗಿದ್ದೇ ಅದಲ್ಲಿ ಹೆದರದೇ ಸಹಾಯ ಪಡೆಯುವುದು ನಿಮ್ಮೆಲ್ಲರ ಹಾಗೂ ಎಲ್ಲಾ ಮಕ್ಕಳ ಹಕ್ಕು. ತಿಳಿಯಿತಲ್ಲವೇ ಲೈಂಗಿಕ ಅಪರಾಧಗಳಿಂದ ನಿಮ್ಮನ್ನು ನೀವು ರಕ್ಷಿಸಿಕೊಳ್ಳಲು, ರಕ್ಷಿಸಲು ವ್ಯವಸ್ಥೆಗಳಿವೆ, ಕಾನೂನಿದೆ. ಹೆದರುವ ಅಗತ್ಯವೇ ಇಲ್ಲ.

**ಲೈಂಗಿಕ ಶೋಷಣೆಗೆ ಒಳಗಾದಲ್ಲಿ ಯಾವುದೇ ಸಂಕೋಚ, ಹೆದರಿಕೆಯಿಲ್ಲದೆ ದೂರು ಕೊಡಿ, ಇತರ ಮಕ್ಕಳಿಗೆ ಮಾದರಿಯಾಗಿ. ಎಲ್ಲರೂ ಒಟ್ಟಾಗಿ ಮಕ್ಕಳನ್ನು ರಕ್ಷಿಸೋಣ. ಮಕ್ಕಳ ಹಕ್ಕುಗಳನ್ನು ಗೌರವಿಸೋಣ.**

